ರಂಜನೆ ಬೋಧನೆ ಪ್ರಚೋದನೆ

ಗೌ ರಿ

ಲಂಕೇಶ್

ಆಗಸ್ಟ್ 13, 2008 ರೂ. 12/-



ಕೇರಳ ಮಾತೆ

SRS ಟ್ರಾವೆಲ್ಸ್ ವಂಚನೆಯ ಜಾಲ

ಒಲಂಪಿಕ್ಸ್ ನಮಗೇಕೆ ಪದಕ ಸಿಗುತ್ತಿಲ್ಲ?

ಆದಿ ಉಡುಪಿ ಬೆತ್ತಲಾದ ಪೋಲೀಸರು



ಊರಿಗೇ ಮಾರಿಯಾದ ವಿನೋದ್ ಆಳ್ವಾ!



ಕಳ್ಳ ರಾಘವೇಶನಿಗೆ ಅಮೃತಮಹಲ್ ಕಾಯುವ ಕೆಲಸ!

ಗರ್ಭದಲ್ಲಿರುವ ಕೂಸೇ ತಾಯಿಗೆ ಭಾರವಾದಾಗ

ಮೊನ್ನೆ ಬೆಳಗ್ಗೆ ಕಾಫಿ ಕುಡಿಯುತ್ತಾ ಪೇಪರ್ ಓದುತ್ತಾ ಕೂತಿದ್ದ ನಾನು ಇದ್ದಕ್ಕಿದ್ದಂತೆ "ಮಮ್ಮಿ, ನಾನು ಹುಟ್ಟುವ ಮುನ್ನ ನಾನು ಕುರುಡಿ, ಕೆಪ್ಪಿ ಕುಂಟಿಯಾಗಿ ಹುಟ್ಟುತ್ತೇನೆ ಎಂದು ನಿನಗೆ ಗೊತ್ತಾಗಿದ್ದರೆ ನೀನು ಏನು ಮಾಡುತ್ತಿದ್ದೆ?" ಎಂದು ಕೇಳಿದೆ.

ನನ್ನ ಪ್ರಶ್ನೆಯಿಂದ ಆದಾಕ್ಕಾದ ಅಮ್ಮ "ಬೆಳ್ಳಂಬೆಳಗ್ಗೆ ಇದೆಂತಹ ಪ್ರಶ್ನೆ ನಿಂದೂ ಶಾರೂ. ಬಿಡ್ತು ಅನ್ನು" ಎಂದರು.



"ನನಗೆ ಹಾಗೇನೂ ಆಗಿಲ್ಲ ಮಮ್ಮಿ, ಇನ್ನು ಬಿಡ್ತು ಎಲ್ಲಿಂದ ಬಂತು?! ನಾನು ಕೇಳಿದ್ದೇನೆಂದರೆ ಆಕಸ್ಮಾತ್ ನಾನು ಅಂಗವಿಕಲೆ ಯಾಗಿರುತ್ತೇನೆ, ಬುದ್ಧಿಮಾಂದ್ಯ ಳಾಗಿರುತ್ತೇನೆ, ಹುಟ್ಟಿದ ಕೆಲ ವರ್ಷಗಳಲ್ಲೇ ಸಾಯುತ್ತೇನೆ ಅಥವಾ ನನ್ನ ಜೀವನದುದ್ದಕ್ಕೂ ಯಾವುದೂ ನನ್ನ ಅರಿವಿಗೆ ಬಾರದೆ, ಕೈಕಾಲುಗಳ ಚಲನವೇ ಇಲ್ಲದೆ ಹಾಸಿಗೆಯಲ್ಲೇ ಕಳೆ ಯುತ್ತೇನೆ ಎಂದು ನಿನ್ನ ಗರ್ಭ ದಲ್ಲೇ ನಾಗಿದ್ದಾಗ ನಿನಗೆ ಗೊತ್ತಾ ಗಿದ್ದರೆ ನನ್ನನ್ನು ಈ ಜಗತ್ತಿಗೆ ತರುತ್ತಿದ್ದೆಯೋ ಅಥವಾ ಗರ್ಭ ಪಾತವನ್ನು ಆಯ್ಕೆ ಮಾಡಿಕೊಳ್ಳು ತ್ತಿದ್ದೆಯೋ? ಅದು ಪ್ರಶ್ನೆ" ಎಂದೆ.

"ನೋಡಿ ಇವಳ ತಲೆ ಹರಟೆ. ಇಂಥ ಪ್ರಶ್ನೆಗಳನ್ನು ಕೇಳಿ ಉತ್ತರಿಸು ಅನ್ನುತ್ತಾಳೆ. ನನಗೆ ಸಾಕುಸಾಕಾಗಿದೆ" ಎಂದು ಅಮ್ಮ ಅಪ್ಪನಿಗೆ ದೂರಿದರು. ನನ್ನ ಪ್ರವೃತ್ತಿ ಗೊತ್ತಿರುವ ಅಪ್ಪ ನನ್ನತ್ತ ನಕ್ಕು "ಅದೇನು ಅಂತ ಸರಿಯಾಗಿ ಅವಳಿಗೆ ಹೇಳು ಶಾರೂ. ಅವಳಿಗೂ ಅರ್ಥ ಆಗಬೇಕಲ್ವಾ?" ಎಂದರು.


"ನೋಡಪ್ಪಾ, ಪೇಪರ್‌ನಲ್ಲಿ ಇವತ್ತು ಒಂದು ವರದಿ ಬಂದಿದೆ. ಮುಂಬೈನಲ್ಲಿ ಹರೇಶ್ ಮತ್ತು ನಿಕೇತಾ ಎಂಬುವವರು ಲವ್ ಮ್ಯಾರೇಜ್ ಆಗಿದ್ದಾರಂತೆ. ಆತ ಸ್ಟಾಕ್ ಬ್ರೋಕರ್, ಆಕೆ ಶಾಲಾ ಟೀಚರ್. ಇಬ್ಬರಿಗೂ 31 ವರ್ಷ ವಯಸ್ಸು. ತಮಗೊಂದು ಮಗುಬೇಕು, ಅದು ಹೆಣ್ಣಾಗಿರಲಿ, ಗಂಡಾಗಿರಲಿ ಅದರ ಬಗ್ಗೆ ಚಿಂತೆ ಇಲ್ಲ; ಆದರೆ ಅದು ಆರೋಗ್ಯವಂತ ಮಗುವಾಗಿದ್ದರೆ ಸಾಕು ಎಂದು ಇಷ್ಟಪಟ್ಟಿದ್ದವರು. ಈಗ ನಿಕೇತಾ 25 ವಾರಗಳ ಗರ್ಭಿಣಿಯಾಗಿದ್ದಾಳೆ. ಮೊನ್ನೆ ತನ್ನ ಗರ್ಭದಲ್ಲಿರುವ, ತಾನು ಕಾತುರದಿಂದ ಕಾಯುತ್ತಿರುವ ಮಗು ಆರೋಗ್ಯವಾಗಿಯೇ ಎಂದು ದೃಢಪಡಿಸಿಕೊಳ್ಳಲು ವೈದ್ಯರ ಬಳಿ ಹೋದಾಗ ಆಕೆಗೆ ಶಾಕ್ ಆಯಿತು" ಎಂದೆ.

ನಾನು ಹೇಳುತ್ತಿದ್ದುದನ್ನು ಕೇಳಿ ಕುತೂಹಲಗೊಂಡಿದ್ದ ಅಮ್ಮ "ಯಾಕೆ? ಏನಾಗಿತ್ತಂತೆ?" ಎಂದು ಕೇಳಿದರು.

"ಹಾಗೆ ಬಾ ದಾರಿಗೆ" ಎಂದು ನಕ್ಕ ನಾನು "ನಾನು ನಿನ್ನ ಪ್ರಶ್ನೆಗೆ ಉತ್ತರಿಸುವ ಮುನ್ನ ನಾನು ಆಗಲೇ ಕೇಳಿದ ಪ್ರಶ್ನೆಗೆ ನೀನು ಮೊದಲು ಉತ್ತರಿಸಬೇಕು" ಎಂದು ಅಮ್ಮನಿಗೆ ಚಾಲೆಂಜ್ ಮಾಡಿದೆ.

"ಹೆತ್ತವರಿಗೆ ಹೆಗ್ಗಣಾನೂ ಮುದ್ದು ಎಂಬ ಗಾದೆ ಮಾತು ಇದೆ ಶಾರೂ" ಎಂದರು ಅಮ್ಮ.

"ಅದು ಮಗುವಿನ ಅಂದಚೆಂದ ಕುರಿತಂತೆ ಇರೋ ಗಾದೆ. ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ, ಮಗುವಿನ ಆರೋಗ್ಯ ಅದರ ಭವಿಷ್ಯದ ಬಗ್ಗೆ ಹೇಳುತ್ತಿದ್ದೇನೆ. ನಾಳೆ ಹುಟ್ಟಲಿರುವ ಮಗು ತನ್ನ ಜೀವನದುದ್ದಕ್ಕೂ ಎಲ್ಲದಕ್ಕೂ ತಾಯಿಯನ್ನೇ ಅವಲಂಬಿಸುತ್ತದೆ ಎಂದು ಗೊತ್ತಾದರೆ ಏನು ಮಾಡುತ್ತೀಯಾ?" ಎಂದು ನನ್ನ ಪ್ರಶ್ನೆಯನ್ನು ಇನ್ನೊಂದು ರೀತಿಯಲ್ಲಿ ಕೇಳಿದೆ.



"ನೋಡು, ಹಳೇ ಕನ್ನಡ ಸಿನಿಮಾವೊಂದರಲ್ಲಿ ಬಳ್ಳಿಗೆ ಹೂವು ಭಾರವೇ, ಮರಕ್ಕೆ ಕಾಯಿ ಭಾರವೇ, ಹೆತ್ತ ತಾಯಿಗೆ ಮಗುವು ಭಾರವೆ ಎಂಬ ಹಾಡೊಂದಿತ್ತು. ಹಾಗೇನೇ ಯಾವ ತಾಯಿಗೂ ಆಕೆಯ ಮಗು ಭಾರವಾಗಿರುವುದಿಲ್ಲ, ಗರ್ಭಪಾತ ಮಾಡಿಸಿ ಕೊಳ್ಳೋದು ಪಾಪದ ಕೃತ್ಯ" ಎಂದರು.

"ಮಮ್ಮಿ, ಪಾಪ ಪುಣ್ಯ ಎಂದೆಲ್ಲ ಕೂತರೆ ನಮ್ಮ ಚರ್ಚೆ ಈ ವಾರ ಪೂರ್ತಿ ನಡೆಯುತ್ತೆ..." ಎಂದು ನಾನು ಹೇಳುತ್ತಿದ್ದಾಗ ಮಧ್ಯ ಪ್ರವೇಶಿಸಿದ ಅಪ್ಪ

"ನಿಕೇತಾಳ ಗರ್ಭದಲ್ಲಿನ ಮಗುಗೆ ಏನಾಗಿದೆ?" ಎಂದರು.

"ಹಾ, ಗರ್ಭದಲ್ಲಿರುವ ಆ ಭ್ರೂಣಕ್ಕೆ ಈಗಲೇ ಹಾರ್ಟ್ ಪ್ರಾಬ್ಲಮ್ ಇದೆಯಂತೆ. ಅದು ಜನಿಸಿದ ಕೂಡಲೇ ಅದಕ್ಕೆ ಆಪರೇಷನ್ ಮಾಡಿ pacer ಅನ್ನು ಅಳವಡಿಸಬೇಕಂತೆ. ಅದಾದ ಮೇಲೂ ಆ ಮಗುವಿನ ಜೀವನದುದ್ದಕ್ಕೂ ಆಟ, ಓಟವಿರಲಿ ಅದಕ್ಕೆ ಎಂದೂ ನಡೆಯಲೂ ಬರುವುದಿಲ್ಲವಂತೆ. ಅಷ್ಟೇ ಅಲ್ಲ, ಅದು ಹುಟ್ಟಿದ ನಂತರ ಯಾವ ಕ್ಷಣದಲ್ಲಾದರೂ ಸಾವನ್ನಪ್ಪುವ ಸಾಧ್ಯತೆ ಇದೆಯಂತೆ. ಅಂತಹ ಮಗುವಿಗೆ ಜನ್ಮ ನೀಡಿ ಅತ್ತ ಮಗುವೂ ಸಂತೋಷವಾಗಿರದೆ, ಇತ್ತ ತಾನೂ ಪ್ರತಿಕ್ಷಣ ಕಣ್ಣೀರಿಡಬೇಕಾಗುತ್ತದೆ. ಆದ್ದರಿಂದ ತನ್ನ ಗರ್ಭದಲ್ಲಿರುವ ಭ್ರೂಣ ಜನ್ಮ ತಾಳುವುದಕ್ಕೆ ಮುನ್ನ ಗರ್ಭಪಾತ ಮಾಡಿಕೊಳ್ಳುವುದೇ ವಾಸಿ ಎಂಬ ನಿರ್ಧಾರಕ್ಕೆ ನಿಕೇತಾ ಬಂದಳಂತೆ" ಎಂದೆ.

"ತನ್ನ ಪಾಲಿಗೆ ಬಂದದ್ದೇ ಪಂಚಾಮೃತ ಎಂದು ಸ್ವೀಕರಿಸಲು ಆಕೆಗೆ ಏನಾಗಿದೆ? ಪಾಪಿ" ಎಂದು ಅಮ್ಮ ನಿಟ್ಟುಸಿರಿಟ್ಟರು.

"ಮಮ್ಮಿ, ಪಾಪಪುಣ್ಯದ ಕಲ್ಪನೆಗಳೊಂದಿಗೆ ಕಾಲ ಮತ್ತು ತಂತ್ರಜ್ಞಾನವೂ ಬದಲಾಗಿದೆ. ನೀನು ಹಳೇ ಸಿನಿಮಾದ ಹಾಡು ಹೇಳಿದೆ. ಹೊಸ ಸಿನಿಮಾದ ಹಾಡು ಏನು ಗೊತ್ತಾ? "ಈ ಪಾಪಿ ದುನಿಯಾ"! ನಿನ್ನಮ್ಮ ಎಂಟು ಮಕ್ಕಳಿಗೆ ಜನ್ಮ ನೀಡಿದ್ದರು. ಅಪ್ಪನ ಅಮ್ಮ ಆರು ಮಕ್ಕಳ ತಾಯಿ ಆಗಿದ್ದರು. ಆದರೆ ನೀನು ಹಡೆದದ್ದು ಇಬ್ಬರನ್ನು ಮಾತ್ರ. ಈಗ ಅದೆಷ್ಟೋ ಜನರಿಗೆ ಒಂದು ಆರೋಗ್ಯವಂತ ಮಗುವನ್ನೇ ನೋಡಿಕೊಳ್ಳುವುದು ಕಷ್ಟವಾಗಿದೆ, ಅಂಥದ್ದರಲ್ಲಿ ಅವರ ಒಂದು ಮಗುವೂ ಅಂಗ ವಿಕಲವಾಗಿ ಹುಟ್ಟಿದರೆ ಏನು ಮಾಡಬೇಕು? ನಿಕೇತಾಳ ಪರಿಸ್ಥಿತಿಯಲ್ಲಿ ನಾನು ಇದ್ದಿದ್ದರೆ ಆಕೆಯ ನಿರ್ಧಾರಕ್ಕೆ ನಾನೂ ಬರುತ್ತಿದ್ದೆ" ಎಂದೆ.

ನಾನು ಹೇಳಿದ್ದನ್ನು ಅಮ್ಮ ಜೀರ್ಣಿಸಿಕೊಳ್ಳುತ್ತಿದ್ದಾಗ ಅಪ್ಪ,

"ನೀನು ಹೇಳೋದು ಸರಿ ಶಾರೂ. ಇತ್ತೀಚೆಗೆ ಅದ್ಯಾರೋ ಪೊಲೀಸ್ ಒಬ್ಬ ತನ್ನ ಹೆಂಡತಿಯ ತವರಿನ ಮನೆ ಮೇಲೆ ದಾಳಿ ಮಾಡಿ ತನ್ನ ಅತ್ತೆ, ಮಾವ, ಹೆಂಡತಿ, ಮೈದುನನ ಮೇಲೆ ದಾಳಿ ಮಾಡಿದನಲ್ಲ.... ಆತನ ವರ್ತನೆಗೆ ವರದಕ್ಷಿಣೆ ಒಂದು ಕಾರಣವಾಗಿದ್ದರೆ, ಆತನ ಹೆಂಡತಿಗೆ ಹುಟ್ಟಿದ್ದ ಬುದ್ಧಿಮಾಂದ್ಯ ಮಗುವಿನ ಬಗೆಗಿನ ಅಸಮಾಧಾನವೂ ದೊಡ್ಡ ಕಾರಣವಾಗಿತ್ತು ಅನಿಸುತ್ತದೆ" ಎಂದರು.

"ಅಪ್ಪ ಅಂತಹ ಅದೆಷ್ಟು ಪ್ರಕರಣಗಳು ನಡೆದಿವೆ ಗೊತ್ತಾ? ತಾವು ಯಾವ ತಪ್ಪು ಮಾಡದಿದ್ದರೂ ಅಂತಹ ಮಕ್ಕಳನ್ನು ಹಡೆದಿದ್ದಕ್ಕೆ ಗಂಡನಿಂದ ತಿರಸ್ಕೃತ ಗೊಂಡವರು ಅದೆಷ್ಟೋ ಮಹಿಳೆಯರಿದ್ದಾರೆ. ಅತ್ತ ಗಂಡನ ಪ್ರೀತಿಯೂ ಇಲ್ಲ, ಇತ್ತ ಅಂತಹ ಮಕ್ಕಳ ಪಾಲನೆ, ಪೋಷಣೆಗೆ ನೆರವೂ ಇಲ್ಲದಂತಾಗಿ ಅದೆಷ್ಟೋ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಿನಗೆ ಗೊತ್ತಾ ಅಪ್ಪ, ಹಿರಿಯ ರಾಜಕಾರಣಿಯೊಬ್ಬರ ಮಗಳು ಬುದ್ಧಿಮಾಂದ್ಯ ಮಗುವಿಗೆ ಜನ್ಮ ನೀಡಿದ ದುಃಖವನ್ನು ತಾಳಲಾರದೆ, ತಾನು ಹಡೆದಿದ್ದ ಕೂಸನ್ನು ನೋಡ ಲಾರದೆ, ಜೀವನದ ಭವಿಷ್ಯವನ್ನು ಊಹಿಸಲಾರದೆ ಆತ್ಮಹತ್ಯೆ ಮಾಡಿ ಕೊಂಡಳು. ಅಂತಹ ಪರಿಸ್ಥಿತಿಯಲ್ಲಿ ಯಾವುದು ಪಾಪ, ಯಾವುದು ಪುಣ್ಯ ಎಂದು ಅಂದಾಜಿಸುವುದು ಹೇಗೆ?" ಎಂದೆ.

ನಮ್ಮ ಈ ಸಂಭಾಷಣೆಯ ನಡು ವೆಯೇ ಅಪ್ಪ ತಿಂದಿ ತಿಂದು, ಕೋಟ್ ಧರಿಸಿ ಆಫೀಸಿಗೆ ಸಿದ್ಧವಾಗುತ್ತಾ "ಈಗಿನ ಕಾಲದಲ್ಲಿ ಗರ್ಭಪಾತ ಮಾಡಿಸಿಕೊಳ್ಳುವುದು ಅಪರೂಪವೂ ಅಲ್ಲ, ಕಾನೂನುಬಾಹಿರವೂ ಅಲ್ಲ, ನಿಕೇತಾಳನ್ನು ತಡೆಯುತ್ತಿರುವುದೇನು?" ಎಂದರು.

"ಕಾನೂನು. ನಮ್ಮ ದೇಶದ ಕಾನೂನಿನ ಪ್ರಕಾರ ಗರ್ಭ ಧರಿಸಿದ 20 ವಾರಗಳೊಳಗೆ ಗರ್ಭಪಾತ ಮಾಡಿಸಬಹುದು. ಆದರೆ ಆನಂತರ ತಾಯಿಯ ಜೀವಕ್ಕೆ ಅಪಾಯ ಇದೆ ಅಂದರೆ ಮಾತ್ರ ಮಾಡಬೇಕು. ಆಕಸ್ಮಾತ್ ಬೇರೆ ಕಾರಣಗಳಿಗೆ ಗರ್ಭಪಾತ ಮಾಡಿದರೆ ವೈದ್ಯರೂ ಏಳು ವರ್ಷಗಳ ಕಾಲ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ. ಅದಕ್ಕೆ ಈಗ ನಿಕೇತಾ ಮತ್ತು ಹರೇಶ್ ನ್ಯಾಯಾಲಯದ ಮೆಟ್ಟಿಲು ಏರಿದ್ದಾರೆ. ತನ್ನ ಜೀವಕ್ಕೆ ಅಪಾಯವಿಲ್ಲದಿದ್ದರೂ ತನ್ನ ಗರ್ಭದಲ್ಲಿರುವ ಮಗುವಿನ ಜೀವಕ್ಕೆ ಅಪಾಯ ಇದೆ, ಅದರ ಭವಿಷ್ಯ ಶೂನ್ಯವಾಗಿದೆ. ಆದ್ದರಿಂದ ಗರ್ಭಪಾತ ಮಾಡಿಸಿಕೊಳ್ಳಲು ಅನುಮತಿ ಕೊಡಬೇಕೆಂದು ಅರ್ಜಿ ಸಲ್ಲಿಸಿದ್ದಾರೆ" ಎಂದು ವಿವರಿಸಿದೆ.

"ಅದಕ್ಕೆ ನ್ಯಾಯಾಲಯ ಏನಂದಿದೆ?" ಅಮ್ಮನ ಪ್ರಶ್ನೆ.

"ನಿಕೇತಾಳನ್ನು ಇನ್ನಷ್ಟು ವೈದ್ಯಕೀಯ ಪರೀಕ್ಷೆಗಳಿಗೆ ಒಳಪಡಿಸಿದೆ. ಮುಂದಿನ ವಾರ ತೀರ್ಪು ಕೊಡಲಿದೆ. ಆದರೆ ಇದೆಂತಹ ಕಾನೂನು? ಇದನ್ನು ರೂಪಿಸಿದ್ದು ಸುಮಾರು ನಲವತ್ತು ವರ್ಷಗಳ ಹಿಂದೆ ಆಗ ಈ ಅಲ್ಟ್ರಾಸೌಂಡ್‌ನಂತಹ ತಂತ್ರಜ್ಞಾನ ಇರಲಿಲ್ಲ, ಅಷ್ಟೇ ಅಲ್ಲ, ಗರ್ಭದಲ್ಲಿರುವ ಭ್ರೂಣದಲ್ಲಿನ ನ್ಯೂನತೆಗಳು ಗೊತ್ತಾಗುವುದೇ ಅದಕ್ಕೆ 20-25 ವಾರ ಆದನಂತರ. ಪ್ರಸ್ತುತ ಸಮಾಜದೊಂದಿಗೆ, ತಂತ್ರಜ್ಞಾನದೊಂದಿಗೆ ಕಾನೂನು ಕೂಡ ಬದಲಾಗಬೇಕಲ್ಲವಾ?" ಎಂದೆ.

"ಸುಮ್ಮನಿರು. ಇವತ್ತು ಇಂತಹ ತಂತ್ರಜ್ಞಾನವನ್ನು ಉಪಯೋಗಿಸಿ ಸೈತಾನನನ್ನೂ ಸೃಷ್ಟಿಸಬಹುದಂತೆ. ಹಾಗಂತ ಕಾನೂನನ್ನು ಬದಲಾಯಿಸಿ ಪಾಪದ ಕೃತ್ಯಗಳಿಗೆ ಅನುಮತಿ ಕೊಡಬೇಕೆ?" ಎಂದು ಅಮ್ಮ ರೇಗಿದರು.

"ಆದರೆ ಇಲ್ಲಿ ಕಾನೂನೇ ನಿಕೇತಾಳ ಬದುಕಿನಲ್ಲಿ ಸೈತಾನನಂತೆ ವರ್ತಿಸುತ್ತಿದೆಯಲ್ಲಾ? ಕಾನೂನು ಇರುವುದು ಜನರಿಗೆ ನೆಮ್ಮದಿಯ ಬದುಕನ್ನು ನೀಡಲು. ಆದರೆ ಕಾನೂನೇ ನಿಕೇತಾಳಿಗೆ ಭವಿಷ್ಯ, ಸಂತೋಷ, ನೆಮ್ಮದಿಯನ್ನು ನಿರಾಕರಿಸುತ್ತದೆ ಎಂದರೆ ಅಂತಹ ಕಾನೂನು ಯಾಕಿರಬೇಕು? ಎಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯೊಬ್ಬಳಿಗೆ ತಾನು ತಾಯಿ ಆಗಬೇಕೋ ಬೇಡವೋ ಎಂದು ನಿರ್ಧರಿಸುವ ಹಕ್ಕು ಇರಬೇಕು. ಅದು ಆಕೆಯ ಭವಿಷ್ಯ, ದೇಹಕ್ಕೆ, ವೈಯಕ್ತಿಕ ಬದುಕಿಗೆ ಸಂಬಂಧಿಸಿದ್ದು. ಈಗ ಹೇಳು ಮಮ್ಮಿ, ನಿಕೇತಾಳ ನಿರ್ಧಾರ ಸರಿ ಇದೆಯೋ ಇಲ್ಲವೋ?" ಎಂದೆ.

"ಅದನ್ನು ಕೋರ್ಟ್ ನಿರ್ಧರಿಸುತ್ತೆ ಬಿಡು" ಎಂದು ಅಮ್ಮ ಉತ್ತರಿಸುವುದರಿಂದ ಜಾರಿಕೊಳ್ಳಲು ನೋಡಿದರು.

"ನಮ್ಮ ಕೋರ್ಟ್‌ನಲ್ಲಿ ನೀವೇ ಜಡ್ಜ್, ತೀರ್ಪು ನೀಡಿ Your honour" ಅಂದೆ.

"ಏನೋ, ನೀನು ಹೇಳೋದೆ ಸರಿ ಅನ್ನಿಸುತ್ತೆ" ಎಂದರು ಅಮ್ಮ ತುಂಬಾ ನಿರುತ್ಸಾಹದಿಂದ...

■ ಶಾರದೆ

ನೋ ಕಾಮೆಂಟ್ಸ್

"ನಾನು ದೇವೇಗೌಡರ ಜೊತೆಗಿದ್ದ ಕಾರಣಕ್ಕೆ ಜನಾರ್ದನ ರೆಡ್ಡಿ ನನ್ನ ಮೇಲೆ ಲಂಚ ಆರೋಪ ಮಾಡಿದರು. ನನ್ನ ಬಗ್ಗೆ ಅವರಿಗೆ ಯಾವುದೇ ತಕರಾರಿಲ್ಲವಂತೆ. ಅವರು ಒಳ್ಳೆಯ ವ್ಯಕ್ತಿ, ಶ್ರಮಪಟ್ಟು ದುಡಿದಿದ್ದಾರೆ. ಅವರ ಬಗ್ಗೆ ಹೊಟ್ಟೆಕಿಚ್ಚು ಪಡಬಾರದು"

-ಚನ್ನಿಗಪ್ಪ

"ಅಕ್ಕ ಮಹಾದೇವಿಯ ವಚನಾಂಕಿತವನ್ನು ತಿದ್ದುವ ಮೂಲಕ ಮಾತೆ ಮಹಾದೇವಿ ಪಾಪದ ಕೃತ್ಯ ಎಸಗಿದ್ದಾರೆ."

-ಡಾ.ಎಂ.ಎಂ.ಕಲಬುರ್ಗಿ

"ರಾಜಕಾರಣಿಗಳು ಹೇಗೆ ಹಣವನ್ನು ಗಳಿಸುತ್ತಾರೆ ಎಂಬುದು ಈ ರಾಷ್ಟ್ರಕ್ಕೂ ಗೊತ್ತು. ಇತ್ತೀಚಿನ ವರ್ಷಗಳಲ್ಲಿ ವಿವಿಧ ರಾಜಕೀಯ ವ್ಯಕ್ತಿಗಳು ಎಷ್ಟು ಹಣವನ್ನು ಗಳಿಸಿದ್ದಾರೆ ಎಂಬುದು ಇಡೀ ರಾಷ್ಟ್ರಕ್ಕೆ ಗೊತ್ತಿದೆ"

-ಮಾಯಾವತಿ

"ರಜನೀಕಾಂತ್ ಕನ್ನಡಿಗರ ಕ್ಷಮೆ ಕೇಳಿಲ್ಲ, ಅವರು ವಿಷಾದಿಸಿದ್ದಾರೆ"

-ಕೆ.ಬಾಲಚಂದರ್


ನಂಬಿದ್ರೆ ನಂಬಿ

"ಆಸ್ತಿ ತೆರಿಗೆ ವಿಚಾರದಲ್ಲಿ ಭಯಬೇಡ. ಸಕ್ರಮ ಶುಲ್ಕ ಸಾಮಾನ್ಯರೂ ಭರಿಸುವಷ್ಟಾಗುತ್ತದೆ"

-ಕಟ್ಟಾ ಸುಬ್ರಮಣ್ಯನಾಯ್ಡು

"ಕೆಲವು ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ರೈತರ ಪಂಪ್ ಸೆಟ್‌ಗಳಿಗೆ ಸರ್ಕಾರ ಮೀಟರ್ ಅಳವಡಿಸಲು ಮುಂದಾದಾಗ ಯಡಿಯೂರಪ್ಪನವರು 'ಮೀಟರ್ ಹಾಕಿದರೆ ರೈತರಿಗೆ ನೇಣೇ ಗತಿ' ಎಂದು ಜಾಥಾ ನಡೆಸಿದ್ದರು. ಈಗ ಮೀಟರ್ ಅಳವಡಿಸಲು ಮುಂದಾಗಿರುವ ಅವರಿಗೆ ನೈತಿಕತೆ ಇದೆಯೇ?"

-ಕೋಡಿಹಳ್ಳಿ ಚಂದ್ರಶೇಖರ್



"ಯಾವುದೇ ಬಗೆಯ ಬಸ್ ಪ್ರಯಾಣ ದರದ ಏರಿಕೆಯ ಪ್ರಸ್ತಾಪ ಸರ್ಕಾರದ ಮುಂದಿಲ್ಲ"

- ಅಶೋಕ್

"ಒರಿಸ್ಸಾದ ಬ್ರಹ್ಮಚಾರಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರಿಗೆ ಮಹಿಳೆ ಹತ್ತಿರ ಸುಳಿದರೆ ಬ್ರಹ್ಮಚರ್ಯ ವ್ರತಕ್ಕೆ ಭಂಗ ಬರುವ ಆತಂಕ ಇರುವಂತಿದೆ."

-ಪತ್ರಿಕಾ ವರದಿ



"ಜೆಡಿಎಸ್ ಏಕವ್ಯಕ್ತಿ ಪಕ್ಷ. ಕಾಂಗ್ರೆಸ್ ಮುಖಂಡರಿಗೆ ಹೋಲಿಸಿದರೆ ದೇವೇಗೌಡರೇ ವಾಸಿ. ತಮ್ಮದೇ ಹಠವಿದ್ದರೂ ವಾಸ್ತವವನ್ನು ಹೇಳಿದರೆ ಅರ್ಥ ಮಾಡಿಕೊಳ್ಳುತ್ತಾರೆ"

-ಸೋಮಣ್ಣ

ಬದುಕೆಂಬ ಇಸ್ಪೀಟ್ ಆಟದಲ್ಲಿ ಬೀಳುವ ಎಲೆಗಳು

ಬದುಕಿನ ಅರ್ಥವೇನು?

What is the meaning of life?

ನಮಗೆ ತುಂಬಾ ದುಃಖವಾದಾಗ ನಮ್ಮನ್ನು ನಾವೇ ಈ ಪ್ರಶ್ನೆ ಕೇಳಿಕೊಂಡಿರುತ್ತೇವೆ. ಮಾತ್ರವಲ್ಲ, ಅಂದು ನಮ್ಮ ದುಮ್ಮಾನಕ್ಕೆ ಕಾರಣವಾಗಿರುವುದರ ಸುತ್ತಲೇ ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿರುತ್ತೇವೆ. ಆದರೆ ಬದುಕು ಒಂದೇ ಒಂದು ಸಮಸ್ಯೆ ಅಥವಾ ವಿಷಯದ ಸುತ್ತ ತಿರುಗುವಂತದಲ್ಲ, ಆದ್ದರಿಂದ ಒಂದು ರೀತಿಯಲ್ಲಿ ಸರಳವೂ ಆದ, ಇನ್ನೊಂದು ರೀತಿಯಲ್ಲಿ ಸಂಕೀರ್ಣವೂ ಆದ 'ಬದುಕು' ಎಂಬುದರ ಬಗ್ಗೆಯೇ ನಾವು ಸ್ಪಷ್ಟವಾಗಿ ಮತ್ತು ಸಂಪೂರ್ಣವಾಗಿ ಚಿಂತಿಸಿರುವುದಿಲ್ಲ ಅನ್ನಿಸುತ್ತೆ, ಹಾಗಿರುವಾಗ ಅದರ ಅರ್ಥವಾದರೂ ನಮಗೆ ಗೊತ್ತಾಗುವುದು ಹೇಗೆ?

ಬದುಕು ಎಂಬುದು ಅದೆಷ್ಟೇ ಗೊಂದಲ, ತಳಮಳ, ಹಪಾಹಪಿಗಳಿಂದ ಕೂಡಿದ್ದರೂ ಅದೆಲ್ಲ ಹೆಚ್ಚಾಗುವುದು ಸಾವು ಎಂಬ ನಿಶ್ಚಿತ ಸತ್ಯ ಎದುರಾದಾಗ. ಎಲ್ಲ ಜೀವನೋತ್ಸಾಹದೊಂದಿಗೆ, ಆಶೆಗಳೊಂದಿಗೆ, ಭವಿಷ್ಯದ ಆಕಾಂಕ್ಷೆಗಳೊಂದಿಗೆ ಜೀವಿಸುತ್ತಿರುವ ವ್ಯಕ್ತಿಗೆ ಅಕಸ್ಮಾತ್ ವೈದ್ಯರು "ನೀನು ಹೆಚ್ಚೆಂದರೆ ಮೂರು ತಿಂಗಳಿಂದ ಆರು ತಿಂಗಳು ಮಾತ್ರ ಬದುಕಿರುತ್ತೀಯಾ" ಎಂದರೆ ಆತನಿಗೆ ಏನನ್ನಿಸಬೇಕು? ಆತ ಏನು ಮಾಡಬೇಕು? ಉಳಿದಿರುವ ಹಲವೇ ಹಲವು ದಿನಗಳಲ್ಲಿ ಆತ ಏನನ್ನು ಮಾಡಿ ಮುಗಿಸಬೇಕು? ತನ್ನ ಮಕ್ಕಳಿಗೆ ಏನೆಂದು ಹೇಳಬೇಕು? ತನ್ನ ನಿರ್ಗಮನದ ನಂತರವೂ ತನ್ನ ಮಕ್ಕಳ ಬಾಳಿನಲ್ಲಿ ಹೇಗೆ ಪಾತ್ರ ವಹಿಸುವಂತಾಗಬೇಕು? ಸಾವು ತನ್ನ ದೇಹವನ್ನೇ ಹೊಕ್ಕಿರುವಾಗ ಉಳಿದ ತನ್ನ ಜೀವಿತ ಕಾಲವನ್ನು ಹೇಗೆ ನಗುನಗುತ್ತಾ ಕಳೆಯಬೇಕು? ಎಲ್ಲಕ್ಕಿಂತ ಮುಖ್ಯವಾಗಿ ತನ್ನ ಬದುಕಿನ ಅರ್ಥವೇನು ಎಂಬ ಪ್ರಶ್ನೆಗೆ ಎಲ್ಲಿಂದ ಉತ್ತರ ಪಡೆಯಬೇಕು?


ಇಂತಹ ಹಲವಾರು ಪ್ರಶ್ನೆಗಳು ಕಾಡಿದ್ದು ರ್ಯಾಂಡಿ ಪೌಶ್ ಎಂಬ 47 ವರ್ಷದ ಪ್ರೊಫೆಸರ್ ಅನ್ನು. ಅಮೆರಿಕದ ಖ್ಯಾತ ವಿಶ್ವವಿದ್ಯಾಲಯದಲ್ಲಿ ಜನಪ್ರಿಯ ಪ್ರೊಫೆಸರ್ ಆಗಿದ್ದ, ಪ್ರೀತಿಯ ಹೆಂಡತಿ ಮತ್ತು ಮೂರು ಮಕ್ಕಳೊಂದಿಗೆ ನೆಮ್ಮದಿಯ ಜೀವನ ಸಾಗಿಸುತ್ತಿದ್ದ, ವರ್ಚ್ಯೂಯೆಲ್ ರಿಯಾಲಿಟಿ (virtual reality) ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದ ರ್ಯಾಂಡಿ ದೇಹದಲ್ಲಿ ಒಂದು ವರ್ಷದ ಹಿಂದೆ ಪ್ಯಾನ್‌ಕ್ರಿಯಾಟಿಕ್ ಕ್ಯಾನ್ಸರ್ ಕಾಣಿಸಿಕೊಂಡಿತು. ತಕ್ಷಣವೇ ರ್ಯಾಂಡಿ ಚಿಕಿತ್ಸೆ ಪಡೆಯಲಾರಂಭಿಸಿದರಾರೂ ಅದು ಫಲಕಾರಿಯಾಗಲಿಲ್ಲ, ಆಗ ಕೈಚೆಲ್ಲಿದ ವೈದ್ಯರು "ಹೆಚ್ಚೆಂದರೆ ಆರು ತಿಂಗಳ ಕಾಲ ಬದುಕುತ್ತೀಯಾ" ಎಂದು ರ್ಯಾಂಡಿಗೆ ಹೇಳಿದರು.

ಆಗ ರ್ಯಾಂಡಿ ತನ್ನನ್ನು ಕೇಳಿಕೊಂಡಿದ್ದೇ "ಬದುಕಿನ ಅರ್ಥವೇನು?" ಎಂಬ ಪ್ರಶ್ನೆಯನ್ನು. ಆ ಪ್ರಶ್ನೆಗೆ ಸಿಕ್ಕ ಉತ್ತರವೇ ಆತನ 'ಕೊನೆಯ ಉಪನ್ಯಾಸ'ವಾಯಿತು. ಅದೇ ಈ ಅಂಕಣದ ತಿರುಳು.

ರ್ಯಾಂಡಿ ಪ್ರೊಫೆಸರ್ ಆಗಿದ್ದ ಕಾರ್ನಜಿ ಮೆಲ್ಲನ್ ವಿಶ್ವವಿದ್ಯಾಲಯದಲ್ಲಿ ಒಂದು ಸಂಪ್ರದಾಯವಿದೆ. ಅದೇನೆಂದರೆ ನಿವೃತ್ತಿ ಹೊಂದುತ್ತಿರುವ ಪ್ರೊಫೆಸರ್‌ಗಳು ತಮ್ಮ ವಿಶ್ವವಿದ್ಯಾಲಯದ ದಿನಗಳಲ್ಲಿ ಕಂಡುಕೊಂಡ ವೈಜ್ಞಾನಿಕ ಜ್ಞಾನ, ಸಂಶೋಧಿಸಿದ ವಿಚಾರಗಳ ಸತ್ಯಾಸತ್ಯತೆಗಳು, ಇಂತಹದ್ದೇ ವಿಚಾರಗಳನ್ನು ಕುರಿತಂತೆ `Last Lecture' ಕೊಡುತ್ತಾರೆ. ಅದು ನಿಜವಾಗಲೂ ಅವರ ಕೊನೆಯ ಉಪನ್ಯಾಸ ಆಗಿರುವುದಿಲ್ಲ, ಯಾಕೆಂದರೆ ಅವರು ನಿವೃತ್ತಿ ಹೊಂದಿದ ನಂತರವೂ ಹಲವಾರು ವರ್ಷಗಳ ಕಾಲ ಸಂಶೋಧಕರ ವಲಯದಲ್ಲಿ ಸಕ್ರಿಯವಾಗಿಯೇ ಬದುಕಿರುತ್ತಾರೆ.


ಆದರೆ ರ್ಯಾಂಡಿ ವಿಚಾರದಲ್ಲಿ ಸಂದರ್ಭ ಬೇರೆಯದಾಗಿತ್ತು, ಆತ ಬದುಕಿನಿಂದಲೇ ನಿವೃತ್ತಿ ಹೊಂದಲಿದ್ದರು. ಆಗ 'ಕೊನೆಯ ಉಪನ್ಯಾಸ' ನೀಡಲು ಅವರನ್ನು ಆಹ್ವಾನಿಸಲಾಯಿತು. ಸುಮಾರು ಒಂದೂವರೆ ಗಂಟೆಯಷ್ಟು ಸುದೀರ್ಘವಾದ ಈ ಬೋಧನೆ ಇಂಟರ್‌ನೆಟ್‌ನ ಯೂಟ್ಯೂಬ್‌ನಲ್ಲಿ ತುಂಬ ಜನಪ್ರಿಯವಾಯಿತು. ಎಷ್ಟರಮಟ್ಟಿಗೆ ಎಂದರೆ ಅದು ಕಾಡ್ಗಿಚ್ಚಿನಂತೆ ಎಲ್ಲೆಡೆ ಹರಿದಾಡಿ ಇಲ್ಲಿಯವರೆಗೆ ಆರು ಮಿಲಿಯನ್ ಜನ ಅದನ್ನು ನೋಡಿದ್ದಾರೆ ಎಂದು ಅಂದಾಜಿಸಲಾಗಿದೆ. ಸಹಜವಾಗಿಯೇ ಅದು ಮಾಧ್ಯಮದವರ ಗಮನಕ್ಕೂ ಬಂದು ರ್ಯಾಂಡಿ ಪೌಶ್ ಬಗ್ಗೆ ಹಲವಾರು ಲೇಖನಗಳು, ಸಂದರ್ಶನಗಳು, ಟಿವಿ ಕಾರ್ಯಕ್ರಮಗಳು ಪ್ರಸಾರಗೊಂಡವು.

ವೈದ್ಯರು ರ್ಯಾಂಡಿಗೆ ಆರು ತಿಂಗಳ ಭವಿಷ್ಯ ನುಡಿದಿದ್ದರೂ, ಅವರ ಮೇಲೆ ಪ್ರಕೃತಿ ಕರುಣೆ ಬೀರಿ ಅದನ್ನು ಹನ್ನೊಂದು ತಿಂಗಳ ಕಾಲ ವಿಸ್ತರಿಸಿತು. ಕಳೆದ ವಾರ ಜುಲೈ 27ರಂದು ರ್ಯಾಂಡಿ ಕೊನೆಯುಸಿರೆಳೆದರು. ಆದರೆ









ಕೊನೆಗಳಿಗೆವರೆಗೂ ರ್ಯಾಂಡಿ ತನ್ನ ಜೀವನೋತ್ಸಾಹವನ್ನೂ ಹಾಸ್ಯಪ್ರಜ್ಞೆಯನ್ನೂ ಜೀವಂತವಾಗಿಯೇ ಇಟ್ಟುಕೊಂಡಿದ್ದರು. ಸಾಯುವ ಮುನ್ನ ತನ್ನ ಹೆಂಡತಿ, ಮಕ್ಕಳು, ತಾಯಿ, ಸ್ನೇಹಿತರಿಂದ ಸುತ್ತುವರೆದಿದ್ದ ರ್ಯಾಂಡಿ ಸಂತೋಷಗೊಂಡು "ಬದುಕು ಎಷ್ಟು ಚೆನ್ನಾಗಿದೆ. ಸಾಯುವುದರ ಬಗ್ಗೆ ಸ್ವಲ್ಪ ಬೇಸರವಾಗುತ್ತಿದೆ" ಎಂದ.

ಆಗ ಆತನ ಆಪ್ತಮಿತ್ರ ಸೀಬೋಲ್ಟ್ "ಇದೆಲ್ಲವನ್ನು ಬಿಟ್ಟುಹೋಗುವುದರ ಬಗ್ಗೆ ನಿನಗೆ ಬೇಸರವಾಗದಿರುವುದು ಮುಖ್ಯ" ಎಂದರು.

"ಆ ವಿಷಯದ ಬಗ್ಗೆ ಚಿಂತಿಸಿ ನಿನಗೆ ಹೇಳುತ್ತೇನೆ" ಎಂದ ರ್ಯಾಂಡಿ. ಅದು ಆತನ ಕೊನೆ ಮಾತಾಗಿತ್ತು...

ರ್ಯಾಂಡಿ ನೀಡಿದ್ದ 'ಕೊನೆಯ ಉಪನ್ಯಾಸ' ಈಗ ಪುಸ್ತಕ ರೂಪದಲ್ಲೂ ಪ್ರಕಟಗೊಂಡು ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ. (ಆ ಪುಸ್ತಕಕ್ಕೆ ಪ್ರಕಾಶಕರು ನೀಡಿದ್ದು ಆರು ಮಿಲಿಯನ್ ಡಾಲರ್‌ಗಳನ್ನು!) ಆ ಉಪನ್ಯಾಸ ಎಷ್ಟು ಜನರ ಮನಸ್ಸನ್ನು ತಾಕಿದೆ ಎಂದರೆ ಪ್ರತಿಷ್ಠಿತ 'ಟೈಮ್' ವಾರಪತ್ರಿಕೆ 'ವಿಶ್ವದ ಅತಿ ಪ್ರಭಾವಶಾಲಿ 100 ವ್ಯಕ್ತಿಗಳು' ಪಟ್ಟಿಯಲ್ಲಿ ರ್ಯಾಂಡಿಯನ್ನು ಸೇರಿಸಿದೆ.

ರ್ಯಾಂಡಿಯ ಈ 'ಕೊನೆಯ ಉಪನ್ಯಾಸ'ದಲ್ಲಿ ಏನಿದೆ? ಈ ಉಪನ್ಯಾಸ ನನ್ನ ಗಮನಕ್ಕೆ ಬಂದಿದ್ದು ಸುಮಾರು ಎರಡು ತಿಂಗಳ ಹಿಂದೆ. ಅದರಲ್ಲಿ ಬಹಳಷ್ಟು ಅಮೆರಿಕದಲ್ಲಿನ ಜೀವನ ಶೈಲಿ, ಆಧುನಿಕ ಸಂಸ್ಕೃತಿ ಮತ್ತು ವಿಷಯಗಳ ಸುತ್ತ ರ್ಯಾಂಡಿ ಮಾತನಾಡಿದ್ದಾರೆ. ಆದರೆ ಅದೆಲ್ಲದರ ತಳಹದಿಯಲ್ಲಿ ಇರುವುದು ಒಂದು ಬದುಕಿನ ಅರ್ಥ. ರ್ಯಾಂಡಿ ತಾವು ಬಾಲ್ಯದಲ್ಲಿ ಕಂಡ ಕನಸುಗಳು, ಅದನ್ನು ನನಸಾಗಿಸಿಕೊಳ್ಳಲು ಮಾಡಿದ ಪ್ರಯತ್ನ, ಆ ಪ್ರಯತ್ನಗಳ ಮೂಲಕ ಕಂಡುಕೊಂಡ ಬದುಕಿನ ಸತ್ಯಗಳು, ಎದುರಿಸಿದ ಸವಾಲುಗಳು, ಅವುಗಳನ್ನು ಮೀರಿದ ಬಗೆ ಮಾತನಾಡಿದ್ದಾರಲ್ಲದೆ, ಇದೆಲ್ಲವನ್ನು ಬಡಿಸಿಡುವ ಮೂಲಕ ಬದುಕನ್ನು ಎದುರಿಸುವ ಬಗ್ಗೆ ತನ್ನ ಪುಟ್ಟ ಮಕ್ಕಳಿಗೆ ಒಂದು ಜೀವನ ಪಾಠವನ್ನೇ ಬೋಧಿಸಿದ್ದಾರೆ. ಅದರಲ್ಲಿನ ಹಲವು ಭಾಗಗಳನ್ನು ಇಲ್ಲಿ ಅನುವಾದಿಸಿ ನೀಡುತ್ತಿದ್ದೇನೆ.

"ನಾನು ಸಾಕಷ್ಟು ನಿರುತ್ಸಾಹ ಮತ್ತು ಜಿಗುಪ್ಸೆಯಿಂದ ಕೂಡಿರದಿರುವ ಬಗ್ಗೆ ನಿಮಗೆಲ್ಲ ಬೇಸರವಾಗಿದ್ದರೆ ನಾನೇನೂ ಮಾಡಲಾಗುವುದಿಲ್ಲ. ಅಂದಮಾತ್ರಕ್ಕೆ, ನಾನಿರುವ ಪರಿಸ್ಥಿತಿಯನ್ನು ನಿರಾಕರಿಸುತ್ತಿದ್ದೇನೆ ಎಂದಲ್ಲ, ಬದಲಾಗಿ ನನಗೇನಾಗುತ್ತಿದೆ, ನನಗೇನಾಗಲಿದೆ ಎಂಬುದರ ಬಗ್ಗೆ ನನಗರಿವಿದೆ. ನನ್ನ ದೇಹದಲ್ಲಿರುವ ಕ್ಯಾನ್ಸರ್ ಗಡ್ಡೆಗಳನ್ನು ಕರಗಿಸಲಾಗುವುದಿಲ್ಲ, ಅದ್ದರಿಂದ ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದು ಮುಖ್ಯವಾಗುತ್ತದೆ. ಯಾಕೆಂದರೆ ಬದುಕೆಂಬ ಇಸ್ಪೀಟು ಆಟದಲ್ಲಿ ನಮಗೆ ಬೀಳುವ ಎಲೆಗಳನ್ನು ನಾವು ನಿರ್ಧರಿಸಲಾಗುವುದಿಲ್ಲ, ಬದಲಾಗಿ ನಮಗೆ ಬಿದ್ದ ಎಲೆಗಳನ್ನೇ ನಾವು ಹೇಗೆ ಆಡುತ್ತೇವೆ ಎಂಬುದು ಮುಖ್ಯ....

ಬದುಕಿನಲ್ಲಿ ಕನಸುಗಳನ್ನು ಕಾಣಲು ಸ್ಫೂರ್ತಿ ಮತ್ತು ಅನುಮತಿ ಅಪಾರವಾದದ್ದು ಎಂಬುದನ್ನು ನಾವೆಂದೂ ಮರೆಯಬಾರದು.

ಜೀವನದಲ್ಲಿ ನೀವು ತಪ್ಪು ಮಾಡಿದಾಗ ಅದನ್ನು ಯಾರೂ ನಿಮ್ಮ ಗಮನಕ್ಕೆ ತರದಿದ್ದರೆ ನೀವು ಬದುಕಿನಲ್ಲಿ ಸಂಪೂರ್ಣವಾಗಿ ಸೋತಿದ್ದೀರಿ ಎಂದೇ ಅರ್ಥ. ಯಾಕೆಂದರೆ ನಿಮ್ಮ ಬಗ್ಗೆ ಅಪಾರ ಕಾಳಜಿ ಮತ್ತು ಪ್ರೀತಿ ಹೊಂದಿರುವವರೇ ನಿಮ್ಮ ದೊಡ್ಡ ಟೀಕಾಕಾರರಾಗಿರುತ್ತಾರೆ.

ನಿಮ್ಮ ಬಳಿ ಕಳೆದುಕೊಳ್ಳುವುದಕ್ಕೆ ಏನೂ ಉಳಿಯದೇ ಇರುವುದಕ್ಕೆ ಇನ್ನೊಂದು ಪದ ಸ್ವಾತಂತ್ರ್ಯ.

ಜೀವನದಲ್ಲಿ ನಿಮಗೆ ಬೇಕಾಗಿದ್ದು ಸಿಗದೇ ಇರಬಹುದು. ಆದರೆ ಅದಕ್ಕೆಂದು ಪ್ರಯತ್ನಿಸಿದಾಗ ನಿಮಗೆ ಅತಿ ಮುಖ್ಯವಾದ 'ಅನುಭವ' ಎಂಬುದಾದರೂ ಸಿಕ್ಕೇ ಸಿಗುತ್ತದೆ. ಆ ಅನುಭವ ಒಂದು ರೀತಿಯಲ್ಲಿ `head fake' ಅಂದರೆ ಪರೋಕ್ಷ ಪಾಠವೂ ಆಗುತ್ತದೆ.

ಜೀವನದಲ್ಲಿ ಹಲವಾರು ಅಡ್ಡಗೋಡೆಗಳು ಎದುರಾಗುತ್ತವೆ. ಆದರೆ ಆ ಅಡ್ಡಗೋಡೆಗಳ ಉದ್ದೇಶ ನಮ್ಮನ್ನು ಹೊರಗಿಡುವುದಲ್ಲ. ಬದಲಾಗಿ ನಾವು ಬಯಸಿರುವುದನ್ನು ದಕ್ಕಿಸಿಕೊಳ್ಳಲು ನಮಗೆಷ್ಟು ಸಾಮರ್ಥ್ಯವಿದೆ ಮತ್ತು ಅವುಗಳಿಗಾಗಿ ನಾವೆಷ್ಟು ಶ್ರಮಿಸುತ್ತೇವೆ ಎಂದು ಪರೀಕ್ಷಿಸಲು. ಹಾಗೆಯೇ ತಮ್ಮ ಆಶಯಗಳನ್ನು ನನಸಾಗಿಸಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದವರನ್ನು ಹೊರಗಿಡಲು.

ಜೀವನದ ಪಯಣ ಏಕಾಂಗಿಯಾಗಿ, ಸ್ನೇಹಿತರಿಲ್ಲದೆ ಸಾಗುವಂಥದ್ದಲ್ಲ, ಆದರೆ ಸ್ನೇಹಿತರನ್ನು ಗಳಿಸುವುದು ಹೇಗೆ? ನೀವು ಇತರರಿಗೆ ನೆರವಾದರೆ, ಇತರರೂ ನಿಮಗೆ ನೆರವಾಗುತ್ತಾರೆ. ಅದು ಬದುಕಿನ ಕರ್ಮ. ಹಾಗೆಯೇ ಸ್ನೇಹದಲ್ಲಿ ಪ್ರಾಮಾಣಿಕತೆ ಮುಖ್ಯ. ಟೊಳ್ಳುತನ ಅಲ್ಪಕಾಲದ್ದು ಆದರೆ ಪ್ರಾಮಾಣಿಕತೆ ದೀರ್ಘಕಾಲ ಉಳಿಯುವಂಥದ್ದು. ತಪ್ಪು ಮಾಡಿದಾಗ ಕ್ಷಮೆಯಾಚಿಸುವುದು, ತನ್ನ ಬಗೆಗಿಂತಲೂ ಇತರರ ಬಗ್ಗೆ ಕಾಳಜಿ ವಹಿಸುವುದು ಜೀವನದ ಪ್ರಮುಖ ಅಂಶಗಳು.

ಜೀವನದಲ್ಲಿ ಎಂದೂ ಕೈಚೆಲ್ಲಬೇಡಿ. ಯಾಕೆಂದರೆ ಚಿನ್ನ ಸಿಗುವುದು ಸಾಕಷ್ಟು ಕಸವನ್ನು ತೆಗೆದ ನಂತರವೇ.

ಎಲ್ಲರಲ್ಲೂ ಒಂದು ಒಳ್ಳೆ ಗುಣ ಇರುತ್ತದೆ ಎಂಬುದನ್ನು ಅರಿತುಕೊಳ್ಳಿ. ಹಲವೊಮ್ಮೆ ಆ ಗುಣ ಕಾಣಿಸಿಕೊಳ್ಳಲು ಬಹಳ ವರ್ಷಗಳೇ ಹಿಡಿಯಬಹುದು. ಆದರೆ ಯಾರೂ ಸಂಪೂರ್ಣವಾಗಿ ದುಷ್ಟರಲ್ಲವಾದ್ದರಿಂದ ಅದಕ್ಕೆ ತಾಳ್ಮೆಯಿಂದ ಕಾಯಿರಿ.

ಸದಾ ಸಿದ್ಧರಾಗಿರಿ. ಏಕೆಂದರೆ ಅದೃಷ್ಟವೆಂಬುದು ತಯಾರಿ ಮತ್ತು ಅವಕಾಶಗಳ ಮಿಲನ.

ಈ ನನ್ನ **head fake** ಉಪನ್ಯಾಸದಲ್ಲಿ ಪರೋಕ್ಷ ಪಾಠ-ಯಾವುದೆಂಬುದನ್ನು ಗುರುತಿಸಿದಿರಾ? ಈ ನನ್ನ ಉಪನ್ಯಾಸ ಬರಿ ಕನಸುಗಳನ್ನು ನನಸಾಗಿಸಿಕೊಳ್ಳುವ ಬಗ್ಗೆಯಲ್ಲ, ಬದಲಾಗಿ ನೀವು ನಿಮ್ಮ ಜೀವನವನ್ನು ಹೇಗೆ ನಡೆಸುತ್ತೀರಿ ಎಂಬುದರ ಬಗ್ಗೆ. ಅದೆಲ್ಲಕ್ಕಿಂತ ಮುಖ್ಯವಾಗಿ ಈ ಉಪನ್ಯಾಸ ನಿಮಗಾಗಿ ಅಲ್ಲ, ಬದಲಾಗಿ ನನ್ನ ಮಕ್ಕಳಿಗಾಗಿ **Thank you. Good night."**

ರ್ಯಾಂಡಿಯ ಈ ಜೀವತತ್ವಗಳು ಮೇಲುನೋಟಕ್ಕೆ ಬಾಲಿಶ ಎನಿಸಬಹುದು. ಆದರೆ ಅದನ್ನೆಲ್ಲ ಆತ ನೇರವಾಗಿ ತನ್ನ ವಿದ್ಯಾರ್ಥಿ ಮತ್ತು ಸಹೋದ್ಯೋಗಿಗಳಿಗೆ ಹೇಳಿದನಾದರೂ ಆತ ನಿಜವಾಗಲೂ ಉದ್ದೇಶಿಸಿದ್ದು ಮತ್ತು ಪರೋಕ್ಷವಾಗಿ ಹೇಳಿದ್ದು ತನ್ನ ಮೂರು ಮಕ್ಕಳಿಗೆ.


ಅದಕ್ಕಿಂತ ಮುಖ್ಯವಾಗಿ ರ್ಯಾಂಡಿ ಎಲ್ಲಾ ತಂದೆ ತಾಯಂದಿರಿಗೆ ಒಂದು ಹೊಸ ಮಾರ್ಗವನ್ನು ತೋರಿಸಿ ಕೊಟ್ಟಿದ್ದಾನೆ. ಅದೇನೆಂದರೆ ತಾವು ಕಂಡ ಆಶೆ ಮತ್ತು ಕನಸುಗಳನ್ನು, ಎದುರಿಸಿದ ಸವಾಲು ಮತ್ತು ಸಮಸ್ಯೆಗಳನ್ನು ಮಕ್ಕಳಿಗೆ ಹೇಳುವ ಮೂಲಕ, ಅವುಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳುವ ಮೂಲಕ ನಮ್ಮ ಬದುಕನ್ನು ತೆರೆದಿಡುತ್ತೇವೆ; ಬದುಕೆಂಬುದು ಸಂಕೀರ್ಣವಲ್ಲ ಬದಲಾಗಿ ತುಂಬಾ ಸರಳವಾದದ್ದು ಎಂದು ಅವರಿಗೆ ಹೇಳಿಕೊಡುತ್ತೇವೆ.


ಬದುಕಿನ ಅರ್ಥಗಳಲ್ಲಿ ಇದೂ ಬಹಳ ಮುಖ್ಯವಾದದ್ದಲ್ಲವೇ... ■



ಕಂಡಹಾಗೆ

■ ಗೌರಿ ಲಂಕೇಶ್






SRS ಟ್ರಾವೆಲ್ಸ್ ವಂಚನೆಯ ಜಾಲ

ಸಾಲ-ಸೋಲ ಮಾಡಿ ಗಾಡಿ ಖರೀದಿಸಿ ಎಸ್‌ಆರ್‌ಎಸ್ ಟ್ರಾವೆಲ್ಸ್‌ಗೆ ಯಾರಾದರೂ ಅಟ್ಯಾಚ್ ಮಾಡುವ ತನಕ. ತಿಂಗಳಿಗೆ 30ರಿಂದ 40 ಸಾವಿರ ದುಡಿಯಬಹುದು ಎಂದು ಜನ ಕನಸು ಕಾಣುತ್ತಿರುತ್ತಾರೆ. ಆದರೆ ತಿಂಗಳಾದ ಮೇಲೆ ಎಸ್‌ಆರ್‌ಎಸ್‌ನವರು ಕೊಡುವ ದುಡ್ಡು ಎಣಿಸಿಕೊಂಡರೆ ಹಾರ್ಟ್ ಅಟ್ಯಾಕ್ ಆಗಲೇಬೇಕು...!

SRS ಒಂಥರಾ ತಿರುಪತಿ ಚೌರ ಇದ್ದಂತೆ, ಒಂದು ಸಾರಿ ನಂಬಿ ತಲೆ ಕೊಟ್ಟರೆ ಪೂರ್ತಿ ಬೋಳಿಸಿಯೇ ಕಳಿಸುತ್ತಾರೆ.


■ ಬಿಳಿದಾಳೆ ಪಾರ್ವತೀಶ


SRS ಉಂಡೆನಾಮ


ವಿ.ಪಿ. ಕುಮಾರ



ತೀರ್ಥೇಶ


ಮಹೇಶ


ಬಾಬು


ಮುನಿಯಪ್ಪ


ರಾಜಣ್ಣ


ಶ್ರೀನಿವಾಸ್

ನಾಲ್ಕು ಕಾಸು ದುಡಿದು ಹೇಗೋ ಜೀವನ ಮಾಡಬೇಕೆಂದು SRS ಟ್ರಾವೆಲ್ಸ್‌ನವರಿಗೆ ಗಾಡಿ ಅಟ್ಯಾಚ್ ಮಾಡಿ ಅಲ್ಲೇ ಡ್ರೈವರ್‌ಗಳಾಗಿ ದುಡಿದೂ... ದುಡಿದೂ ಈಗ ದಿವಾಳಿಯೆದ್ದಿರುವ ಕೆಲವರ ವಿವರ ಇದು.

1. ವಿ.ಪಿ. ಕುಮಾರ: SRS ನವರ ಹತ್ತಿರ ತನ್ನ ಇಂಡಿಕಾ ಕಾರ್ ಬಿಟ್ಟು ಹತ್ತಿರತ್ತಿರ 2 ಲಕ್ಷ ಲಾಸ್ ಮಾಡಿಕೊಂಡಿದ್ದಾರೆ.

2. ತೀರ್ಥೇಶ: ಇವರದ್ದು ಇನ್ನೋವಾ ಕಾರ್. ತಿಂಗಳಿಡೀ ಗಾಡಿ ಓಡಿದರೂ ತಿಂಗಳಿಗೆ 30 ಸಾವಿರ ಲಾಸ್.

3. ಮಹೇಶ: ಸಾಲ ಮಾಡಿ ಸುಮೋ ಗಾಡಿ ಖರೀದಿಸಿ SRS ನಿಂದ ಉಂಡೆನಾಮ ಹಾಕಿಸಿಕೊಂಡು ಈಗ ಕಂಗಾಲಾಗಿದ್ದಾರೆ.

4. ಬಾಬು: ಮೈಸೂರಿನಲ್ಲಿದ್ದ ಆಸ್ತಿ ಮಾರಿ 3 ಗಾಡಿ ಖರೀದಿಸಿ SRS ಗೆ ಕೊಟ್ಟು, ಈಗ ಬೀದಿಪಾಲಾಗುವ ಸ್ಥಿತಿ ಬಂದಿದೆ.

5. ಮುನಿಯಪ್ಪ: ಇವರದ್ದು ಸುಮೋ ಗಾಡಿ, ತಿಂಗಳಿಡೀ ದುಡಿದರೂ ಕೊನೆಗೆ ಕೈಲಿ 2 ಸಾವಿರವೂ ಉಳಿಯುತ್ತಿಲ್ಲ.

6. ರಾಜಣ್ಣ: ಮೇಲಿನದ್ದೇ ಕತೆ.

ಇದು ಬರೀ SRS ನವರ ವಂಚನೆಯ ಕತೆಯಲ್ಲ, ಸತ್ಯಸಾಯಿ, ಜನನಿ.... ಎಲ್ಲರೂ ಇದೇ ದಗಲಬಾಜಿಗಳೇ. ಇದನ್ನೆಲ್ಲಾ ಸಹಿಸಿ ಸಹಿಸಿ ಸಾಕಾಗಿಯೇ ಮೊನ್ನೆ ಜುಲೈ 21 ರಂದು ಗಾಡಿ ಓನರ್‌ಗಳು ಮುಷ್ಕರ ಮಾಡಿದ್ದು. ಇದರಿಂದ ರಾಜಶೇಖರ್ ಕೆರಳಿ ಏಕಾಏಕಿ 120 ಜನರನ್ನು ಅವರ ಗಾಡಿ ಸಮೇತ SRS ನಿಂದ ಹೊರ ಹಾಕಿದ್ದಾನೆ. ಟಿ. ದಾಸರಹಳ್ಳಿಯ ಶ್ರೀನಿವಾಸ್, ಯಲಹಂಕದ ವಿಕಾಸ್, ಮೂಡಲಪಾಳ್ಯದ ವಿಜಯ ಕುಮಾರ್ ಇವರಲ್ಲಿ ಪ್ರಮುಖರು. ಇವರೆಲ್ಲಾ ಇದನ್ನು ಚಾಲೆಂಜಾಗಿ ತೆಗೆದುಕೊಂಡು ಆಗಸ್ಟ್ 8 ರಂದು ಟ್ರಾವೆಲ್ಸ್ ಗಾಡಿ ಓನರ್‌ಗಳ ಬೃಹತ್ ಸಮಾವೇಶ ಒಂದನ್ನು ನಡೆಸುತ್ತಿದ್ದಾರೆ. ಶಾಸಕರ ಭವನದ ಸಭಾಂಗಣದಲ್ಲಿ ಈ ಸಭೆ ನಡೆಯುತ್ತಿದೆ. ಚಾಲಕರ ಸಂಘದ ಲೀಡರ್‌ಗಳಾದ ನಂಜುಂಡಸ್ವಾಮಿ, ರಾಮಣ್ಣ, ವಿಕಾಸ್ ಜೊತೆಗೆ ಶಾಸಕ ನರೇಂದ್ರ ಬಾಬು ಕೂಡ ಇದರಲ್ಲಿ ಭಾಗವಹಿಸುತ್ತಿದ್ದಾರೆ.

ಕಾರ್ಮಿಕ ಕಾಯ್ದೆಯಲ್ಲಿ ಹೇಳಲಾಗಿರುವ ಕನಿಷ್ಠ ಸವಲತ್ತುಗಳಾದ ಓ.ಟಿ. ಇಎಸ್‌ಐ. ಪಿಎಫ್, ರಜೆ, ನಿಗದಿತ ಕೆಲಸದ ಸಮಯ... ಇವೇ ಚಾಲಕರ ಬೇಡಿಕೆಗಳು.

ಇವೆಲ್ಲಾ ಆಗಲೇಬೇಕಾದ ಕೆಲಸಗಳು. ಸರ್ಕಾರ ಇದಕ್ಕೆ ಸ್ಪಂದಿಸಲಿ. ■

ಬೆಂಗಳೂರಿನ ಹೆಸರುವಾಸಿ ಸಾರಿಗೆ ಸಂಸ್ಥೆ ಎಸ್‌ಆರ್‌ಎಸ್ ಟ್ರಾವೆಲ್ಸ್‌ನ ಹೆಸರು ಕೇಳಿದರೆ ಸಾಕು ಈ ದಿನ ಗಾಡಿ ಮಾಲೀಕರು, ಡ್ರೈವರುಗಳು ಬೆದರಿ ಓಡಿ ಹೋಗುತ್ತಿದ್ದಾರೆ. ಆಕಸ್ಮಾತ್ ದೆವ್ವ, ಪಿಶಾಚಿಗಳನ್ನು ನೋಡಿದೆ ಅನ್ನಿಸಿದಾಗ ಜನ ಹೆದರಿ ನಡುಗುತ್ತಾರಲ್ಲ.... ಅಂತಹ ಭಯ ಈಗ ಎಸ್‌ಆರ್‌ಎಸ್‌ನ ಮಾಲೀಕ ರಾಜಶೇಖರನ ಹೆಸರು ಕೇಳಿದರೆ ಸಾಕು ಹುಟ್ಟಿಕೊಳ್ಳುತ್ತಿದೆ.


ಬೆಂಗಳೂರು ಆವೃತ್ತಿಯ ದಿನಪತ್ರಿಕೆಗಳಲ್ಲಿ "ವಾಹನಗಳು ಚಾಲಕರು ಬೇಕಾಗಿದ್ದಾರೆ, ಕೂಡಲೇ ಸಂಪರ್ಕಿಸಿ" ಎಂಬ ಜಾಹೀರಾತು ಹೆಚ್ಚು ಕಡಿಮೆ ನಿತ್ಯ ಪ್ರಕಟವಾಗುತ್ತಿದೆ. ಎಸ್‌ಆರ್‌ಎಸ್‌ನ ಜಾಹೀರಾತು ಇದು.

ಏನಾದರೂ ದುಡಿದು ಬದುಕಬೇಕು ಎಂಬ ಅನಿವಾರ್ಯತೆ ಇರುವವರು, ಇನ್ನೊಂದು ಸ್ವಲ್ಪ ಜಾಸ್ತಿ ಸಂಪಾದಿಸೋಣ ಎಂಬ ಆಸೆ ಇರುವವರು, ಸಾಲ-ಸೋಲ ಮಾಡಿ ಒಂದು ಮ್ಯಾಕ್ಸಿ ಕ್ಯಾಬ್, ಟಾಟಾ ಸುಮೋ, ಇಂಡಿಕಾ ಗಾಡಿನೋ ಖರೀದಿಸಿ ಎಸ್‌ಆರ್‌ಎಸ್‌ನವರ ಕೈಗೆ ಕೊಟ್ಟರೋ ಅವತ್ತಿಗೆ ಅವರ ಮನೆಗೆ ಶನಿ ಹೊಕ್ಕ ಎಂತಲೇ ಅರ್ಥ

ಹತ್ತಿಪ್ಪತ್ತು ಸಾವಿರ ರೂ. ಬರುತ್ತೆ ಅಂದುಕೊಂಡವರಿಗೆ ಮೂರು ಸಾವಿರ ಬಂದರೆ ಹೆಚ್ಚು. ತಿಂಗಳಿಗೆ 10 ಸಾವಿರ ಕಿ.ಮೀ ಗಾಡಿ ಓಡಿದ್ದರೂ ಎಸ್‌ಆರ್‌ಎಸ್‌ನವರು 5 ಸಾವಿರ ಕಿ.ಮೀ. ಲೆಕ್ಕ ಹಿಡಿದರೆ ಅದೇ ಹೆಚ್ಚು.

ಎಸ್‌ಆರ್‌ಎಸ್ ಟ್ರಾವೆಲ್ಸ್‌ನ ಮಾಲೀಕ ಕೆ.ಟಿ. ರಾಜಶೇಖರ ಏನು ಬಿಸಿನೆಸ್ ಮ್ಯಾನೋ ಇಲ್ಲಾ ಪಿಕ್‌ಪಾಕೆಟ್ ಪ್ರವೀಣನೋ ಎಂಬುದು ಗೊತ್ತಾಗುವ ಮೊದಲೇ ಗಾಡಿ ಓನರ್ ಪಾಪರ್ ಚೀಟಿ ಹಂತಕ್ಕೆ ಬಂದಿರುತ್ತಾನೆ.


ಕಳೆದ ಜುಲೈ 21ರಂದು ಬೆಂಗಳೂರು ಐಟಿ-ಬಿಟಿ, ಬಿಪಿಓ ಕಾಲ್ ಸೆಂಟರ್‌ಗಳಿಗೆ ಗಾಡಿ ಓಡಿಸುವ ಸಾವಿರಾರು ಡ್ರೈವರ್‌ಗಳು ಒಂದು ದಿನ ಮುಷ್ಕರ ನಡೆಸಿದ್ದು ಬಹಳ ಸಣ್ಣ ಸುದ್ದಿಯಾಗಿ ಪತ್ರಿಕೆಗಳಲ್ಲಿ ಬಂತು. ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬನ ಮೊಬೈಲೋ, ವಾಚೋ ಕಳುವಾದರೆ ಅದನ್ನೇ ದೊಡ್ಡ ಸುದ್ದಿ ಮಾಡುವ ಪತ್ರಿಕೆಗಳು ಅದೇ ಸಾಫ್ಟ್‌ವೇರ್ ಜಗತ್ತಿನ ಸಾವಿರಾರು ವಾಹನ ಚಾಲಕರು ತಮಗಾಗುತ್ತಿರುವ ಅನ್ಯಾಯ, ವಂಚನೆ ಬಗ್ಗೆ ಪ್ರತಿಭಟಿಸಿದರೆ ಅದನ್ನೂ ನಿರ್ಲಕ್ಷಿಸಿಬಿಟ್ಟಿವೆ.


ನರೇಂದ್ರಬಾಬು

ಅದೇನೆ ಇರಲಿ, ಅವತ್ತು ಗಲಾಟೆ ಮಾಡಿದ ಸಾವಿರಾರು ಡ್ರೈವರ್‌ಗಳು ಕಂ ಗಾಡಿ ಮಾಲೀಕರು ಬಾಯಿಗೆ ಬಂದ ಹಾಗೇ ಬಯ್ಯುತ್ತಿದ್ದುದು ಮಾತ್ರ ಎಸ್‌ಆರ್‌ಎಸ್ ಟ್ರಾವೆಲ್ಸ್ ಮತ್ತದರ ಮಾಲೀಕ ಕೆ.ಟಿ. ರಾಜಶೇಖರ್‌ಗೆ. ಚಾಲಕರ ಸಂಘದ ನಾಯಕರಾದ ನಂಜುಂಡಸ್ವಾಮಿ, ರಾಮಣ್ಣ, ವಿಕಾಸ್ ಈಗ ಎಸ್‌ಆರ್‌ಎಸ್‌ನ ವಿರುದ್ಧ ಯುದ್ಧ ಘೋಷಣೆ ಮಾಡಿಬಿಟ್ಟಿದ್ದಾರೆ.

ಅದು ಖಾಸಗಿ ಸಾರಿಗೆ ದಂಧೆ

ನೀವಿದನ್ನು ನಂಬುತ್ತೀರೋ ಇಲ್ಲವೋ. ಇವತ್ತು ಎಸ್‌ಆರ್‌ಎಸ್ ಟ್ರಾವೆಲ್ಸ್ ಕಂಟ್ರೋಲಿನಲ್ಲಿ ಹೆಚ್ಚು ಕಡಿಮೆ 10 ಸಾವಿರ ಗಾಡಿಗಳಿವೆ. 15 ಸಾವಿರದಷ್ಟು ಡ್ರೈವರ್‌ಗಳಿದ್ದಾರೆ. ಬೆಂಗಳೂರು, ಮೈಸೂರು, ಹೊಸೂರು, ಪೂನಾ, ಚೆನ್ನೈ, ಹೈದರಾಬಾದ್‌ನಲ್ಲಿ ಎಸ್‌ಆರ್‌ಎಸ್‌ನ ಬ್ರಾಂಚ್ ಆಫೀಸ್‌ಗಳಿವೆ. ಸಾವಿರಾರು ಜನ ಕಚೇರಿ ಸಿಬ್ಬಂದಿ ಹಗಲೂರಾತ್ರಿ ಇಲ್ಲಿ ಬೆವರು ಬಸಿಯುತ್ತಿದ್ದಾರೆ. ಈ ಬೆವರಿನ ಒಂದೊಂದು ಹನಿಯೂ ರಾಜಶೇಖರನಿಗೆ ಒಂದು ಸಾವಿರ ರೂಪಾಯಿ ನೋಟಾಗಿ ತಿಜೋರಿ ಸೇರಿಕೊಳ್ಳುತ್ತಿದೆ. ಇದು ನ್ಯಾಯವಾದ ರೀತಿಯ ಲಾಭದ ಸಂಪಾದನೆಯಾಗಿದಿದ್ದರೆ ಬೇರೆ ವಿಚಾರ. ಆದರೆ ಗಾಡಿ ಮಾಲೀಕರಿಗೆ ವಂಚನೆ, ಕಳ್ಳ ಲೆಕ್ಕ, ಡ್ರೈವರ್‌ಗಳ ಶೋಷಣೆಗಳಿಂದ ಬರುತ್ತಿರುವ ಲಾಭ ಇದು.


ರಾಜಶೇಖರ್ SRS ಮಾಲೀಕ


ಜಾಗತೀಕರಣ, ಖಾಸಗೀಕರಣಗಳೆಂಬ ರೋಗಕ್ಕೆ ಬೆಂಗಳೂರನ್ನು ಬಲಿ ಕೊಟ್ಟಾದ ಮೇಲೆ ಇಲ್ಲಿ ಸಾವಿರಾರು ಐಟಿ-ಬಿಟಿ ಕಂಪೆನಿಗಳು, ಕಾಲ್‌ಸೆಂಟರ್‌ಗಳು ಹುಟ್ಟಿಕೊಂಡಿವೆ. ಅದರ ಜೊತೆಗೆ **Industrial Transport** ಎಂಬ ದಂಧೆ ಕೂಡ ವೇಗವಾಗಿ ಬೆಳೆದಿದೆ. ಅಂದರೆ ಈ ಖಾಸಗಿ ಕಂಪೆನಿಗಳ ಸಿಬ್ಬಂದಿ, ನೌಕರರನ್ನು ಮನೆಯಿಂದ ಆಫೀಸ್‌ಗೆ, ಆಫೀಸ್‌ನಿಂದ ಮನೆಗೆ ಕರೆದೊಯ್ದು ಬಿಡುವ ವ್ಯವಹಾರ ಇದು. ತಿಂಗಳೊಂದಕ್ಕೆ ಅಂದಾಜು 250 ಕೋಟಿ ರೂ. ಹುಟ್ಟುತ್ತಿದೆ ಇಲ್ಲಿ, ಇದರಲ್ಲಿ ಅರ್ಧಕ್ಕರ್ಧ ದುಡ್ಡನ್ನು ಈ ಟ್ರಾವೆಲ್ಸ್ ಮಾಲೀಕರೇ ನುಂಗಿಹಾಕುತ್ತಿದ್ದಾರೆ. ಕಿಂಚಿತ್ತೂ ಕಷ್ಟಪಡದೇ, ರಿಸ್ಕ್ ತೆಗೆದುಕೊಳ್ಳದೇ ಎಸ್‌ಆರ್‌ಎಸ್, ಜನನಿ, ಸ್ಕೈಲೇನ್, ಗುರುಕೃಪ, ಮಹೀಂದ್ರ, ಓರೆಕ್ಸ್... ಹೀಗೆ ಬೆರಳೆಣಿಕೆಯಷ್ಟು ಟ್ರಾವೆಲ್ಸ್ ಮಾಲೀಕರು ನೂರಾರು ಕೋಟಿ ಲಾಭ ದೋಚುತ್ತಿದ್ದಾರೆ.



ಆದರೆ ಇನ್ನೊಂದು ಕಡೆ ಈ ಟ್ರಾವೆಲ್ಸ್‌ನವರ ಕಂಟ್ರೋಲ್‌ನಲ್ಲಿ ಗಾಡಿ ಓಡಿಸಿಕೊಂಡಿರುವ ಓನರ್ ಕಂ ಡ್ರೈವರ್‌ಗಳು ಹಗಲೂರಾತ್ರಿ ದುಡಿದರೂ ಗಾಡಿ ಸಾಲದ ಕಂತು ಕಟ್ಟಲಾಗದೆ ದಿವಾಳಿ ಏಳುತ್ತಿದ್ದಾರೆ.

ಅವರಿಗೆ ನ್ಯಾಯವಾಗಿ ಸಿಗಬೇಕಾದ ದುಡಿಮೆಯ ದುಡ್ಡನ್ನು ಕೊಡದೆ ಈ ಟ್ರಾವೆಲ್ಸ್ ಮಾಲೀಕರು ವಂಚಿಸುತ್ತಿರುವುದೇ ಇದಕ್ಕೆ ಕಾರಣ.

ಈ ಎಸ್‌ಆರ್‌ಎಸ್‌ನವರ ಹತ್ತಿರ 10 ಸಾವಿರ ಗಾಡಿಗಳಿದ್ದರೆ, ಮಿಷನ್ ರೋಡಿನಲ್ಲಿ ಆಫೀಸ್ ಇರುವ ಮುಂಬೈನ ಮಹೀಂದ್ರ ಅಂಡ್ ಮಹೀಂದ್ರ ಬಳಿ 8 ಸಾವಿರ ಗಾಡಿಗಳಿವೆ. ಮುಂಬೈನ ಇನ್ನೊಂದು ಸಂಸ್ಥೆ ಓರೆಕ್ಸ್ ದೊಮ್ಮಲೂರಿನಲ್ಲಿ ಆಫೀಸ್ ತೆರೆದು 8 ಸಾವಿರ ಗಾಡಿಗಳನ್ನು ತನ್ನ ಕಂಟ್ರೋಲ್‌ನಲ್ಲಿಟ್ಟುಕೊಂಡಿದೆ. ಜೆ.ಸಿ.ನಗರದ ಸ್ಕೈಲೇನ್ ಬಳಿ 6 ಸಾವಿರ ಗಾಡಿಗಳಿವೆ. ಸತ್ಯ ಟೂರ್ಸ್ ಅಂಡ್ ಟ್ರಾವೆಲ್ಸ್ 2 ಸಾವಿರ ಗಾಡಿ ಓಡಿಸುತ್ತಿದ್ದಾನೆ. ಗುರುಕೃಪ ಟ್ರಾವೆಲ್ಸ್‌ನವರಿಗೆ ಹತ್ತಿರತ್ತಿರ 1500 ಗಾಡಿಗಳಿವೆ.... ಇಂಥದ್ದೇ ಸುಮಾರು 30 ರಷ್ಟು ದೊಡ್ಡ ಟ್ರಾವೆಲ್ಸ್ ಏಜೆನ್ಸಿಗಳು ಬೆಂಗಳೂರಿನಲ್ಲಿವೆ.


ರಾಮಣ್ಣ


ವಿಕಾಸ

ಒಂದು ಸಿಂಪಲ್ ವಿಚಾರ ಏನೆಂದರೆ ಟ್ರಾವೆಲ್ಸ್ ಓನರ್‌ಗಳು ಈ ಗಾಡಿಗಳ ಮಾಲೀಕರುಗಳಲ್ಲ. ಅವರೇನಿದ್ದರೂ ಸಾರಿಗೆ ಸೇವೆ ಕೇಳುವ ಕಂಪೆನಿಗಳಿಗೂ, ಸಣ್ಣಪುಟ್ಟ ಗಾಡಿ ಓನರ್‌ಗಳಿಗೂ ಮಧ್ಯೆ ದಲ್ಲಾಳಿಗಳಂತೆ ಕೆಲಸ ಮಾಡುವವರು ಮಾತ್ರ. ಆದರೆ ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವಂತೆ, ಈ ಕಂಪೆನಿಗಳು ಕೈ ತುಂಬಾ ಹಣ ಕೊಡುತ್ತಿದ್ದರೂ, ಆ ದುಡ್ಡು ಗಾಡಿ ಓನರ್‌ಗಳ ಕೈಗೆ ಬರುವ ಹೊತ್ತಿಗೆ ಮಾಯವಾಗಿಬಿಟ್ಟಿರುತ್ತದೆ. ಮಧ್ಯದಲ್ಲಿರುವ ಟ್ರಾವೆಲ್ಸ್‌ನವರ ವಂಚನೆಯಿದು. ಅಂತಹವರ ಪೈಕಿ ಎಸ್‌ಆರ್‌ಎಸ್‌ನ ರಾಜಶೇಖರ ಅಸಾಧ್ಯ ವಂಚಕ.

ಕೊಟ್ಟೋನು ಕೋಡಂಗಿ.....

ಐಬಿಎಂ, ಇನ್ಫೋಸಿಸ್, ವಿಪ್ರೋ, ಟಾಟಾ ಇನ್ಫೋಟೆಕ್, ಟಯೋಟಾ, ಯುರೇಕಾ ಫೋರ್ಬ್ಸ್, ಟಿವಿಎಸ್ ಮೋಟಾರ್ಸ್... ಹೀಗೆ ಬೆಂಗಳೂರಿನ ಸಾವಿರಾರು ಖಾಸಗಿ ಕಂಪೆನಿಗಳು ಟ್ರಾವೆಲ್ಸ್‌ನವರಿಂದ ಸಾರಿಗೆ ಸೇವೆ ಪಡೆಯುತ್ತಿವೆ. ಅವರು ಗಾಡಿ ಡ್ರೈವರ್ ಒಬ್ಬನಿಗೆ ಸಂಬಳ ಅಂತ 7ರಿಂದ 10 ಸಾವಿರ ಕೊಟ್ಟರೆ, ಎಸ್‌ಆರ್‌ಎಸ್‌ನ ರಾಜಶೇಖರ ತನಗರ್ಧ ಇಟ್ಟುಕೊಂಡು, 4ರಿಂದ 5 ಸಾವಿರ ಕೊಡುತ್ತಿದ್ದಾನೆ.

ಇನ್ನೊಂದು ಉದಾಹರಣೆ ಹೇಳಬೇಕೆಂದರೆ ಈ ಕಂಪೆನಿಗಳು ಟಾಟಾ ಸುಮೋ ಗಾಡಿಗೆ ಕಿ.ಮೀ.ಗೆ 12 ರೂ. ತನಕ ಪಾವತಿಸುತ್ತಿವೆ. ಆದರೆ ಎಸ್‌ಆರ್‌ಎಸ್‌ನವರು ಗಾಡಿ ಓನರ್‌ಗೆ ಕೊಡುವ ಹಣ 6 ರೂಪಾಯಿ ದಾಟುವುದೇ ಇಲ್ಲ, ಅಂದರೆ ಒಂದು ಗಾಡಿ ಒಂದು ಕಿ.ಮೀ ಓಡಿದರೆ ಸಾಕು, ರಾಜಶೇಖರ್ ಜೇಬಿಗೆ 6 ರೂಪಾಯಿ ಬಂದು ಬಿತ್ತು ಎಂದರ್ಥ. ಇದನ್ನೇ ಲೆಕ್ಕ ಹಾಕಿ ನೋಡಿದರೆ ಈಗ ಎಸ್‌ಆರ್‌ಎಸ್‌ನವರ ಹತ್ತಿರ ಹತ್ತು ಸಾವಿರ ಗಾಡಿಗಳು ಓಡುತ್ತಿವೆ. ಮ್ಯಾಕ್ಸಿಕ್ಯಾಬ್, ಕ್ವಾಲೀಸ್, ಇನ್ನೋವಾ, ಇಂಡಿಕಾ, ಟಾಟಾ ಸುಮೋ... ಹೀಗೆ ನಾನಾ ವೆರೈಟಿಯ ಗಾಡಿಗಳು ಪ್ರತಿದಿನ ಸರಾಸರಿ 250ರಿಂದ 300 ಕಿ.ಮೀ. ಓಡಾಡುತ್ತಿವೆ. ಆ ಲೆಕ್ಕದಲ್ಲಿ ದಿನಕ್ಕೆ 2.5ರಿಂದ 3 ಲಕ್ಷ ಕಿ.ಮೀ. ಆಗುತ್ತದೆ. ಪ್ರತಿ ಕಿ.ಮೀ. 4ರಿಂದ 6 ರೂಪಾಯಿ ಲಾಭ ಎಂದಿಟ್ಟುಕೊಂಡರೂ ಎಸ್‌ಆರ್‌ಎಸ್‌ನವರ ಪ್ರತಿದಿನದ ಲಾಭ ಹತ್ತರಿಂದ ಹದಿನೈದು ಲಕ್ಷ ಆಯಿತು... ಇದರರ್ಥ ತಿಂಗಳಿಗೆ ಹತ್ತಿರತ್ತಿರ ನಾಲ್ಕು ಕೋಟಿ ರೂಪಾಯಿಗಳು!

ಗೋಡಾ ಔರ್ ಗಧಾ

"ನಿಮಗೆ ಜಾಸ್ತಿ ದುಡ್ಡು ಬೇಕೆಂದರೆ ಗೋಡಾ ಹೊಡೀರಿ" (ಅಂದರೆ ಮೀಟರ್ ತಿರುಗಿಸಿ ಜಾಸ್ತಿ ಓಡಾಟ ತೋರಿಸುವ ಚೋರವಿದ್ಯೆ) ಎಂಬ ಪುಕ್ಕಟ್ಟೆ ಸಲಹೆ ಕೊಡುತ್ತಾರೆ. ಆಕಸ್ಮಾತ್ ದುರಾಸೆಗೆ ಬಿದ್ದ ಓನರ್‌ಗಳು, 'ಗೋಡಾ' ಹೊಡೆದರೂ ಅದರ ಬಾಬ್ತು ದುಡ್ಡು ಕೈಗೆ ಹತ್ತುವುದಿಲ್ಲ. ಐಟಿ ಕಂಪೆನಿಗಳಿಗೆ ಈ ಗೋಡಾ ಲೆಕ್ಕ ತೋರಿಸಿಯೇ ಹಣ ಕೀಳುವ SRS ಡ್ರೈವರ್‌ಗಳಿಗೆ ಮಾತ್ರ 'ನಿಮ್ಮದು ಸುಳ್ಳು ಲೆಕ್ಕ' ಎಂದು ಹೇಳಿ ಅರ್ಧಕ್ಕರ್ಧ ಹಣ ಕಟ್ ಮಾಡುತ್ತದೆ.

ಒಟ್ಟಾರೆ ಈ ಗೋಡಾ ಲೆಕ್ಕ ತೋರಿಸಲು ಹೋಗುವ ಗಾಡಿ ಮಾಲೀಕರು ಗಧಾ (ಕತ್ತೆ) ಚಾಕರಿ

▶▶▶

ಬಾಬು ಎಂಬ ಕೆಟ್ಟ ಹುಳ



'SRS ಅಂದ್ರೆ ಏನು ಗೊತ್ತೇನ್ರೋ... ಶ್ರೇಟ್ ರೌಡಿ ಸರ್ವೀಸ್ ಅಂತಾ, ಯಾವನಾದ್ರೂ ಜಾಸ್ತಿ ಮಾತಾಡಿದ್ರೆ ಒದೆ ಬೀಳುತ್ತೆ'

-ಇದು ಡ್ರೈವರ್‌ಗಳಿಗೆ ಬಾಬು ಹಾಕುವ ಬೆದರಿಕೆ.

SRS ಮಾಲೀಕ ರಾಜಶೇಖರನ ಬಲಗೈ ಬಂಟ ಇವನು. ತಿಂಗಳಿಗೆ ಆರೆಂಟು ಸಾವಿರ ಕಿ.ಮೀ. ಗಾಡಿ ಓಡಿಸಿರೂ ಅದು SRS ಆಫೀಸಿನಲ್ಲಿ ನಾಲ್ಕು ಸಾವಿರ ಕಿ.ಮೀ. ಲೆಕ್ಕದಲ್ಲೇ ದಾಖಲಾಗುತ್ತವೆ. ಜೊತೆಗೆ ಟೈಂ, ರೂಟ್, ಲೆಕ್ಕಾಚಾರ ಮಾಡಿ ಗಾಡಿ ಓನರ್‌ಗಳಿಗೆ ದುಡಿದ ಅರ್ಧ ದುಡ್ಡೂ ಸಿಗುವುದಿಲ್ಲ. ಯಾರಾದರೂ ಧೈರ್ಯ ಮಾಡಿ 'ಯಾಕಿಂಗೇ'ಅಂತ ಕೇಳಿದರೋ ಅಲ್ಲಿ ಬಾಬು ಹಾಜರಾಗುತ್ತಾನೆ.

"SRS ಅಂದ್ರೆ ಏನು ಗೊತ್ತಾ..." ಅಂತ ಧಮಕಿ ಕೊಡುತ್ತಾನೆ.

ಗಾಡಿ ಓನರ್‌ಗಳು ಸೇರಿಕೊಂಡು ಸದ್ಯದಲ್ಲೇ ಬಾಬುಗೆ ಲಾತಾ ಕೊಟ್ಟರೂ ಆಶ್ಚರ್ಯವಿಲ್ಲ-ಹಾಗಿದೆ ಅವನ ಗೂಂಚಲಿ.

ಇನ್ನು SRS ನಲ್ಲಿ ಸೂಪರ್‌ವೈಸರ್ ಆಗಿರುವ ಶ್ರೀಧರನದ್ದೂ ಇದೇ ಕತೆ. ಸಿಟಿಯಲ್ಲಿ ಗಾಡಿಗಳು ಖಾಲಿ ಓಡಾಡುವಾಗ ಬೇರೆ ಪ್ರಯಾಣಿಕರನ್ನೇನಾದರೂ ಆಕಸ್ಮಾತ್ ಹತ್ತಿಸಿಕೊಂಡುಬಿಟ್ಟರೆ ಸೀಟಿಗೆ 500 ರೂ. ದಂಡ ಹಾಕಿಸುತ್ತಾನೆ ಈ ಶ್ರೀಧರ. ಒಬ್ಬ ಚಾಲಕ ಒಮ್ಮೆ ಸಿಕ್ಕಿಬಿದ್ದರೂ ತಿಂಗಳ ಕೊನೆಗೆ ಅಂತ ನಾಲ್ಕಾರು ಕೇಸ್‌ಗಳಾಗಿರುವಂತೆ ನಕಲಿ ಲೆಕ್ಕ ತೋರಿಸಿ ಅಲ್ಲೂ ಹಣ ಕಟ್ ಮಾಡುತ್ತಾನೆ.

SRS ಒಂಥರಾ ತಿರುಪತಿ ಚೌರ ಇದ್ದಂತೆ, ಒಂದು ಸಾರಿ ನಂಬಿ ತಲೆ ಕೊಟ್ಟರೆ ಪೂರ್ತಿ ಬೋಳಿಸಿಯೇ ಕಳಿಸುತ್ತಾರೆ.

▶▶▶

ಮಾಡಿದ್ದೇ ಲಾಭ ಅಷ್ಟೇ. ಎಸ್‌ಆರ್‌ಎಸ್‌ನ ಮಾಲೀಕ ಈಗ್ಗೆ 25 ವರ್ಷಗಳ ಹಿಂದೆ ತುಮಕೂರಿನಲ್ಲಿ ಶ್ರೀ ರೇವಣಸಿದ್ದೇಶ್ವರ ಬಸ್ ಡ್ರೈವರ್ ಆಗಿದ್ದವನು. ಅದರ ಮಾಲೀಕರಿಗೆ ಮಕ್ಕಳಿರಲಿಲ್ಲವಾದ್ದರಿಂದ ನಂಬಿಕಸ್ಥ ಜನ ಎಂದು ಭಾವಿಸಿ ಡ್ರೈವರ್‌ಗಳಿಗೆ ಪೂರ್ತಿ ತಮ್ಮ ಬಸ್‌ಗಳ ಜವಾಬ್ದಾರಿ ಬಿಟ್ಟುಕೊಟ್ಟಿದ್ದರು. ಅಲ್ಲಿ ಚಿಗುರಿಕೊಂಡ ರಾಜಶೇಖರ್ ಎಸ್‌ಆರ್‌ಎಸ್ (ಶ್ರೀ ರೇವಣಸಿದ್ದೇಶ್ವರ) ಟ್ರಾವೆಲ್ಸ್ ಅಂಗಡಿ ತೆರೆದುಕೊಂಡು ಕುಳಿತ. ಸಿಕ್ಕ ಅವಕಾಶ ಬಳಸಿಕೊಂಡು ಬೆಳೆದೂ ಬಿಟ್ಟ. ಇದರಲ್ಲಿ ಅವನ ಶ್ರಮ, ಬುದ್ಧಿವಂತಿಕೆ, ಮುಂದಾಲೋಚನೆ ಗಳೆಲ್ಲಾ ಇರುವುದೇನೋ ಸರಿ. ಆದರೆ ಎಸ್‌ಆರ್‌ಎಸ್ ಟ್ರಾವೆಲ್ಸ್ ಬೆಳೆದು ದೊಡ್ಡದಾದಂತೆಲ್ಲಾ ರಾಜಶೇಖರನ ಸುಳ್ಳು ಮೋಸಗಳು ಬೆಳೆಯುತ್ತಾ ಹೋದವು:

ಈಗ ಗಾಡಿ ಓನರ್‌ಗಳ ಗಲಾಟೆಗೆ ರಾಜಶೇಖರನ ಲೋಭವೇ ಕಾರಣ. ಸಾಲ-ಸೋಲ ಮಾಡಿ ಗಾಡಿ ಖರೀದಿಸಿ ಎಸ್‌ಆರ್‌ಎಸ್ ಟ್ರಾವೆಲ್ಸ್‌ಗೆ ಯಾರಾದರೂ ಅಟ್ಯಾಚ್ ಮಾಡುವ ತನಕ. ಆಮೇಲೆ ಎದುರಾಗುವ ಮೋಸದ ಬಗ್ಗೆ ಗೊತ್ತೇ ಆಗುವುದಿಲ್ಲ. ಒಂದು ಸಾರಿ ಗಾಡಿ ಅಟ್ಯಾಚ್ ಮಾಡಿ ಓನರ್ ಕಂ ಡ್ರೈವರ್ ಅಗ್ರಿಮೆಂಟ್ ಮಾಡಿಕೊಂಡ ಮೇಲೆ ತಿಂಗಳಿಗೆ 30ರಿಂದ 40 ಸಾವಿರ ದುಡಿಯ ಬಹುದು ಎಂದು ಕನಸು ಕಾಣುತ್ತಿರುತ್ತಾನೆ. ಆದರೆ ತಿಂಗಳಾದ ಮೇಲೆ ಎಸ್‌ಆರ್‌ಎಸ್‌ನವರು ಕೊಡುವ ದುಡ್ಡು ಎಣಿಸಿಕೊಂಡರೆ ಹಾರ್ಟ್ ಅಟ್ಯಾಕ್ ಆಗಲೇ ಬೇಕು...!



ಹಾಗಿರುತ್ತದೆ ಎಸ್‌ಆರ್‌ಎಸ್‌ನವರ ರಾಮನ ಲೆಕ್ಕ, ಕೃಷ್ಣನ ಲೆಕ್ಕ.

ಗಾಡಿ ಉಪಯೋಗಿಸುವ ಕಂಪೆನಿಗಳು ಕಿ.ಮೀ.ಗೆ 12 ರೂ. ಕೊಟ್ಟರೆ ಎಸ್‌ಆರ್‌ಎಸ್‌ನವರು 100 ಕಿ.ಮೀ. ತನಕ 6 ರೂ. ಕೊಡುತ್ತಿದ್ದಾರೆ. ನಂತರದ ಓಡಾಟಕ್ಕೆ ಕಿ.ಮೀ.ಗೆ ಜುಜುಬಿ 5 ರೂಪಾಯಿ ಮಾತ್ರ.

ಇವತ್ತು ಹೊರಗಡೆ ಯಾವುದೇ ಟ್ರಾವೆಲ್ಸ್‌ನವರ ಹತ್ತಿರ ಟಾಟಾ ಸುಮೋಗೆ ಜನ ಕಿ.ಮೀ. ಒಂದಕ್ಕೆ 9 ರೂಪಾಯಿ ಕೊಡುತ್ತಿದ್ದಾರೆ. ಆದರೆ ಎಸ್‌ಆರ್‌ಎಸ್ ಮಾತ್ರ ಗಾಡಿ ಓನರುಗಳಿಗೆ ಕೊಡೋ ದುಡ್ಡು 6 ರೂ. ದಾಟುತ್ತಿಲ್ಲ.

ಇದಷ್ಟೇ ಅಲ್ಲ, ನಿತ್ಯ 300 ಕಿ.ಮೀ. ಗಾಡಿ ಓಡಿಸಿ ಬಂದರೂ, ಎಸ್‌ಆರ್‌ಎಸ್ ಲೆಕ್ಕಕ್ಕೆ ತೆಗೆದುಕೊಳ್ಳುವುದು 150 ಕಿ.ಮೀ. ಮಾತ್ರ. ಯಾಕೆಂದು ಕೇಳಿದರೆ ಡ್ರೈವರ್ ಗಳು ಸುಳ್ಳು ಲೆಕ್ಕ ತೋರಿಸಿದ್ದಾರೆ ಎಂದು ದಬಾಯಿಸಿ ಬಾಯಿ ಮುಚ್ಚಿಸಲಾಗುತ್ತದೆ. ಹಾಗಾಗಿ 30ರಿಂದ 40 ಸಾವಿರ ನಿರೀಕ್ಷಿಸುವ ಗಾಡಿ ಓನರ್‌ಗಳ ಕೈಗೆ ತಿಂಗಳ ಕೊನೆಗೆ 20 ಸಾವಿರ ಸಿಕ್ಕರೆ ಅದೇ ಜಾಸ್ತಿ.

ಅವರು ಅದರಲ್ಲೇ ಡೀಸೆಲ್ ಹಾಕಿಸಿ, ಟೈರ್, ಟ್ಯೂಬ್ ರಿಪೇರಿ ಖರ್ಚು ನೋಡಿಕೊಂಡು ಗಾಡಿ ಸಾಲದ ತಿಂಗಳ ಕಂತು ಕಟ್ಟಿದರೆ ಕೊನೆಗೆ ಕೈಯಲ್ಲಿ ಒಂದು ಸಾವಿರವೂ ಉಳಿಯುವುದಿಲ್ಲ. ಇಲ್ಲಿ ಓನರೇ ಗಾಡಿ ಡ್ರೈವರ್ ಆಗಿರುತ್ತಾನಾದ್ದರಿಂದ ಅವರ ಕೆಲಸಕ್ಕೆ ಸಂಬಳ ಸಿಗುತ್ತಾದರೂ ಅದು ನಾಲ್ಕೈದು ಸಾವಿರ ದಾಟುವುದಿಲ್ಲ. ಹೋಗಲಿ ಹಗಲೂ-ರಾತ್ರಿ ಅನ್ನದೇ ಕೆಲಸ ಮಾಡಿ ಇನ್ನಷ್ಟು ಜಾಸ್ತಿ ದುಡಿಯೋಣ ಎಂದು ಹೊರಟರೂ ಮತ್ತೆ ಮೋಸ ಕಾದಿರುತ್ತದೆ. ರೆಸ್ಟ್ ರೂಂ, ಟಾಯ್ಲೆಟ್ ಯಾವ ಸೌಲಭ್ಯವನ್ನೂ ಎಸ್‌ಆರ್‌ಎಸ್‌ನವರು ಕೊಡಲ್ಲ.

ಈ ರಾಜಶೇಖರ ತನ್ನ ಎಸ್‌ಆರ್‌ಎಸ್ ಸಂಸ್ಥೆಯ ವೆಬ್ ಸೈಟ್‌ನಲ್ಲಿ ನಮಗೆ 20 ಸಾವಿರ ಚದರಡಿ ಆಫೀಸ್ ಇದೆ. 70 ಸಾವಿರ ಅಡಿ ಗ್ಯಾರೇಜ್ ಇದೆ ಎಂದು ಜಂಬ ಕೊಚ್ಚಿಕೊಂಡಿದ್ದಾನೆ. ಏನಿದ್ದರೆ ತಾನೆ ಪ್ರಯೋಜನ ಏನು?

ಡ್ರೈವರ್‌ಗಳಿಗೆ ಆರಡಿ-ಮೂರಡಿಯ ಒಂದು ಟಾಯ್ಲೆಟ್ ಕಟ್ಟಿಸಲಿಕ್ಕೂ ಯೋಗ್ಯತೆಯಿರದ ವ್ಯಕ್ತಿ ಇವನು.

ಈ ಡ್ರೈವರ್‌ಗಳ ನರಕಯಾತನೆ ಒಂದೆರಡಲ್ಲ. ಒಂದು ಸಾರಿ ಐಟಿ-ಬಿಟಿ ಕಂಪೆನಿ ಕಾಂಪೌಂಡ್ ಒಳ ಹೊಕ್ಕರೆ ಸಾಕು ಗಾಡಿ ಬಿಟ್ಟು ಕೆಳಗಿಳಿಯುವಂತಿಲ್ಲ. ಮೂತ್ರ ವಿಸರ್ಜನೆಗೂ ಅಲ್ಲಿ ಜಾಗ ಇರಲ್ಲ. ಇನ್ನು ಹಸಿವಾದರೆ ತಿನ್ನಲೂ ಅಲ್ಲಿ ಏನೂ ಸಿಗಲ್ಲ. ನಿದ್ದೆ ಮಾತಂತೂ ಇಲ್ಲವೇ ಇಲ್ಲ.

ದೂರದಿಂದ ನೋಡುವವರಿಗೆ ಎಸ್‌ಆರ್‌ಎಸ್ ಟ್ರಾವೆಲ್ಸ್ ತರದವರ ಹತ್ತಿರ ಗಾಡಿ ಅಟ್ಯಾಚ್ ಮಾಡಿಬಿಟ್ಟರೆ ಸಾಕು ಬಾಳೇ ಬಂಗಾರ ಅನ್ನಿಸಿರುತ್ತದೆ. ಆದರೆ ಅಲ್ಲಿ ಗಾಡಿ ಬಿಟ್ಟವರ ಪಾಡು ನೋಡುತ್ತಿದ್ದರೆ, ವಿಷ ಕುಡಿಯುವುದೇ ವಾಸಿ ಅನ್ನಬೇಕು!

ಕೊನೆಯದಾಗಿ ಒಂದು ಸಲಹೆ ಏನೆಂದರೆ,


ಸಾಲ ಮಾಡಿ ಒಂದು ಗಾಡಿ ತಗೊಂಡು ಕಲಾಸಿ ಪಾಳ್ಯದ ಎಸ್‌ಆರ್‌ಎಸ್ ಆಫೀಸಿಗೆ ಹೋಗೋ ಮೊದಲು ಅಲ್ಲಿರುವ ಬೇರೆ ಡ್ರೈವರ್‌ಗಳ ಹತ್ತಿರ ಒಂದು ಸಾರಿ ವಿಚಾರಿಸಿ ನೋಡಿ. ■

ಮಲೆನಾಡಿನ ಸಹಕಾರ ಸಾರಿಗೆ ಮಾದರಿ

ಟ್ರಾವೆಲ್ಸ್ ಮಾಲೀಕರ ಶೋಷಣೆ, ಗೂಂಡಾಗಳ ಬೆದರಿಕೆ, ಹಣಕಾಸಿನ ಕಷ್ಟಗಳಿಂದ ಹೊರಬರಲು ತಪತಪಿಸುತ್ತಿರುವ ಬೆಂಗಳೂರು ಸಿಟಿಯ ಟ್ಯಾಕ್ಸಿ ಕ್ಯಾಬ್ ಓನರ್‌ಗಳು ಈಗ ಮೊದಲ ಹೆಜ್ಜೆಯಾಗಿ ಒಂದು ಸಂಘಟನೆ ಮಾಡಿಕೊಳ್ಳುತ್ತಿದ್ದಾರೆ. ಈಗಾಗಲೇ 37 ಸಾವಿರ ಮಂದಿ ಸದಸ್ಯರೂ ಆಗಿದ್ದಾರೆ. ಮುಂದೆ ಈ ಚಾಲಕರ ಸಂಘವೇ ನೇರವಾಗಿ ಖಾಸಗಿ ಕಂಪನಿಗಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿದೆ. ಹಾಗಾದಲ್ಲಿ ಕರ್ನಾಟಕದ ಮಟ್ಟಿಗೆ ಅದೊಂದು ಅಪರೂಪದ ಬೆಳವಣಿಗೆಯಾಗಲಿದೆ.

ಬಹಳ ಹಿಂದೆಯೇ ಮಲೆನಾಡಿನಲ್ಲಿ ಬಸ್ ಡ್ರೈವರ್-ಕಂಡಕ್ಟರ್‌ಗಳೇ ಸೇರಿಕೊಂಡು ಸಹಕಾರ ಸಾರಿಗೆ ಸಂಸ್ಥೆ ಸ್ಥಾಪಿಸಿ ಈಗ ಯಶಸ್ವಿಯಾಗಿ, ಲಾಭದಾಯಕವಾಗಿ ನಡೆಸಿಕೊಂಡು ಹೋಗುತ್ತಿಲ್ಲವೇ!

ಅದೇ ಮಾದರಿ ಈಗ ಬೆಂಗಳೂರಿಗೂ ಬರಬಹುದು.



ಕುಚೇಲನ್ ಗಲಾಟೇಲಿ ಕುಬೇರರಾದವರು

'ಕುಚೇಲನ್' ಚಿತ್ರ ಖರೀದಿಸಿರುವ ಪಿರಮಿಡ್ ಸಾಯಿಮಿರಾ ಕಂಪನಿಗೆ ಇನ್ನೂ ಬಾಕ್ಸ್ ಆಫೀಸ್ ಕಲೆಕ್ಷನ್ ಎಷ್ಟಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಆದರೆ ನಯಾಪೈಸೆ ಖರ್ಚಿಲ್ಲದೆ ಬರೀ ಬಾಯನ್ನೇ ಬಂಡವಾಳ ಮಾಡಿಕೊಂಡಿದ್ದ ಕೆಲವರಿಗಂತೂ ಈ ವಿವಾದದಿಂದ ಬಂಪರ್ ಲಾಟರೀನೆ ಹೊಡೆದಿದೆಯಂತೆ....

ಅಂತೂಇಂತೂ ರಜನೀಕಾಂತನ 'ಕುಚೇಲನ್' ಸಿನಿಮಾ ಬೆಂಗಳೂರಲ್ಲಿ ಬಿಡುಗಡೆಯಾಗಿದೆ. 60 ಕೋಟಿಗೆ ಚಿತ್ರ ಖರೀದಿಸಿರುವ ಪಿರಮಿಡ್ ಸಾಯಿಮಿರಾ ಕಂಪನಿಗೆ ಇನ್ನೂ ಬಾಕ್ಸ್ ಆಫೀಸ್ ಕಲೆಕ್ಷನ್ ಎಷ್ಟಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಆದರೆ ನಯಾಪೈಸೆ ಖರ್ಚಿಲ್ಲದೆ ಬರೀ ಬಾಯನ್ನೇ ಬಂಡವಾಳ ಮಾಡಿಕೊಂಡಿದ್ದ ಕೆಲವರಿಗಂತೂ ಈ ವಿವಾದದಿಂದ ಬಂಪರ್ ಲಾಟರೀನೆ ಹೊಡೆದಿದೆಯಂತೆ.... ಅಮೌಂಟು ಎಷ್ಟೆಂದು ತಕ್ಷಣ ತಿಳಿದುಬಂದಿಲ್ಲ.


ನಾರಾಯಣಗೌಡ

ಜೊತೆಗೆ ರಜನಿಕಾಂತ್ ನಿಜವಾಗಲೂ ಕ್ಷಮೆ ಕೇಳಿಲ್ಲ ಎಂಬ ಹೊಸ ವಿವಾದವನ್ನೂ ಬೆಳೆಸುವ ಪ್ರಯತ್ನ ನಡೆದಿದೆ. ಲಾಭದಲ್ಲಿ ಸಿಂಹಪಾಲು ಸಿಗದವರ ಗಲಾಟೆಯಿದು. ತಮಿಳುನಾಡಿನ ಹೊಗೇನಕಲ್ ಯೋಜನೆಯ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಭಟನೆಗಳು ನಡೆದಾಗ ಏಪ್ರಿಲ್ ತಿಂಗಳಲ್ಲಿ ಅತ್ತ ಚೆನ್ನೈನಲ್ಲಿ ಕೆಲ ತಮಿಳು ಸಿನಿಮಾ ಜನ ಚಿಪಾಕ್ ಸ್ಟೇಡಿಯಂನಲ್ಲಿ ಸೇರಿ ತಾವೊಂದು ಪ್ರತಿಭಟನೆ ಮಾಡಿದ್ದರು. ಯಾಕೆಂದರೆ ಬೆಂಗಳೂರಿನಲ್ಲೂ ಕೆಲವು ಕನ್ನಡ ಸಂಘಗಳ ಪ್ರತಿಭಟನೆಯಲ್ಲಿ ಸಿನಿಮಾದವರೂ ಭಾಗವಹಿಸುವಂತೆ ಒತ್ತಡ ಹೇರಲಾಗಿತ್ತು. ಅದಕ್ಕೆ ತಮಿಳು ಕಲಾವಿದರೂ ವಿಧಿಯಿಲ್ಲದೆ ತಮ್ಮ ಭಾಷೆ-ರಾಜ್ಯಾಭಿಮಾನ ತೋರಿಸಲು ಧರಣಿಗೆ ಹೋಗಿ ಕುಳಿತಿದ್ದರು.

ಒಂದು ಸತ್ಯ ಸಂಗತಿ ಏನೆಂದರೆ ನಮ್ಮ ಕನ್ನಡ ಸಿನಿಮಾದವರಿಗಾಗಲಿ ಅಥವಾ ತಮಿಳು ನಟರಿಗಾಗಲಿ ಹೊಗೇನಕಲ್ ವಿವಾದದ ತಲೆಬುಡ ಒಂದೂ ಗೊತ್ತಿರಲಿಲ್ಲ. ಅಷ್ಟೇ ಯಾಕೆ; ಬಹುತೇಕ ಕನ್ನಡ ಚಳವಳಿ ನಾಯಕರಿಗೂ ವಾಸ್ತವಾಂಶಗಳೇ ಗೊತ್ತಿರಲಿಲ್ಲ. ಆಕಸ್ಮಾತ್ ಗೊತ್ತಿದ್ದರೂ ಬೇಕಂತಲೇ ವಿಚಾರ ತಿರುಚಿ ಬೆಂಗಳೂರಿನಲ್ಲಿ ದೊಡ್ಡ ಗದ್ದಲ ನಡೆಸಲಾಗಿತ್ತು.


ಗಂಗರಾಜು

ನಿಜ ಏನೆಂದರೆ ಹೊಗೇನಕಲ್ ಕುಡಿಯುವ ನೀರಿನ ಯೋಜನೆಯಿಂದ ಕರ್ನಾಟಕಕ್ಕೆ ಯಾವ ಹಾನಿಯೂ ಆಗುತ್ತಿಲ್ಲ. ಆದರೆ ಹೊಗೇನಕಲ್ ಜಲಪಾತವಿರುವ ಸ್ಥಳದಲ್ಲಿ ಕರ್ನಾಟಕ-ತಮಿಳುನಾಡಿನ ಗಡಿ ವಿವಾದ ಇದೆ ಅಷ್ಟೆ. ಆದರೆ ಪ್ರತಿಯೊಂದರಲ್ಲೂ ವ್ಯಾಪಾರ ಕುದುರಿಸುವ ಕೆಲ ನಾಯಕರಿಗೆ ನಿಜ ಕಟ್ಟಿಕೊಂಡು ಏನಾಗಬೇಕು. ಸರಿ ಅವರೆಲ್ಲಾ 'ರಜನಿ ಕನ್ನಡಿಗರ ಬಗ್ಗೆ ಅವಹೇಳನ ಮಾಡಿದ್ದಾನೆಂದು' ಹುಯಿಲಿಟ್ಟರು. ಅದು ಹಾಗೇ ಮುಂದುವರೆದು 'ಕುಚೇಲನ್' ಬಿಡುಗಡೆಗೆ ತಡೆ ಎಂಬಲ್ಲಿಗೆ ಹೋಯಿತು. ಜನ, ಓಹೋ... ಇದೂ ಕನ್ನಡ ಪರ ಹೋರಾಟ ಎಂದು ನಂಬಿಕೊಂಡರು. ಒಳಗೊಳಗೇ ನಡೆದಿದ್ದೇನೆಂದು ಗಾಂಧಿನಗರ ಈಗ ಹೇಳುತ್ತಿದೆ. ರಜನಿಯ ಹಳೇ ಗೆಳೆಯ ಎಚ್.ಡಿ. ಗಂಗರಾಜುರವರು ವಿತರಕರಿಗೂ-ಕೆಲ ಕನ್ನಡ ಲೀಡರ್‌ಗಳಿಗೂ ರಾಜಿ ಮಾಡಿಸಿ ಸೂಕ್ತ ಸನ್ಮಾನ ಬಹುಮಾನಗಳನ್ನು ಕೊಡಿಸಿ ಸಮಾಧಾನ ಮಾಡಿಸಿದ್ದಾರಂತೆ. ಅದಕ್ಕೂ ಮುನ್ನ ರಜನಿಯಿಂದ ವಿಷಾದ ಸೂಚಿಸುವ ಒಂದು ಹೇಳಿಕೆಯನ್ನು ಹೇಗೂ ಕೊಡಿಸಿದ್ದರಲ್ಲ. ಹಾಗಾಗಿ ತಾಯಿ ಭುವನೇಶ್ವರಿಯ ಪುತ್ರರತ್ನರೂ ಮರುಮಾತಾಡದೆ ಬಹುಮಾನ ಈಸಿಕೊಂಡು ಜಾಗ ಖಾಲಿ ಮಾಡಿದ್ದಾರೆ.

ಈ ಹೊಗೇನಕಲ್ ಗಲಾಟೆಯ ನಡುವೆ ಚಿಕ್ಕಪೇಟೆ ಪೊಲೀಸ್ ಆಫೀಸರ್ ಒಬ್ಬನ ಅಸಮಾಧಾನದ ಹೊಗೆ ಯಾರಿಗೂ ಕಾಣಿಸದಿರುವುದು ವಿಷಾದನೀಯ.


ಇದೂ ರಕ್ಷಣಾ ವೇದಿಕೆಯ ನಾರಾಯಣಗೌಡರಿಗೆ ಸಂಬಂಧಿಸಿದ್ದು.

ಚಿಕ್ಕಪೇಟೆ ಎಸಿಪಿ ಒಬ್ಬರನ್ನು ಅದೇ ಜಾಗದಲ್ಲಿ ಉಳಿಸುವುದಾಗಿ ನಂಬಿಸಿ 20 ಲಕ್ಷ ರೂಪಾಯಿ ಸೇವಾ ಶುಲ್ಕ ತೆಗೆದುಕೊಂಡಿದ್ದಾರಂತೆ ತಾಯಿ ಭುವನೇಶ್ವರಿಯ ಪುತ್ರರತ್ನ ನಾ. ಗೌಡರು. ಆದರೆ ಕೆಲಸ ಆಗಲಿಲ್ಲವೆಂದು ಈಗ ಕಂಗಾಲಾಗಿರುವ ಮಾನ್ಯ ಎಸಿಪಿ ಸಾಹೇಬರು ಒಂದೋ ಕೆಲಸ ಮಾಡಿಕೊಡು ಇಲ್ಲಾ ದುಡ್ಡು ವಾಪಸ್ ಕೊಡು ಎಂದು ಗೋಳಾಡುತ್ತಿದ್ದಾರೆ. ಕಂಡಕಂಡವರ ಕಾಲು ಹಿಡಿದು 'ನನ್ ದುಡ್ಡು ವಾಪಸ್ ಕೊಡಿಸಿ' ಅಂತ ಕೇಳುತ್ತಿದ್ದಾರೆ.

ಕರ್ನಾಟಕದಲ್ಲಿ ಮಳೆ ಆಗದಿರಲಿ, ಬೆಳೆ ಬಾರದಿರಲಿ ಕರ್ನಾಟಕ, ಕನ್ನಡದ ಹೆಸರೇಳಿಕೊಂಡು ಒಳ್ಳೇ ಫಸಲು ಕಟಾವು ಮಾಡಿಕೊಳ್ಳಬಹುದು... ಕಾವೇರಿ ಹೋರಾಟ, ಹೊಗೇನಕಲ್ ವಿವಾದ, ಗಣಿ ರಾಷ್ಟ್ರೀಕರಣ, ಕುಚೇಲನ್ ವಿವಾದ, ವರ್ಗಾ ದಂಧೆ... ಲ್ಯಾಂಡ್ ಡೀಲುಗಳು....

ಅಬ್ಬಬ್ಬಾ ಎಂತೆಂಥ ಅವತಾರ ಪುರುಷರನ್ನು ಹೆತ್ತಿದ್ದಾಳೆ ಭುವನೇಶ್ವರಿ ತಾಯಿ!!! ■

ಊರಿಗೇ ಖಳನಾಯಕನಾದ ವಿನೋದ್ ಆಳ್ವಾ!



ತಗಡು ಚಿತ್ರಗಳ ಪಿಡುಗು ನಟ ವಿನೋದ್ ಆಳ್ವಾ ಈಗ ತನ್ನ ಹುಟ್ಟೂರಿನ ಜನರಿಗೇ ಕಂಟಕಪ್ರಾಯನಾಗಿದ್ದಾನೆ. ಮಂಗಳೂರಿನ ಹಣವಂತ ಬಂಟ ಜನಾಂಗದ ಕೆಲವರು "ಈತ ನಮ್ಮವ, ನಮ್ಮವ" ಎನ್ನುತ್ತಿದ್ದರೆ, ಈತ ಮಾತ್ರ ತನ್ನ ಹಳ್ಳಿಯ ಬಡಜನರನ್ನೇ ಮುಂಡಾಮೋಚಲು ಹವಣಿಸುತ್ತಿದ್ದಾನೆ. ತನ್ನ ಸಿನಿಮಾ ವರ್ಚಸ್ಸು ಮತ್ತು ಖ್ಯಾತಿಯನ್ನೇ ಬಂಡವಾಳ ಮಾಡಿಕೊಂಡು ಈಗ ತನ್ನ ಊರನ್ನೇ ಖಳನಾಯಕನಂತೆ ಪೀಡಿಸುತ್ತಿರುವ ಕತೆ ಇದು.

ಬೆಳ್ಳಿ ಪರದೆಯ ಮೇಲೆ ಕೆಲಕಾಲ ನಾಯಕ ನಟನಾಗಿ ಮಿಂಚಿದ ವಿನೋದ್ ಆಳ್ವಾ ತನ್ನ ಸಿನಿಮಾ ವರ್ಚಸ್ಸು ಮತ್ತು ಖ್ಯಾತಿಯನ್ನೇ ಬಂಡವಾಳ ಮಾಡಿಕೊಂಡು ಈಗ ತನ್ನ ಊರನ್ನೇ ಖಳನಾಯಕನಂತೆ ಪೀಡಿಸುತ್ತಿರುವ ಕತೆ ಇದು.

ಮೂಲತಃ ಬಂಟ್ವಾಳದ ದಬ್ಬೇಲಿಯಿಂದ ಪುತ್ತೂರಿಗೆ ವಲಸೆ ಬಂದು ನೆಲೆಯೂರಿದ ಆನಂದ ಆಳ್ವಾ ಮತ್ತು ವಿಮಲಾ ಆಳ್ವಾ ದಂಪತಿಗಳದ್ದು ಏಳು ಗಂಡು ಮತ್ತು ಐವರು ಹೆಣ್ಣು ಮಕ್ಕಳಿದ್ದ ತುಂಬು ಕುಟುಂಬ. ಅವರ ಗಂಡು ಮಕ್ಕಳಲ್ಲಿ ಆರನೆಯವನೇ ವಿನೋದ್ ಆಳ್ವಾ. ಫಿಲೋಮಿನಾ ಕಾಲೇಜಿನಲ್ಲಿ ಓದಿದ ನಂತರ ವಿನೋದ್ ಹೊಟ್ಟೆಪಾಡಿಗಾಗಿ ಹೋಟೆಲಿನಲ್ಲಿ ಮಾಣಿ ಕೆಲಸ ಅರಸಿ ಗೋವಾ ಕಡೆ ವಲಸೆ ಹೋದ. ಹತ್ತು ವರ್ಷಗಳ ಕಾಲ ಅಬ್ಬೇಪಾರಿಯಾಗಿ ಕಾಲದೂಡಿದ ಈ ಬಂಟರ ಹೈದ ಅದ್ಹೇಗೆ ಕನ್ನಡದ ಹೆಸರಾಂತ ಸಿನಿಮಾ ನಿರ್ಮಾಪಕ ಅಬ್ಬಾಯಿನಾಯ್ಡು ಅವರ ನಜರಿಗೆ ಬಿದ್ದನೋ ಏನೋ.

ಆಗ ಅಬ್ಬಾಯಿನಾಯ್ಡು ಅವರ ಮನೆ ಚಾಕರಿ ಮಾಡುತ್ತಿದ್ದ ವಿನೋದ್ ಆಳ್ವಾನದ್ದು ಎತ್ತರದ ನಿಲುವು, ಅಚ್ಚುಕಟ್ಟಾದ ಮೈಕಟ್ಟು ಮತ್ತು ನೋಡಲು ಚೆಂದವಿದ್ದ ವ್ಯಕ್ತಿತ್ವ. ಆತನ ಮೇಲೆ ಅಬ್ಬಾಯಿನಾಯ್ಡುರವರಲ್ಲಿ ಅಕ್ಕರೆ ಮೂಡಿ ಅವರು ನಿರ್ಮಿಸಿದ ಸಿನಿಮಾಗಳಲ್ಲಿ ವಿನೋದನಿಗೆ ಸೈಡ್ ರೋಲ್‌ಗಳಿಂದ ಹಿಡಿದು ಕೆಲಬಾರಿ ಹೀರೋ ಪಾತ್ರಗಳನ್ನೂ ನೀಡಿದ್ದರು. ಹೀಗೆ ವಿನೋದನ ಅದೃಷ್ಟ ಖುಲಾಯಿಸಿತ್ತು. ಆದರೆ ಕನ್ನಡದಲ್ಲಿ ಮಿಂಚಲಾರಂಭಿಸುತ್ತಿದ್ದಾಗಲೇ ಆತ ನೆರೆಯ ತೆಲುಗು ಚಿತ್ರರಂಗಕ್ಕೆ ಹಾರಿಹೋದ.

ವಿಜಯಶಾಂತಿಗೆ ಈತ 'ಅರೆ' ಹೀರೋ

ವಿಜಯಶಾಂತಿ ಎಂಬ 'ಡಿಷುಂ ಡಿಷುಂ' ನಟಿಯೇ ತೆಲುಗು ಸಿನಿಮಾಗಳಲ್ಲಿ 'ಹೀರೋ' ತರಹ ಮಿಂಚುತ್ತಿದ್ದ ಕಾಲವದು. ಆದರೂ ಆ ಚಿತ್ರಗಳಲ್ಲಿ ಆಕೆಯೊಂದಿಗೆ ಡುಯೆಟ್ ಹಾಡಲು, ಮರಗಳ ಸುತ್ತ ತಿರುಗಾಡಲು ಓರ್ವ ಪುರುಷ ನಾಯಕ ನಟ ಬೇಕಿತ್ತಲ್ಲವೇ? ಅಲ್ಲಿನ ನಾಯಕ ನಟರು ಆ 'ಜವಾಬ್ದಾರಿ'ಯನ್ನು ಹೊರಲು ನಿರಾಕರಿಸಿದಾಗ ಅದನ್ನು ತುಂಬಿದ್ದು ವಿನೋದ್ ಆಳ್ವಾ ಎಂಬ ಕನ್ನಡದ ಕುವರ!


ಅತ್ತ ವಿಜಯಶಾಂತಿಯೊಂದಿಗೆ 'ಅರೆ' ನಾಯಕನಾಗಿ 'ಭಾರತ ನಾರಿ', 'ಪೊಲೀಸ್ ಲಾಕಪ್', 'ಲೇಡಿ ಬಾಸ್' ಮತ್ತು 'ಭಾರತ ರತ್ನ'ದಂತಹ ಸಿನಿಮಾಗಳಲ್ಲಿ ಮಿಂಚುತ್ತಿದ್ದ ಈತನನ್ನು ಇತ್ತ ಕನ್ನಡ ಚಿತ್ರರಂಗ ಮರೆತೇಬಿಟ್ಟಿತು. ಆದರೆ ತುಳುನಾಡಿನ ವೀರಪುತ್ರರಾದ ಕೋಟಿ ಚೆನ್ನಯ್ಯರ ಹುಟ್ಟೂರಾಗಿದ್ದ ಪೌರಾಣಿಕ ಐತಿಹ್ಯವಿರುವ ಪಡುಮಲೆಯ ಜನ ಮಾತ್ರ "ವಿನೋದ್ ಆಳ್ವಾ ನಮ್ಮವನು" ಎಂದು ಹೆಮ್ಮೆ ಪಡುತ್ತಿದ್ದರು.

ಕಾಲಕ್ರಮೇಣ ತೆಲುಗು ಚಿತ್ರರಂಗದಲ್ಲಿ ಈತನಿಗೆ ಬೇಡಿಕೆ ಮತ್ತು ಅವಕಾಶಗಳು ಕಡಿಮೆಯಾಗಲಾರಂಭಿಸಿತು. ಹೆಚ್ಚೆಂದರೆ ಸೈಡ್ ರೋಲ್‌ಗಳು ಅಥ್ವಾ ವಿಲನ್ ರೋಲ್‌ಗಳು ಮಾತ್ರ ಸಿಗಲಾರಂಭಿಸಿದರು. ಆಗ ಪಡುಮಲೆಗೆ ಆಗೀಗ ಹೈದರಾಬಾದಿನಿಂದಲೋ ಅಥವಾ ಬೆಂಗಳೂರಿನಿಂದಲೋ ಬರಲಾರಂಭಿಸಿದ ವಿನೋದ್ ಆಳ್ವಾ ತನ್ನ ಊರಿನವರನ್ನೇ ಎಂತಹ ಖಳನಾಯಕನಾಗಿ ಪೀಡಿಸಲಾರಂಭಿಸಿದನೆಂದರೆ ಇವತ್ತು ಆತನ ಹೆಸರೆತ್ತಿದರೇ ಊರಿನ ಜನರೆಲ್ಲ ಕೆಂಡಕಾರುತ್ತಿದ್ದಾರೆ. ಈತನ ಅಟ್ಟಹಾಸವನ್ನು ನೋಡಿದರೆ, ಪಡುಮಲೆಯ ರಕ್ಷಣೆಗೆ ಕೋಟಿ ಚೆನ್ನಯ್ಯ ಮತ್ತೆ ಹುಟ್ಟಿ ಬರಬೇಕೇನೋ ಎನ್ನಿಸದಿರದು.

ಭೂ ಕಂಟಕನಾದ ಆಳ್ವಾ

ಹನ್ನೆರಡು ವರ್ಷಗಳ ಹಿಂದೆ ಪುತ್ತೂರು ಪೇಟೆಯ ಕಲ್ಲಿಮಾರ್‌ನಲ್ಲಿ ವಾಸ್ತವ್ಯವಿದ್ದ ಆಳ್ವಾ ಕುಟುಂಬ ಪಡುಮಲೆಗೆ ವಕ್ಕರಿಸಿದ್ದೇ ಒಂದು ಕತೆ. ಸುಮಾರು 200 ಎಕರೆಯಷ್ಟು ಸಾಗುವಳಿ ಭೂಮಿ ಹೊಂದಿದ್ದ ಪಡುವನ್ನೂರಿನ ಅಮ್ಮಣ್ಣ ರೈಗಳಿಗೆ ಸಂತಾನಭಾಗ್ಯವಿರಲಿಲ್ಲ. ಅವರ ನಿಧನಾನಂತರ ಅದ್ಯಾವ ಮಾಯದಲ್ಲೋ ಅವರ ಅಪಾರ ಆಸ್ತಿಯ ವಾರಸುದಾರರಾದವರು ಲಕ್ಷ್ಮೀನಾರಾಯಣ ಆಳ್ವಾ, ಶ್ರೀಧರ ಆಳ್ವಾ, ಆನಂದ ಆಳ್ವಾ ವಿನೋದ್ ಆಳ್ವಾನ ತಂದೆ ಮತ್ತು ರಾಧಾಕೃಷ್ಣ ಆಳ್ವಾ.

ಅಮ್ಮಣ್ಣ ರೈರವರ ನಿಧನಕ್ಕೂ ಮುನ್ನ ಅವರ ಗೇಣಿದಾರರಾಗಿ ಎಂಟು ಎಕರೆ ಜಮೀನನ್ನು ಅನುಭೋಗಿಸುತ್ತಾ ಬಂದಿದ್ದವರು ದೈಯಕ್ಕು ರೈ ಮತ್ತವರ ಮಕ್ಕಳಾದ ಬಾಬುರೈ ಮತ್ತು ಅನಂತ ರೈ ಸಹೋದರರು. 1972 ರಲ್ಲಿ ಭೂಸುಧಾರಣೆ ಕಾನೂನಿನನ್ವಯ ಈ ಎಂಟು ಎಕರೆ ಗೇಣಿದಾರರಿಗೆ ಸೇರಿದ್ದು ಎಂದು ಡಿಕ್ಲರೇಷನ್‌ನಲ್ಲಿ ದಾಖಲಾಗಿತ್ತು. ಆದರೆ ಅದರ ವಿರುದ್ಧ ಅಮ್ಮಣ್ಣ ರೈ ರಿಟ್ ಹಾಕಿದ್ದರು. ಆ ಕೇಸು ನ್ಯಾಯಾಲಯದಲ್ಲಿ ಇದ್ದಾಗಲೇ ಅಣ್ಣಮ್ಮ ರೈ ನಿಧನರಾದರು. ಆನಂತರ ಈ ಭೂಮಿಯನ್ನು ಆನಂದ ಆಳ್ವಾ ಅನುಭೋಗಿಸುತ್ತಾ ಬಂದು ಈಗ ಅದನ್ನು ಅವರ ಪುತ್ರ ವಿನೋದ್ ಅನುಭೋಗಿಸುತ್ತಿದ್ದಾನೆ. ಆದರೆ ಈಗಲೂ ಈ ಭೂವ್ಯಾಜ್ಯ ಬೂದಿ ಮುಚ್ಚಿದ ಕೆಂಡದಂತಿದೆ.



ಈ ಮಧ್ಯೆ ವಿನೋದ್ ಆಳ್ವಾನ ತಂದೆ ಆನಂದ ಆಳ್ವಾನ ಸಾವು ಸಹಜ ಸಾವಾಗಿರದೆ ಆತನನ್ನು ಕೊಲೆ ಮಾಡಲಾಗಿತ್ತು ಎಂಬ ಗುಮಾನಿಯನ್ನು ಹೊಂದಿರುವವರೂ ಇದ್ದಾರೆ. ಇನ್ನು ವಿನೋದನ ತಾಯಿ ವಿಮಲಾರವರು ತಮ್ಮ ನಟ ಭಯಂಕರ ಮಗನ ದರ್ಬಾರಿನಿಂದ ಮಾನಸಿಕ ಕಿರುಕುಳಕ್ಕೆ ತುತ್ತಾಗಿ ಊರನ್ನು ಬಿಟ್ಟು ದೇಶಾಂತರಿಯಾಗಿದ್ದಾರೆ. ಇದ್ದ ಒಬ್ಬ ತಮ್ಮ ಮಂಜುನಾಥನೂ ಅಣ್ಣನ ದಬ್ಬಾಳಿಕೆ ಸಹಿಸದೇ ಎಲ್ಲೋ ದೂರ ಇದ್ದಾನೆ.

ಆತನ ಸಹೋದರಿಯರ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಹೀಗೆ ವಿನೋದ್ ಆಳ್ವಾ ಎಂಬ ಓರ್ವ ಖಳನಿಂದಾಗಿ ಒಂದಿಡೀ ಕುಟುಂಬ ಊರಿಗೇ ಅಪಥ್ಯವಾಗಿದೆ. ಆದರೆ ವಿನೋದ ಮಾತ್ರ ಆಗಾಗ ತನ್ನ ಹುಟ್ಟೂರಿಗೆ ಬಿರುಗಾಳಿಯಂತೆ ಅಪ್ಪಳಿಸಿ ಇಡೀ ಪಡುಮಲೆಯನ್ನು ನಡುಗಿಸಿ ವಾಪಸ್ಸಾಗುತ್ತಿದ್ದಾನೆ.

ಮೊದಲ ಶಾಕ್

ಈ ವಿನೋದ ಆಳ್ವಾನ ಭೂಕಂಟಕ ಪ್ರವೃತ್ತಿ ಮೊದಲು ಪ್ರದರ್ಶನಗೊಂಡದ್ದು 1992ರಲ್ಲಿ. ಅಂದು ಕೋಟಿಚೆನ್ನಯ್ಯ ಕಂಬಳ ನಡೆದು ಊರಿನಲ್ಲಿ ಹಬ್ಬದ ವಾತಾವರಣವಿತ್ತು. ಅವತ್ತು ರಾತ್ರೋರಾತ್ರಿ ಅನಂತ ರೈ ಎಂಬುವವರ ಸೊಂಪಾಗಿ ಬೆಳೆದುನಿಂತಿದ್ದ ಅಡಿಕೆತೋಟಕ್ಕೆ ಬಾಡಿಗೆ ಗೂಂಡಾಗಳೊಂದಿಗೆ ನುಗ್ಗಿದ ವಿನೋದ್ ಆಳ್ವ ಇಡೀ ತೋಟಕ್ಕೆ ಅಕ್ರಮವಾಗಿ ಬೇಲಿ ಹಾಕಿಸಿ ತನ್ನ ಪೌರುಷ ಪ್ರದರ್ಶಿಸಿದ್ದ. ಆಗ ಅನಂತ ರೈ ದೂರು ಕೊಟ್ಟಿದ್ದರಿಂದ ಸಂಪ್ಯ ಪೊಲೀಸ್ ಠಾಣೆಯ ಎಸ್.ಐ. ಅಶೋಕನ್ ಮಧ್ಯ ಪ್ರವೇಶಿಸಿ ಬೇಲಿ ತೆರವುಗೊಳಿಸಿದ್ದರು.

ವಿನೋದ್ ಆಳ್ವಾನಿಗೆ ಇದನ್ನು ಸಹಿಸಲಾಗಲಿಲ್ಲವೋ ಏನೋ. ಆತನ ವಿರುದ್ಧ ದೂರು ಕೊಟ್ಟಿದ್ದ ಅನಂತ ರೈ ಮೇಲೆ ಸಂಪ್ಯದ ನಿರ್ಜನ ಪ್ರದೇಶದಲ್ಲಿ ಮಾರಣಾಂತಿಕವಾಗಿ ಹಲ್ಲೆ ಮಾಡಲಾಗಿತ್ತು. ಆ ಹಲ್ಲೆ ಕೇಸು ಸರಿಯಾದ ಸಾಕ್ಷ್ಯಾಧಾರವಿಲ್ಲದೆ ಮೂರು ವರ್ಷಗಳಲ್ಲೇ ಬಿದ್ದುಹೋಯಿತು. ತದನಂತರ ಹೈಕೋರ್ಟ್‌ನ ವಕೀಲ ಕೆ.ಸಿ. ನಟರಾಜ್ ಮಧ್ಯಸ್ಥಿಕೆಯಲ್ಲಿ ಈ ವ್ಯಾಜ್ಯದ ರಾಜೀ ಪಂಚಾಯತಿ ನಡೆದು ಅನಂತ ರೈ ಅವರಿಗೆ ಎರಡು ಎಕರೆ ತೋಟವನ್ನು ಬಿಟ್ಟುಕೊಡುವುದೆಂದೂ, ಅದರೊಂದಿಗೆ ವಿನೋದ್ ಆಳ್ವ ಒಂಬತ್ತು ಲಕ್ಷ ರೂಪಾಯಿಗಳನ್ನು ಅವರಿಗೆ ಪಾವತಿಸುವುದೆಂದೂ ತೀರ್ಮಾನವಾಗಿತ್ತು. ಹೀಗೆ ಒಂಬತ್ತು ಲಕ್ಷ ನಗದು ಮತ್ತು ಎರಡು ಎಕರೆ ಖಾಲಿ ಗುಡ್ಡವನ್ನು ಅನಂತ ರೈಗೆ ಕೊಟ್ಟು ಉಳಿದ ತೋಟವನ್ನು ತನ್ನದಾಗಿಸಿಕೊಂಡಿದ್ದ ಈ ಖಳನಾಯಕ ವಿನೋದ್ ಆಳ್ವ.

ಹೋಗಲಿ, ಇನ್ನು ಮುಂದಾದರೂ ಇಂತಹ ತಕರಾರುಗಳನ್ನು ಆತ ಮಾಡದಿದ್ದರೆ ಸಾಕು ಎಂದು ಜನ ಭಾವಿಸಿದ್ದರು. ಆದರೆ ನಾಯಿಬಾಲ ಡೊಂಕು ಎಂಬಂತೆ ವಿನೋದ್ ಆಳ್ವಾ ತನ್ನ ವಕ್ರಬುದ್ಧಿಯನ್ನು ತೊರೆಯಲು ತಯಾರಿರಲಿಲ್ಲ.

ಸ್ಥಳೀಯ ಪಟೇಲರಾಗಿದ್ದ ದಿವಂಗತ ಸಂಜೀವ್ ರೈರವರ ಆಸ್ತಿಗೆ ವಿನೋದ್ ತಗಲು ಹಾಕಿಕೊಂಡ. ಸಂಜೀವ್ ರೈರವರ ಪತ್ನಿ ತಿಲೋತ್ತಮೆಗೆ ಸೇರಿದ, ಹೆಣೆಗಾರ ಶಾಂತಪ್ಪ ಪೂಜಾರಿಗೆ ರೆಕಾರ್ಡ್ ಆಗಿದ್ದ ಒಟ್ಟು 13 ಎಕರೆ ಜಾಗವನ್ನು ಜಬರ್ದಸ್ತಿನಿಂದ ಕಿತ್ತುಕೊಂಡು ತನ್ನ ಹೆಸರಿಗೆ ಮಾಡಿಕೊಂಡ. ಆನಂತರ ಈತ ಮಾಡಿದ ಕಂತ್ರಿ ಪ್ಲಾನ್ ಏನೆಂದರೆ, ಕುತ್ಯಾಳ ದೇವಸ್ಥಾನದಿಂದ ಕಿನ್ನಿಮಾಣಿ ದೇವಸ್ಥಾನಕ್ಕೆ ಹೋಗಲು ರಸ್ತೆ ಬೇಕು ಎಂದು ತಿಲೋತ್ತಮೆಯವರನ್ನು ಛೂಬಿಟ್ಟ. ಬಲಾತ್ಕಾರವಾಗಿ ರಸ್ತೆಯನ್ನೂ ಮಾಡಿಸಿಬಿಟ್ಟ.

ಈ ಕೇಸು ಇನ್ನೂ ಕೋರ್ಟ್‌ನಲ್ಲಿ ನಡೆಯುತ್ತಿರುವಾಗಲೇ ಕಳೆದ ಜುಲೈ 20 ರಂದು ಮತ್ತೆ ಸುಮಾರು ನೂರು ಮಂದಿ ಬಾಡಿಗೆ ಗೂಂಡಾಗಳೊಂದಿಗೆ ನುಗ್ಗಿದ ವಿನೋದ್ ಆಳ್ವಾ ಅನಂತ ರೈಯವರಿಗೆ ಸೇರಿದ 50 ಸೆಂಟ್ಸು ಪಟ್ಟಾ ಮತ್ತು 2.5 ಎಕರೆ ಕುಮ್ಕಿ ಜಾಗದಲ್ಲಿ ಅಕ್ರಮವಾಗಿ ಗುಂಡಿ ತೆಗೆದು ರಬ್ಬರು ಗಿಡಗಳನ್ನು ನೆಡಿಸಿದ. ಈ ಬಗ್ಗೆ ಅನಂತ ರೈ ಪೊಲೀಸರಿಗೆ ದೂರು ಕೊಡುವ ಮುನ್ನವೇ ಅನಂತ ರೈ ತನ್ನ ತೋಟವನ್ನು ಅಕ್ರಮವಾಗಿ ಪ್ರವೇಶಿಸಿದ್ದಾರೆಂದು ವಿನೋದ್ ಆಳ್ವನೇ ಪೊಲೀಸರಿಗೆ ದೂರಿತ್ತಿದ್ದ. ಈಗ ಇಬ್ಬರ ವಿರುದ್ಧವೂ ಸೆಕ್ಷನ್ 107ರಡಿ ಕೇಸು ಬಿದ್ದವೆ. ಇದು ವಿನೋದ್ ಆಳ್ವಾನ ಲೇಟೆಸ್ಟ್ ಕಿರುಕುಳ.

ಆಳ್ವಾನ ತುಘಲಕ್ ದರ್ಬಾರು

ಅನಂತ ರೈ ತಮ್ಮ ಜೀವದಹಂಗು ತೊರೆದು ವಿನೋದನ ಉಪಟಳದ ವಿರುದ್ಧ ಸೆಟೆದು ನಿಂತಿರುವುದರಿಂದ ಆತನ ಅಕ್ರಮಗಳ ಬಗ್ಗೆ ಇಷ್ಟಾದರೂ ಬೆಳಕಿಗೆ ಬಂದಿದೆ. ಈತನ ರೌಡಿಗಿರಿಗೆ ಮತ್ತು ಪ್ರಭಾವಕ್ಕೆ ಹೆದರಿ ತಮ್ಮ ತುಂಡು ಭೂಮಿಯನ್ನೂ ಈತನಿಗೆ ಅರ್ಪಿಸಿ ಆಕಾಶ ನೋಡುತ್ತಿರುವವರ ಬಗ್ಗೆ ಬರೆದರೆ ಅದೇ ಮತ್ತೊಂದು ಉದ್ದನೆ ಕತೆಯಾಗುತ್ತದೆ.

ಅದಕ್ಕೆ ಒಂದು ಉದಾಹರಣೆ ಕೊಡುವುದಾದರೆ ನಿತ್ಯಾನಂದ ನಾಯಕ್‌ರವರಿಗೆ ಆದದ್ದನ್ನು ಹೇಳಬಹುದು. ಸ್ಥಳೀಯರೂ ಆದ, ಅನುಕೂಲಸ್ಥರೂ ಆದ ನಿತ್ಯಾನಂದ ನಾಯಕ್ ಇಂದಾಜೆಯವರು ಹತ್ತು ಎಕರೆ ಸರ್ಕಾರಿ ಭೂಮಿಯಲ್ಲಿ ಸಾಗುವಾನಿ ಮತ್ತು ಹೆಬ್ಬಲಸಿನಂಥ ಬೆಲೆಬಾಳುವ ಮರಗಳನ್ನು ಬೆಳೆಸಿದ್ದರು. ಇದು ವಿನೋದ್ ಆಳ್ವಾನ ಕಣ್ಣಿಗೆ ಬಿತ್ತು. ಕೂಡಲೇ ಆತ "ನಾನು ಇಲ್ಲೊಂದು ರೆಸಾರ್ಟ್ ಮಾಡಬೇಕು. ನೀವು ಜಾಗ ಖಾಲಿಮಾಡಿ" ಎಂದು ಸಿನಿಮಾದಲ್ಲಿ ಡೈಲಾಗ್ ಹೊಡೆದಂತೆ ಇಂದಾಜೆಯವರಿಗೆ ಧಮಕಿ ಹಾಕಿದ. ಇದಕ್ಕೆ ಹೆದರಿದ ಇಂದಾಜೆ ಮರುಮಾತಿಲ್ಲದೆ ಜಾಗ ಖಾಲಿ ಮಾಡಿ ಆತನಿಗೆ ಕೊಟ್ಟರು.


ದಿವಂಗತ ಪಟೇಲ ಸಂಜೀವ್ ರೈರವರ ಒಕ್ಕಲುದಾರರಲ್ಲಿ ಒಬ್ಬರಾದ ಇಬ್ರಾಹಿಂಗೆ ಡಿಕ್ಲರೇಷನ್‌ನಲ್ಲಿ 10 ಎಕರೆ ಲಭಿಸಿತ್ತು. ಈ ಬಡಪಾಯಿಯ ಮೇಲೆ ತನ್ನ ಕಾಕದೃಷ್ಟಿ ನೆಟ್ಟ ವಿನೋದ್ ಆಳ್ವ ಆತನನ್ನು ದಬಾಯಿಸಿ 25 ಲಕ್ಷ ತೂಗುವ ಆಸ್ತಿಯನ್ನು ಜುಜುಬಿ 8 ಲಕ್ಷಕ್ಕೆ ಪಡೆದು ತನ್ನ ಮಡಿಲಿಗೆ ಹಾಕಿಕೊಂಡ. ಕುತ್ಯಾಳಪಾದೆ ರಾಧಾಕೃಷ್ಣರೈಗೂ ಇದೇ ಗತಿಯಾಗಿದೆ.

ಹಾಗೆಯೇ ಪುತ್ತೂರಿನಲ್ಲಿ ಹೆಸರಾಂತ ವೈದ್ಯರಾಗಿದ್ದ ಕೆ.ವಿ.ಭಂಡಾರಿಯವರಿ ಕೋಟಿ ಚೆನ್ನಯ್ಯರು ಉಳುಮೆ ಮಾಡುತ್ತಿದ್ದ ಗದ್ದೆಯ ಹಕ್ಕುದಾರರಾಗಿದ್ದರು. ಅವರಿಗೆ ಸೇರಿದ ಒಟ್ಟು 16 ಎಕರೆ ಭೂಮಿಯನ್ನು ಬಲಾತ್ಕಾರವಾಗಿ ವಶಪಡಿಸಿಕೊಂಡು ವಿನೋದ್ ಆಳ್ವಾ "ನನ್ನ ತಂಟೆಗೆ

▶▶▶

ದೇವಸ್ಥಾನಕ್ಕೂ ಗಂಟುಬಿದ್ದ

ಸುಮಾರು 600ಕೂ ಹೆಚ್ಚು ಇತಿಹಾಸವಿರುವ ಕುತ್ಯಾಳ ಮಹಾವಿಷ್ಣು ದೇವಸ್ಥಾನ ಶಿಥಿಲಾವಸ್ಥೆಗೊಂಡು ಬಿದ್ದು ಹೋಗುವ ಹಂತದಲ್ಲಿತ್ತು. ಆಗ ಇದರ ಜೀರ್ಣೋದ್ಧಾರಕ್ಕೆ ಮುಂದೆ ಬಂದವರೆಂದರೆ ಸ್ಥಳೀಯ ವೆಂಕಟೇಶ ಶರ್ಮ ಮತ್ತು ಅವರ ಮೂವರು ಸಹೋದರರು. ತಲಾ 4 ಲಕ್ಷದಂತೆ 16 ಲಕ್ಷ ಕೊಟ್ಟು ಈ ಸಹೋದರರು ನೆರೆಹೊರೆಯ ದಾನಿಗಳ ಸಹಕಾರ ಪಡೆದು ದೇವಸ್ಥಾನವನ್ನು ನವೀಕೃತಗೊಳಿಸಿದರು.



ತನ್ನ ಊರಲ್ಲಿ, ಅದರಲ್ಲೂ ಮನೆ ಪಕ್ಕವೇ ಇರುವ ಈ ದೇವಳವನ್ನು ಮನಸ್ಸು ಮಾಡಿದ್ದರೆ ವಿನೋದ್ ಆಳ್ವಾ ಒಬ್ಬನೇ ಕಟ್ಟಿಸಬಹುದಿತ್ತು. ಆದರೆ ಈತ ದೇವಳಕ್ಕೆಂದು ಕೊಟ್ಟ ಹಣ ಕೇವಲ 8 ಸಾವಿರ ರೂಪಾಯಿ ಮಾತ್ರ. ಆದರೆ ಯಾವಾಗ ಈ ದೇವಳಕ್ಕೆ ಊರ-ಪರವೂರ ಭಕ್ತರು ಹಿಂಡುಹಿಂಡಾಗಿ ಬರತೊಡಗಿದರೋ ವಿನೋದ್ ಆಳ್ವಾನಿಗೆ ಅದರ ಮೊಕ್ತೇಸರನಾಗುವ ದುರಾಸೆ ಮೊಳೆಯಿತು. ತಕ್ಷಣವೇ ತನ್ನ ಎಂದಿನ ಕುತಂತ್ರ ಬಳಸಿ ವೆಂಕಟೇಶ ಶರ್ಮನನ್ನು ದೇವಸ್ಥಾನದಿಂದ ಒದ್ದೋಡಿಸಿ ತಾನೇ ಮೊಕ್ತೇಸರನಾದ.

ಈ ಆಳ್ವಾನ ಒಬ್ಬ ಸಹಾಯಕನೂ ಇದ್ದಾನೆ. ಆತನ ಹೆಸರು ಸಚ್ಚಿದಾನಂದ ಪಾಟಾಳಿ. ಊರೆಲ್ಲಾ ಸಾಲ ಮಾಡಿಕೊಂಡು, ಸಾಲಗಾರರ ಬಾಧೆಯಿಂದ ತಪ್ಪಿಸಿಕೊಳ್ಳಲು ಹಗಲುಹೊತ್ತು ಎಲ್ಲೂ ಕಾಣಿಸಿಕೊಳ್ಳಲಾಗದ ಸ್ಥಿತಿಯಲ್ಲಿರುವ. ಈಗ ವಿನೋದ್ ಆಳ್ವಾನನ್ನು ಆಶ್ರಯಿಸಿದ್ದಾನೆ. ಆಳ್ವಾನ ಕೃಷಿ ತೋಟವನ್ನು ನೋಡಿಕೊಳ್ಳುವುದರ ಜೊತೆಗೆ ದೇವಳದ ಕಾಣಿಕೆ ಡಬ್ಬಿ ತುಕ್ಕು ಹಿಡಿಯದಂತೆ ದಿನವೂ ಸ್ವಚ್ಛ ಮಾಡುವ ಸಚ್ಚಿದಾನಂದ ಪಾಟಾಳಿಯ ಕೂದಲು ಸೊಂಕಿಸಲೂ ಈಗ ಯಾರಿಂದಲೂ ಸಾಧ್ಯವಿಲ್ಲದಂತಾಗಿದೆ.

ಕುತ್ಯಾಳ ದೇವಳಕ್ಕೆ ದಾರಿ ಎಂಬ ತಂತ್ರ ಹೂಡಿದ ಆಳ್ವಾ ಎಲ್ಲರಲ್ಲೂ ದೇವರಿಗೆ ದಾರಿಬಿಡಿ ಎಂದು ಒಪ್ಪಿಸಿ ತನ್ನ ಮನೆಗೆ ನೇರ ಒಂದು ಕಿ.ಮೀ. ವರೆಗೆ ವ್ಯವಸ್ಥಿತವಾದ ರಸ್ತೆ ಮಾಡಿಸಿಕೊಂಡಿದ್ದಾನೆ. ಈತನ ತುಘಲಕ್ ದರ್ಬಾರಿಗೆ ಕೊನೆ-ಮೊದಲಿಲ್ಲವಾಗಿದೆ. ■

ಒಡಹುಟ್ಟಿದ ಅಕ್ಕನಿಗೇ ಗೂಸ!

ನಾಟ್ಯ ವಿದುಷ ಕುಡ್ಕಾಡಿ ವಿಶ್ವನಾಥ್ ರೈಯವರ ಪತ್ನಿ ನಯನ ವಿ.ರೈ, ಈಕೆ ವಿನೋದ ಆಳ್ವಾನ ಖಾಸಾ ಅಕ್ಕ. ರಂಜಿತಾ ಇವರ ಸಹೋದರಿ. ಪಡುಮಲೆ ಪಟೇಲ್ ಸಂಜೀವ ರೈಯ ಮೊದಲ ಪತ್ನಿ ವೇದಾವತಿಗೊಬ್ಬ ದತ್ತು ಪುತ್ರನಿದ್ದು ಈಶ್ವರ ಮಂಗಲದಲ್ಲಿ ವಾಸ್ತವ್ಯವಿರುವ ಆಕೆಗೂ ಈಶ್ವರ ಮಂಗಲದಲ್ಲಿ 50 ಎಕರೆಯಷ್ಟು ಅಮೂಲ್ಯ ಭೂ ಆಸ್ತಿಯಿದೆ.

ರಂಜಿತಾರನ್ನು ವೇದಾವತಿಯವರ ದತ್ತು ಪುತ್ರ ಚಂದ್ರಪ್ರಸಾದನಿಗೆ ಕೊಟ್ಟು ಮದುವೆ ಮಾಡಲು ಕುಡ್ಕಾಡಿ ದಂಪತಿಗಳು ಸಂಬಂಧ ಕುದುರಿಸಿದ್ದರು. ಆದರೆ ಇಂತಹ ಸಂಬಂಧವನ್ನು ಒಪ್ಪಲು ಆಳ್ವಾ ಸುತಾರಾಂ ತಯಾರಿರಲಿಲ್ಲ. ಆದರೆ ಸಾಕಷ್ಟು ಅನುಕೂಲಸ್ಥರ ಕಡೆಗೆ ತಮ್ಮ ಹೆಣ್ಣುಮಗಳು ಹೋಗುವುದನ್ನು ತಪ್ಪಿಸಲು ಮನಸ್ಸು ಕೇಳದೆ ಕುಡ್ಕಾಡಿ ದಂಪತಿಗಳು 15 ನೇ ತಾರೀಖು ಆಮಂತ್ರಣಪತ್ರ ಅಚ್ಚು ಹಾಕಿ 5 ದಿನ ಮೊದಲೇ ಗುಟ್ಟಾಗಿ ದೂರದ ಊರಿನಲ್ಲಿ ಮದುವೆ ಮಾಡಿಸಿಯೇ ಬಿಟ್ಟರು. ಓದಿ ವಿನೋದ್ ಆಳ್ವಾನ ಪಿತ್ತ ಕೆರಳಿಸಿತ್ತು.

ಸೀದಾ ಕಾರಲ್ಲಿ ಪಡುಮಲೆಗೆ ಬಂದ ವಿನೋದ್ ಆಳ್ವಾ ಕುಡ್ಕಾಡಿ ಮನೆ ಬಳಿ ಕಾದು ನಿಂತುಕೊಂಡು ಅಕ್ಕ ನಯನ ಹೊರಬರುತ್ತಿದ್ದಂತೆ ಆಕೆಯ ಮೇಲೆ ರಸ್ತೆಯಲ್ಲೇ ಹಲ್ಲೆ ನಡೆಸಿದ.

ಇದನ್ನೆಲ್ಲಾ ಹೀಗೆ ಬರೆಯುವುದಕ್ಕಿಂತ ವಿನೋದ್ ಆಳ್ವಾನನ್ನೇ ಹೀರೋ ಮಾಡಿ ಅಲ್ಲಲ್ಲಿ ವಿಲನ್ ಮಾಡಿ ಒಂದೊಳ್ಳೆ ಸಿನಿಮಾ ಮಾಡಬಹುದು. ಆದರೆ ಅದಕ್ಕೆ ಧೀರ ನಿರ್ಮಾಪಕರು ಬೇಕಷ್ಟೇ.

▶▶▶

ಬಂದರೆ ಹುಷಾರ್" ಎಂದು ಧಮಕಿ ಹಾಕಿದ್ದ. ಈ ಕೇಸು ಈಗಲೂ ಕೋರ್ಟ್‌ನಲ್ಲಿದೆ.

ಈಗ ಇಡೀ ಪಡುಮಲೆಯನ್ನೇ ತನ್ನ ಕೈವಶ ಮಾಡಿಕೊಳ್ಳಲು ಹೊರಟಿರುವ ವಿನೋದ್ ಆಳ್ವಾನ ತಂತ್ರಗಾರಿಕೆ ಎಂತಹದ್ದೆಂದರೆ, ಕಾಸು ಕೊಟ್ಟು ಒಂದೆರಡು ಎಕರೆ ಭೂಮಿಯನ್ನು ಖರೀದಿಸುವುದು, ಅದರ ಅಕ್ಕಪಕ್ಕ ಇರುವ ಹತ್ತಿಪ್ಪತ್ತು ಎಕರೆ ಸರ್ಕಾರಿ ಭೂಮಿಗೆ ಬೇಲಿ ಹಾಕಿಕೊಳ್ಳುವುದು, ಆನಂತರ ಅದನ್ನು ಅಕ್ರಮವಾಗಿ ತನ್ನದಾಗಿಸಿಕೊಳ್ಳುವುದು. ಇಲ್ಲ ತನ್ನ ಭೂಮಿಯ ಪಕ್ಕ ಇರುವವರ ಮೇಲೆ ದಬ್ಬಾಳಿಕೆ ನಡೆಸಿ ಅವರು ಭೂಮಿಯನ್ನೂ ತನ್ನದಾಗಿಸಿಕೊಳ್ಳುವುದು.

ಹೀಗೆ, ಇಲ್ಲಿಯತನಕ ಗೂಂಡಾಗಿರಿಯಿಂದಲೇ ಬೇರೆಯವರ ಭೂಮಿಯನ್ನು ವಿನೋದ್ ಆಳ್ವಾ ಅಕ್ರಮವಾಗಿ ತನ್ನದಾಗಿಸಿಕೊಂಡಿರುವುದನ್ನು ಲೆಕ್ಕ ಹಾಕಿದರೆ ಅದೇ ಸುಮಾರು 100 ಎಕರೆಯಷ್ಟಾಗುತ್ತದೆ. ಆದರೂ ಈತನ ವಿರುದ್ಧ ಚಕಾರವೆತ್ತುವ ಧೈರ್ಯ ಸ್ಥಳೀಯರ್‍ಯಾರಿಗೂ ಇಲ್ಲ.

ಯಾಕೆಂದರೆ ಹಿಂದೊಮ್ಮೆ ಜಯರಾಂ ಎಂಬಾತ ವಿನೋದ್ ಆಳ್ವಾನ ವಿರುದ್ಧ ಮಾತನಾಡಿದ್ದು ಆತನ ಕಿವಿಗೆ ಬಿದ್ದಿತ್ತು. ಆಗ ಜಯರಾಂನ ಮನೆಗೆ ಧಾವಿಸಿದ ಆಳ್ವಾ ಆತನನ್ನು ಎಳೆದು ತಂದು, ಸಾರ್ವಜನಿಕವಾಗಿ ಬೆತ್ತಲುಗೊಳಿಸಿ, ಮೈಂದನಡ್ಕದಲ್ಲಿ ಮೆರವಣಿಗೆ ಮಾಡಿಸಿ ಆತನನ್ನು ಚೆನ್ನಾಗಿ ಥಳಿಸಿದ್ದ. ಇಷ್ಟೊಂದು ದೌರ್ಜನ್ಯಕ್ಕೆ ಜಯರಾಂ ತುತ್ತಾಗಿದ್ದರೂ ವಿನೋದ್ ಆಳ್ವಾನ ವಿರುದ್ಧ ಪೊಲೀಸರಿಗೆ ದೂರು ಕೊಡುವಷ್ಟು ಧೈರ್ಯ ಆತನಿಗಿರಲಿಲ್ಲ. ಇದನ್ನೆಲ್ಲ ಕಣ್ಣಾರೆ ಕಂಡವರಿಗೆ ಎಲ್ಲಿಂದಾದರೂ ವಿನೋದ್ ಆಳ್ವಾನ ವಿರುದ್ಧ ದನಿಯೆತ್ತಲು ಧೈರ್ಯ ಬರಬೇಕು?

ಇದೆಲ್ಲ ಭೂಮಾಲೀಕರ ಕತೆಯಾದರೆ, ಇಲ್ಲಿನ ಕೂಲಿಯಾಳುಗಳ ವ್ಯಥೆ ಇನ್ನೊಂದು ರೀತಿಯದ್ದು. ಪಡುಮಲೆಯಲ್ಲಿ ಕೃಷಿ ಕೂಲಿ ಮಾಡಿಕೊಂಡು ಬದುಕುತ್ತಿರುವ ಸ್ಥಳೀಯ ದಲಿತರೆಲ್ಲಾ ವಿನೋದ್ ಆಳ್ವಾನ ತೋಟದಲ್ಲೇ ಕೆಲಸ ಮಾಡಬೇಕು; ಅವರು ಬೇರೆ ಕಡೆ ಬಿಡಿಸಿಕೊಂಡು ಹೋಗುವಂತಿಲ್ಲ. ಹಿಂದೊಮ್ಮೆ ಅಣ್ಣಪ್ಪ ಎಂಬಾತ ವಿನೋದ್ ಆಳ್ವಾನ ತೋಟಕ್ಕೆ ಕೂಲಿಗೆ ಬಾರದಿದ್ದಾಗ, ಆತನಿಗೆ ಈ ದುಷ್ಮನ್ ಎಂಥ ಏಟು ಕೊಡಿದ್ದನೆಂದರೆ ಆತ ಊರನ್ನೇ ಬಿಟ್ಟು ಓಡಿಹೋದ. ಇವತ್ತಿಗೂ ಆತನ ಪತ್ತೆ ಇಲ್ಲ.

ಅಣ್ಣಪ್ಪನ ತಮ್ಮ ಮಾಧವ ಇವತ್ತಿಗೂ ವಿನೋದ್ ಆಳ್ವಾನ ತೋಟದಲ್ಲಿ ಚಾಕರಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾನೆ. ಹಾಗೆಯೇ ಇನ್ನೊಬ್ಬ ಕೂಲಿ ವಾಸು ಎಂಬಾತನ ಮನೆಗೆ ವಿನೋದ್ ಆಳ್ವಾ ನುಗ್ಗಿದ್ದಾಗ ವಾಸು ಇರದಿದ್ದುದರಿಂದ ಆತನ ಹೆಂಡತಿಗೇ ನಾಲ್ಕು ಬಾರಿಸಿದ್ದ ಈ ಧೀರ ಪುರುಷ.

ಬೇದಿಕಾಳಗಳಿಗಿಂತಲೂ ಕೀಳು ಮಟ್ಟದ ವಿನೋದ್ ಆಳ್ವಾನ ಪುರಾಣ ಕೇಳಿದರೆ ನಿಜಕ್ಕೂ ಅಸಹ್ಯವೆನಿಸುತ್ತದೆ.

■ ವರದಿಗಾರ

'ಅಕ್ಕ' ಸಮ್ಮೇಳನಕ್ಕೆ ಚಡ್ಡಿಗಳ ಯಾತ್ರೆ



ಈ ಬಾರಿಯ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನ ಇದೇ ತಿಂಗಳ 29, 30, 31 ರಂದು ಅಮೆರಿಕದ ಇಲಿನಾಯ್ ರಾಜ್ಯದ ಶಿಕಾಗೋದಲ್ಲಿ ನಡೆಯಲಿದೆ. ರಾಜ್ಯದ ಹತ್ತಾರು ಮಂದಿ 'ಪ್ರತಿಭಾವಂತ' ಕಲಾವಿದರಿಗೆ, ಸಾಹಿತಿಗಳಿಗೆ, ರಾಜಕಾರಣಿಗಳಿಗೆ ಪ್ರತಿ ವರ್ಷ ಅಮೆರಿಕ 'ಯಾತ್ರೆ' ಮಾಡಿಸುವ ಈ ಸಮ್ಮೇಳನ ಸಾಕಷ್ಟು ಪ್ರಚಾರ ಪಡೆಯುತ್ತದೆ. ಹೊರನಾಡಿನಲ್ಲಿ ಕನ್ನಡ ಕೆಲಸವಾಗುತ್ತಿದೆ ಎಂಬ ಕಾರಣಕ್ಕೆ ಈ ಪ್ರಚಾರ ದೊರೆಯುತ್ತಿಲ್ಲ, ಇದರಿಂದ ಅಮೆರಿಕ ಸುತ್ತಲು ಕೆಲವರಿಗೆ ಅವಕಾಶ ದೊರಕುತ್ತದಲ್ಲ, ಆ ಕಾರಣಕ್ಕೆ ಇದೊಂದು ಪ್ರತಿಷ್ಠಿತ ಸಮ್ಮೇಳನವಾಗಿ ಮಾರ್ಪಟ್ಟಿದೆ.








ರಾಜ್ಯೋತ್ಸವ ಪ್ರಶಸ್ತಿಗಾಗಿ ನಮ್ಮ ರಾಜ್ಯದ ಪ್ರತಿಭಾವಂತರು, ಗಣ್ಯರು 'ಹೋರಾಟ' ನಡೆಸುವಂತೆ ಈ ಸಮ್ಮೇಳನದಲ್ಲಿ ಭಾಗವಹಿಸಲೂ ಸಾಕಷ್ಟು ಮಂದಿ ಪೈಪೋಟಿ ನಡೆಸುತ್ತಾರೆ. ಹೀಗಾಗಿ ಪ್ರತಿ ಈ ಸಮ್ಮೇಳನದಲ್ಲಿ ಭಾಗವಹಿಸಲು ಯಾರಿಗೆ ಅವಕಾಶ ಮಾಡಿಕೊಡಬೇಕೆಂಬುದೇ ಸರ್ಕಾರಕ್ಕೆ ದೊಡ್ಡ ತಲೆನೋವಿನ ಸಂಗತಿಯಾಗಿರುತ್ತಿತ್ತು. ಆದರೆ ಈ ಬಾರಿ ಬಿಜೆಪಿ ಸರ್ಕಾರ ಒಂದು ಸರಳ ಸೂತ್ರವನ್ನು ಅನುಸರಿಸಿದೆ. ಯಾರು ತನ್ನ ಪಕ್ಷವನ್ನು ಬೆಂಬಲಿಸಿದರೋ ಅವರನ್ನೇ ಆಯ್ಕೆ ಮಾಡಿದೆ! ಆ ಮೂಲಕ ಶಿಕಾಗೋದಲ್ಲಿಯೂ ಕಮಲದ ಕಂಪು ಬೀರಲು ಅವಕಾಶಮಾಡಿಕೊಟ್ಟಿದೆ.



ಅಮೆರಿಕದಲ್ಲಿರುವ ಕನ್ನಡಿಗರ ಸಂಘಟನೆಗಳು ಒಟ್ಟಾಗಿ ಸೇರಿ (ಅಮೆರಿಕ ಕನ್ನಡ ಕೂಟಗಳ ಆಗರ) ಈ ಸಮ್ಮೇಳನ ನಡೆಸುತ್ತಿವೆ. ವಿಶ್ವಕ್ಕೆ ಕನ್ನಡಿಗರ ಪ್ರತಿಭೆ ಮತ್ತು ಪರಂಪರೆಯ ಪ್ರದರ್ಶನ ನಡೆಸುವ ಉದ್ದೇಶದಿಂದ ಈ ಸಮ್ಮೇಳನ ನಡೆಸಲಾಗುತ್ತದೆ ಎಂದು ಅಕ್ಕ ಸಂಘಟನೆ ಹೇಳಿಕೊಳ್ಳಲಾಗುತ್ತದ್ದಾದರೂ ವಾಸ್ತವವಾಗಿ ಈ ಸಮ್ಮೇಳನ ಅಮೆರಿಕದಲ್ಲಿರುವ ಕನ್ನಡಿಗರಿಗೆ ತಮ್ಮ ಶ್ರೀಮಂತಿಕೆ, ಘನಂದಾರಿಕೆ ಮೆರೆಸಲು ಒಂದು ವೇದಿಕೆ ಕಲ್ಪಿಸಿಯಾಗಿದೆಯಷ್ಟೇ.

ಅದಕ್ಕಿಂತ ಹೆಚ್ಚಿನದ್ದೇನನ್ನೂ ಅಕ್ಕ ಸಾಧಿಸಿಲ್ಲ. ಯಾಕೆಂದರೆ ಮೂರು ದಿನಗಳ ಕಾಲ ನಡೆಯುವ ಈ ಸಮ್ಮೇಳನದಲ್ಲಿ ಕನ್ನಡದ ಸೊಗಡು ಇರುವುದಿಲ್ಲ, ಪರಂಪರೆ ಎಂದರೆ ಮೆರವಣಿಗೆ ಹೆಸರಿನಲ್ಲಿ ನಡೆಯುವ ರಥಯಾತ್ರೆ! ಇದೆಲ್ಲವೂ ಕಳೆದ ನಾಲ್ಕು ಸಮ್ಮೇಳನಗಳ ಸಂದರ್ಭದಲ್ಲಿ ಸ್ಪಷ್ಟವಾಗಿದೆ.



ಕಳೆದ ಬಾರಿ ನಡೆದ ನಾಲ್ಕನೇ ಅಕ್ಕ ಸಮ್ಮೇಳನದ ಸಾಹಿತ್ಯ ಗೋಷ್ಠಿಯಲ್ಲಿ ಬೆರಳೆಣಿಕೆ ಮಂದಿ ಕನ್ನಡಿಗರೂ ಕೂತಿರಲಿಲ್ಲ. ಶ್ರೀಮಂತರ ಮನೆಯ ಮದುವೆಯಂತೆ ಈ ಸಮ್ಮೇಳನ ನಡೆಯಿತು ಎಂದು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಸಾಹಿತಿಗಳು ಅಭಿಪ್ರಾಯ ಪಟ್ಟಿದ್ದರು. ಆದರೆ ಅಮೆರಿಕದಲ್ಲಿ ಕನ್ನಡ ಭಾಷಣ ಬಿಗಿದು ಬರಲು ಸಿಗುತ್ತಿರುವ ಅವಕಾಶವನ್ನು ನಿರಾಕರಿಸುವಷ್ಟು ಕನ್ನಡದ ಸಾಹಿತಿಗಳಿನ್ನೂ ದೊಡ್ಡವರಾಗಿಲ್ಲ!



ನಮ್ಮ ಸಾಹಿತಿಗಳಿಗೆ, ಕಲಾವಿದರಿಗೆ ಅಮೆರಿಕಕ್ಕೆ ಹೋಗುವುದೇನೂ ಸುಲಭದ ಮಾತಲ್ಲ, ವೀಸಾ ಪಡೆಯಬೇಕಾದರೆ ಹರಸಾಹಸ ಪಡಬೇಕಾದ ಸ್ಥಿತಿ ಇದೆ. ಅಷ್ಟೇ ಅಲ್ಲ, ಪ್ರಯಾಣಕ್ಕೆ ಡಾಲರ್‌ಗಟ್ಟಲೆ ದುಡ್ಡು ಸುರಿಯಬೇಕು. ಆದರೆ ಸರ್ಕಾರವೇ ಖರ್ಚು ವಹಿಸಿಕೊಂಡು ಅಮೆರಿಕ ಟ್ರಿಪ್ ಏರ್ಪಡಿಸುವಾಗ ವಿಮಾನ ಹತ್ತದೇ ಇರಲಾಗುತ್ತದೆಯೇ? ಸಮ್ಮೇಳನದಲ್ಲಿ ಏನು ನಡೆದರೂ ಅಡ್ಡಿಯಿಲ್ಲ, ನಡೆಯದಿದ್ದರೂ ಪರವಾಗಿಲ್ಲ, ಅಮೆರಿಕ ನೋಡಿದ 'ಹೆಗ್ಗಳಿಕೆ' ಹೆಗಲನ್ನೇರುತ್ತದೆಯಲ್ಲ, ಹೀಗಾಗಿ ಪ್ರತಿ ಸಮ್ಮೇಳನದ ಸಂದರ್ಭದಲ್ಲಿಯೂ ಹೆಚ್ಚಿನವರು ಅವಕಾಶಕ್ಕಾಗಿ ತುದಿಗಾಲಿನಲ್ಲಿಯೇ ನಿಂತಿರುತ್ತಾರೆ.






ಈ ಬಾರಿಯೂ ಹೀಗೇ ಆಗಿತ್ತು. ಸರ್ಕಾರ ಮಟ್ಟದಲ್ಲಿ ಭಾರೀ ಲಾಬಿ ನಡೆದಿತ್ತು. ಆದರೆ ಬಿಜೆಪಿ ಸರ್ಕಾರ ಚೆಡ್ಡಿಗಳ 'ಚಿಂತಕರ ಚಾವಡಿ' ಸೂಚಿಸಿದವರನ್ನು ಆಯ್ಕೆ ಮಾಡಿತು. ಅವರ ಪಟ್ಟಿಯನ್ನು ನೋಡಿ ಅಕ್ಕದವರು ಗಾಬರಿಗೊಂಡು ಒತ್ತಡ ಹೇರಿದರು. ಅದಕ್ಕೆ ಮಣಿದ ಸರಕಾರ ಕೊನೆಗೆ ಚಂದ್ರಶೇಖರ ಕಂಬಾರ, ಸಾಣೇಹಳ್ಳಿ ಮಠದ ಸ್ವಾಮಿ, ಸಾಹಿತಿ ಕುಂ. ವೀರಭದ್ರಪ್ಪ, ನಟಿ ತಾರಾ ಮತ್ತಿತರರನ್ನು ಪಟ್ಟಿಗೆ ಸೇರಿಸಿದೆ. ಇವರಿಲ್ಲದಿದ್ದರೆ ಬಿಜೆಪಿ ಪದಾಧಿಕಾರಿಗಳು ಅಕ್ಕ ಸಮ್ಮೇಳನದಲ್ಲಿ ಭಾಗವಹಿಸುವಂತಾಗಿರುತ್ತಿತ್ತು.

ಸರಕಾರ ಮೊದಲು ತಯಾರಿಸಿದ್ದ ಪಟ್ಟಿಯಲ್ಲಿದ್ದವರನ್ನೇ ನೋಡಿ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಸಾಹಿತ್ಯ ಕ್ಷೇತ್ರದಿಂದ ಶತಾವಧಾನಿ ಆರ್.ಗಣೇಶ್, ಮತ್ತೂರು ಕೃಷ್ಣಮೂರ್ತಿ, ಪಾಟಾಳಿ ಹಿರೇಮಗಳೂರು ಕಣ್ಣನ್, ಯಕ್ಷಗಾನ ಕುಂಬಳೆ ಸುಂದರರಾಯ, ಸುಗಮ ಸಂಗೀತ ಚೆಡ್ಡಿ ಗಾಯಕ ಸಿ. ಅಶ್ವತ್ಥ್ ತಂಡದವರು.

ಇನ್ನು ಸಿನಿಮಾರಂಗದಲ್ಲಿ ಬಿಜೆಪಿಯಲ್ಲಿರುವ ಮತ್ತು ಬೆಂಬಲಿಸುವ ಕಲಾವಿದರನ್ನು ಬಿಟ್ಟರೆ ಸರ್ಕಾರದ ಕಣ್ಣಿಗೆ ಬೇರೆ ಯಾರೂ ಕಾಣಿಸಲಿಲ್ಲ ವೇನೋ: ಬಿಜೆಪಿ ನಾಯಕ ಶ್ರೀನಾಥ್, ತಲೆಬುಡವಿಲ್ಲದೆ ಮಾತನಾಡುವ ನಾಯಕ ಸಾಯಿಕುಮಾರ್, ಬಿಜೆಪಿ ಪದಾಧಿಕಾರಿ ಮದನ್ ಪಟೇಲ್, ಬಿಜೆಪಿಯಿಂದ ಸ್ಪರ್ಧಿಸಿ ಸೋತ ಮಹೇಂದರ್, ಆತನ ಪತ್ನಿ ಅಳುಮುಂಜಿ ಖ್ಯಾತಿಯ ಶೃತಿ.

ಇನ್ನು ಅಧಿಕಾರಿಗಳ ಪಟ್ಟಿಯಲ್ಲಿ ಮುಖ್ಯಮಂತ್ರಿ ಯಡ್ಡಿಯ ಪತ್ರಿಕಾ ಕಾರ್ಯದರ್ಶಿ ಎನ್. ಭೃಂಗೀಶ್ ಹೆಸರಿದೆ.




ಇವರೆಲ್ಲರೂ ಅಮೆರಿಕದಲ್ಲಿ ಪ್ರತಿನಿಧಿಸುವ ಕನ್ನಡ, ಕನ್ನಡ ಸಂಸ್ಕೃತಿ ಹೇಗಿರುತ್ತದೆ ಎಂಬುದನ್ನೇನೂ ಬಿಡಿಸಿಹೇಳಬೇಕಾಗಿಲ್ಲ. ಒಟ್ಟಾರೆ ಕನ್ನಡಿಗರ ದುಡ್ಡಲ್ಲಿ, ಕನ್ನಡದ ಹೆಸರಿನಲ್ಲಿ ಚೆಡ್ಡಿಗಳ ಯಾತ್ರೆ ಅಮೆರಿಕಕ್ಕೆ ಹೊರಟಿದೆ.

ಅಕ್ಕ ಸಮ್ಮೇಳನದಲ್ಲಿ ಭಾಗವಹಿಸುವವರ ಈ ಪಟ್ಟಿ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಪಡೆಯುವವರ ಪಟ್ಟಿ ಹೇಗಿರುತ್ತದೆ ಎಂಬುದನ್ನು ಸೂಚಿಸುತ್ತಿದೆ.

ಪ್ರಗತಿಪರರು, ವಿಚಾರವಂತರು ಸರ್ಕಾರದ ಈ ಎಲ್ಲ ಗೌರವವನ್ನು ತಿರಸ್ಕರಿಸುವ ಮೂಲಕ ಈ ನೆಲದ ಸಂಸ್ಕೃತಿ ಕಾಪಾಡಬೇಕಾದ ತುರ್ತಿದೆ.

■ ವರದಿಗಾರ

ಹುಬ್ಬಳ್ಳಿ : ಐವರು ಹೆಂಡಿರ ಮುದ್ದಿನ ಲಾಯರ್!



ಈ ಮುದ್ದಿನ ಗಂಡನ ಹೆಸರು ಶ್ರೀಕಾಂತ್ ಶೆಳಕೆ. ವಯಸ್ಸು ಸುಮಾರು 35 ವರ್ಷ. ಗದಗ ಜಿಲ್ಲೆಯ ಮುಂಡರಗಿ ಇವನ ಊರು. ವೃತ್ತಿಯಲ್ಲಿ ವಕೀಲನಾದರೂ ಪ್ರವೃತ್ತಿಯಲ್ಲಿ ವರದಕ್ಷಿಣೆಗಾಗಿ ಒಬ್ಬರಾದ ಮೇಲೊಬ್ಬರಂತೆ ಹೆಂಗಸರನ್ನು ಮದುವೆಯಾಗುತ್ತಾ ಹೋಗುವುದು. ಸದ್ಯಕ್ಕೆ ಈಗ ಧಾರವಾಡ ಠಾಣೆಯಲ್ಲಿ ಪೊಲೀಸರ ಅತಿಥಿಯಾಗಿದ್ದಾನೆ.

ಲಾ ಓದಿಕೊಂಡ ಶ್ರೀಕಾಂತ ಊರಲ್ಲೇ ಅಲ್ಲಿ ಇಲ್ಲಿ ಸುತ್ತಾಡಿಕೊಂಡಿದ್ದ, ಅಲ್ಲಿಂದ ಸೀದಾ ಕೊಪ್ಪಳಕ್ಕೆ ಬಂದು 'ಜಾಗೃತ ಪ್ರಪಂಚ' ಎಂಬ ಹೆಸರಿನ ಒಂದು ವಾರಪತ್ರಿಕೆಯನ್ನೂ ಶುರುಮಾಡಿಕೊಂಡ. ಅದರಿಂದ ಹೊಟ್ಟೆ ತುಂಬಲಿಲ್ಲ ಅಂತ ಕಾಣುತ್ತೆ. ಅದಕ್ಕಾಗಿ ಹೊಸ ಬಿಜಿನೆಸ್ ಶುರುಮಾಡಿಕೊಂಡ. ಅದೆಂದರೆ, ಗುಟ್ಟಾಗಿ ಒಬ್ಬ ಹುಡುಗಿಯನ್ನು ಮದುವೆಯಾಗಿ ವರದಕ್ಷಿಣೆ ಪಡೆಯುವುದು, ನಂತರ ಒಂದಿಷ್ಟು ದಿನ ಅವಳೊಂದಿಗೆ ಇದ್ದು ಇದ್ದಕ್ಕಿದ್ದಂತೆ ಕಾಣೆಯಾಗಿ ಮತ್ತೊಬ್ಬ ಹುಡುಗಿಯೊಂದಿಗೆ ಮದುವೆಯಾಗಿ ವರದಕ್ಷಿಣೆ ಕೀಳುವುದು! ಈ ಬಿಸಿನೆಸ್‌ನಲ್ಲಿ ತನ್ನ ಗೆಳೆಯ ಶಿವಾಜಿರಾವ್‌ನನ್ನೂ ಪಾರ್ಟನರ್ ಮಾಡಿಕೊಂಡ.

ಇಬ್ಬರೂ ಸೇರಿ ಮೊದಲು ಪತ್ರಿಕೆಯಲ್ಲಿ 'ಕನ್ಯೆ ಬೇಕಾಗಿದ್ದಾರೆ' ಎಂದು ಒಂದು ಜಾಹಿರಾತು ಕೊಟ್ಟರು. ಇದನ್ನು ಗಂಭೀರವಾಗಿಯೇ ಪರಿಗಣಿಸಿದ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಮಾಂಬಳ್ಳಿ ಗ್ರಾಮದ ಪ್ರೇಮ ನೇರವಾಗಿ ಶಿವಾಜಿರಾವ್‌ನನ್ನು ಸಂಪರ್ಕಿಸಿದರು. ಮಾತುಕತೆಯೂ ನಡೆದು ಜೂನ್ 25, 2007ರಂದು ದೇವಸ್ಥಾನದಲ್ಲಿ ಪ್ರೇಮಾಳ ಮದುವೆ ಶ್ರೀಕಾಂತ್ ಶೆಳಕೆಯೊಂದಿಗೆ ನಡೆಯಿತು. ಪ್ರೇಮಾಳ ಪಾಲಕರಿಂದಲೇ ವರದಕ್ಷಿಣೆಯಲ್ಲದೇ ಪತ್ರಿಕೆ ನಡೆಸುವುದಕ್ಕಾಗಿ 70 ಸಾವಿರ ದುಡ್ಡನ್ನೂ ಕಿತ್ತು ಮಜಾ ಮಾಡಿದ್ದಾಯಿತು. ಅಲ್ಲಿ ಇಲ್ಲಿ ಸಾಲ ಮಾಡಿದ್ದರಿಂದ ಸಾಲಗಾರರು ಇವನ ಬೆನ್ನ ಹಿಂದೆ ಬಿದ್ದಿದ್ದರು. ಕೊನೆಗೆ ಪ್ರೇಮಾಳ ಮೈಮೇಲಿದ್ದ ಒಡವೆಗಳನ್ನೆಲ್ಲಾ ಮಾರಿದ. ಅದೂ ಸಾಕಾಗದಿದ್ದಾಗ ಇನ್ನೊಂದು ಮದುವೆ ಮಾಡಿಕೊಳ್ಳುವ ಯೋಚನೆ ಮಾಡಿದ. ಅದಕ್ಕಾಗಿ ಪ್ರೇಮಾಳನ್ನು ನರ್ಸಿಂಗ್ ತರಬೇತಿಯ ನೆಪವೊಡ್ಡಿ ಬೆಂಗಳೂರಿಗೆ ಅಟ್ಟಿದ. ಆಗ ಮದುವೆಯಾಗಿ ಇನ್ನೂ ಮೂರು ತಿಂಗಳೂ ಆಗಿರಲಿಲ್ಲ.



ಪ್ರೇಮ ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿದ್ದರೆ ಈ 'ಪತಿದೇವ' ಐದು ತಿಂಗಳಾದರೂ ಆಕೆಗೆ ಫೋನ್ ಮಾಡಲಿಲ್ಲ. ಕೊನೆಗೆ ಆಕೆಗೆ ಸಂಶಯ ಬಂದು ಸೀದಾ ಮುಂಡರಗಿಗೆ ವಾಪಸ್ಸಾದಳು. ಶ್ರೀಕಾಂತನ ಮನೆಗೆ ಹೋದರೆ ಅವನ ತಾಯಿ ಅರ್ಥಾತ್ ಪ್ರೇಮಾಳ ಅತ್ತೆ "ಯಾರಮ್ಮ ನೀನು? ಶ್ರೀಕಾಂತನಿಗೆ ಬೇರೆಯವರೊಂದಿಗೆ ಮದುವೆಯಾಗಿದೆ" ಎಂದುಬಿಟ್ಟಳು!

ಪ್ರೇಮ ಸೀದಾ ಮಹಿಳಾ ಆಯೋಗಕ್ಕೆ ದೂರು ಕೊಟ್ಟು ಶ್ರೀಕಾಂತನನ್ನು ಹುಡುಕಲಾರಂಭಿಸಿದಳು. ಆತ ಧಾರವಾಡದ ವಿಜಯನಗರದಲ್ಲಿರುವುದು ಗೊತ್ತಾಗುತ್ತಿದ್ದಂತೆ ಅಲ್ಲಿಗೆ ಧಾವಿಸಿದಳು. ಅಲ್ಲಿಯೂ ಇನ್ನೊಂದು ಅಚ್ಚರಿ ಕಾದಿತ್ತು. ಬಾಗಿಲು ತೆಗೆದ ಇನ್ನೊಬ್ಬ ಹೆಣ್ಣು ಮಗಳು "ನಾನು ಶ್ರೀಕಾಂತನ ಹೆಂಡತಿ, ನೀನು ಯಾರು, ಯಾಕೆ ಬಂದೆ" ಎಂದೆಲ್ಲಾ ಪ್ರಶ್ನಿಸಿದಳು. ಅಸಲಿಯತ್ತೇನೆಂದರೆ, ಪ್ರೇಮಾಳನ್ನು ಬೆಂಗಳೂರಿಗೆ ಕಳಿಸಿದ ಶ್ರೀಕಾಂತ 2007ರ ನವೆಂಬರ್‌ನಲ್ಲಿಯೇ ಈಕೆಯನ್ನು ಮದುವೆಯಾಗಿಬಿಟ್ಟಿದ್ದ. ಅದೂ ಕೂಡ ಪತ್ರಿಕೆಯಲ್ಲಿ ಜಾಹಿರಾತು ಕೊಟ್ಟೇ!

ಇಬ್ಬರು ಹೆಂಡಿರೂ ಒಂದಾಗಿ ಶ್ರೀಕಾಂತನಿಗೆ ಬುದ್ಧಿ ಕಲಿಸಲು ಮುಂದಾದರು. ಜಯನಗರದ ಬಾರೊಂದರಲ್ಲಿ ಶ್ರೀಕಾಂತ ಗುಂಡು ಹಾಕುತ್ತಿದ್ದಾಗಲೇ ನುಗ್ಗಿ ಬಾರಿನಲ್ಲೇ ಚಪ್ಪಲಿ ಸೇವೆ ಮಾಡಿದರು. ನಂತರ ಅವನನ್ನು ಎಳೆದುಕೊಂಡು ಹೋಗಿ ಧಾರವಾಡ ಉಪನಗರ ಪೊಲೀಸರಿಗೆ ಒಪ್ಪಿಸಿದರು. ನಂತರ ತನಿಖೆಯಲ್ಲಿ ಗೊತ್ತಾಗಿದ್ದೇನೆಂದರೆ ಇವರೆಲ್ಲರನ್ನು ಮದುವೆಯಾಗುವ ಮೊದಲೇ ಶ್ರೀಕಾಂತ ತನ್ನ ಅಣ್ಣನ ಹೆಂಡತಿಯ ತಂಗಿಯನ್ನು ಮದುವೆಯಾಗಿದ್ದ. ನಂತರ ಕೊಪ್ಪಳದ ಪ್ರೇಮಾಳನ್ನು ಮದುವೆಯಾದ. ಆನಂತರ ನರಗುಂದದ ರಾಜೇಶ್ವರಿಯನ್ನು, ಆಮೇಲೆ ಹುಬ್ಬಳ್ಳಿ ಹಾಗೂ ದಾಂಡೇಲಿಯಲ್ಲಿ ತಲಾ ಒಂದೊಂದು ಮದುವೆಯಾದ. ವಿಶೇಷ ಎಂದರೆ ತನ್ನ ಅಣ್ಣನ ಹೆಂಡತಿಯ ತಂಗಿಯನ್ನು ಹೊರತುಪಡಿಸಿ ಉಳಿದೆಲ್ಲರನ್ನೂ ಈತ ಜಾಹಿರಾತಿನ ಮೂಲಕವೇ ಬಲೆಗೆ ಕೆಡವಿಕೊಂಡಿದ್ದ. ಐವರೂ ಹೆಂಡತಿಯರು ಈಗ ಶ್ರೀಕಾಂತ ಪೊಲೀಸ್ ಠಾಣೆಯಿಂದ ಹೊರ ಬರುವುದನ್ನೇ ಕಾಯುತ್ತಿದ್ದಾರೆ. ಅವನನ್ನು ಅದ್ಯಾರು ಕಾಪಾಡುತ್ತಾರೋ?

■



ಕಳ್ಳ ರಾಘವೇಶನಿಗೆ ಅಮೃತಮಹಲ್ ಕಾಯುವ ಕೆಲಸ!

ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದ ಬಳಿ ಅಮೃತಮಹಲ್ ದನಗಳ ಅಭಿವೃದ್ಧಿ ಕೇಂದ್ರವೊಂದಿದೆ. ವ್ಯವಸಾಯವೇ ಪ್ರಧಾನವಾಗಿರುವ ನಮ್ಮ ಈ ಸಮಾಜದಲ್ಲಿ ಭೂಮಿಯ ಉಳುಮೆಗಾಗಿ ಅತ್ಯುತ್ತಮ ಅಮೃತಮಹಲ್ ತಳಿಯ ಬಲಿಷ್ಠ ಎತ್ತುಗಳನ್ನು ಒದಗಿಸುವ ದೃಷ್ಟಿಯಿಂದ 16ನೇ ಶತಮಾನದಲ್ಲಿ ವಿಜಯನಗರ ಅರಸರು ಈ ಕೇಂದ್ರವನ್ನು ಸ್ಥಾಪಿಸಿದ್ದರು. ನಂತರದಲ್ಲಿ ಇದರ ಅಭಿವೃದ್ಧಿಗಾಗಿ...... ಹಗಲಿರುಳೆನ್ನದೆ ದುಡಿದಿದ್ದರು. ಆದರೆ, ಯಡ್ಡಿ ಇದನ್ನೆಲ್ಲಾ ಒಂದೇ ದಿನದಲ್ಲಿ ಮಣ್ಣುಗೂಡಿಸಿದ್ದಾರೆ. ಅಮೃತಮಹಲ್ ಪಶುಪಾಲನಾ ಕೇಂದ್ರವನ್ನು, ಅದರ ಸಾವಿರಾರು ಎಕರೆ ಜಮೀನನ್ನು ರಾಮಚಂದ್ರಾಪುರಮಠದ ರಾಘವೇಶ್ವರನಿಗೆ ಧಾರೆಯೆರೆದಿದ್ದಾರೆ. ಕಳ್ಳಾತಿಕಳ್ಳ ರಾಘವೇಶನಿಗೆ ಅಮೃತಮಹಲ್‌ನಂತಹ ತಿಜೋರಿಯನ್ನು ಕಾಯುವ ಕೆಲಸ ಸಿಕ್ಕಿದೆಯೆಂದರೆ ಅದರ ಗತಿ ಏನಾಗಬಹುದು ನೀವೇ ಯೋಚಿಸಿ.

■ ಕುಮಾರ್ ಬುರಡಿಕಟ್ಟಿ

ಮುಖ್ಯಮಂತ್ರಿ ಯಡಿಯೂರಪ್ಪ ಮತಿಭ್ರಮಣೆಗೊಳಗಾದಂತೆ ಕಾಣುತ್ತದೆ. ಈ ಹಿಂದೆ ಕೋ-ಜಾ ಸರ್ಕಾರದಲ್ಲಿ ಇವರು ಮಂಡಿಸಿದ್ದ ಬಜೆಟ್‌ನಲ್ಲಿ ಜನಸಾಮಾನ್ಯರು ಬೆವರು ಹರಿಸಿ ಕಟ್ಟಿದ ತೆರಿಗೆ ಹಣವನ್ನು ತಮ್ಮಪ್ಪ ಮಾಡಿಟ್ಟ ಆಸ್ತಿಯೆಂಬಂತೆ ಕಂಡಕಂಡ ಮಠಮಾನ್ಯಗಳಿಗೆ ಮನಸೋಯಿಚ್ಛೆ ಕೊಟ್ಟಿದ್ದರು. ಹೀಗೆ ಬಿಟ್ಟಿ ಹಣವನ್ನು ನುಂಗಿ ನೀರು ಕುಡಿದ ಮಠಗಳಲ್ಲಿ ರಾಮಚಂದ್ರಾಪುರದ ಮಠವೂ ಒಂದು.

ಸಂಘಪರಿವಾರದೊಳಗೆ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಮತ್ತು ಬಹುಸಂಖ್ಯಾತ ಲಿಂಗಾಯತರನ್ನು, ಹಿಂದೂಗಳನ್ನು ಓಲೈಸಿ ಓಟು ಪಡೆಯುವುದಕ್ಕಾಗಿಯೋ ಯಡ್ಡಿ ಹೀಗೆ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದರು ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲ. ಆಗಲೇ ಈ ನಾಡಿನ ಪ್ರಜ್ಞಾವಂತ ಜನ ಯಡ್ಡಿಯ ಈ ಕೃತ್ಯವನ್ನು ಬಲವಾಗಿ ಖಂಡಿಸಿದ್ದರು; ಬಹುಸಂಸ್ಕೃತಿಯ, ಬಹುಧರ್ಮೀಯ ನಾಡಿನಲ್ಲಿ ಚುನಾಯಿತ ಸರ್ಕಾರ ಯಾವುದೋ ಒಂದು ಧರ್ಮದ ವಕ್ತಾರನಂತೆ ವರ್ತಿಸುವುದು ಸರಿಯಲ್ಲ ಎಂದು ಯಡ್ಡಿಯ ನಿರ್ಧಾರವನ್ನು ವಿಮರ್ಶಿಸಿದ್ದರು; ತಾವು ಕರ್ನಾಟಕದ ಹಣಕಾಸು ಮಂತ್ರಿಯೇ ಹೊರತು ಗಣಪತಿ ದೇವಸ್ಥಾನದ ಅರ್ಚಕ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಯಡ್ಡಿಗೆ ಬುದ್ಧಿ ಹೇಳಿದ್ದರು.

ಸೂಕ್ಷ್ಮ ಮನಸ್ಸಿನ ವ್ಯಕ್ತಿಯಾಗಿದ್ದರೆ ಯಡ್ಡಿ ಈ ವಿಮರ್ಶೆಗಳನ್ನು ಗೌರವಿಸುತ್ತಿದ್ದರು. ತಮ್ಮ ನಿರ್ಧಾರವನ್ನು ಬದಲಿಸಿ ಬಹುಧರ್ಮೀಯ ಸಂಸ್ಕೃತಿಗೆ ಧಕ್ಕೆಯಾಗದಂತೆ ವರ್ತಿಸುತ್ತಿದ್ದರು. ಆದರೆ ಅಂತಹ ಸೂಕ್ಷ್ಮತೆ ಯಡ್ಡಿಗೆಲ್ಲಿದೆ? ಹಾಗಾಗಿಯೇ ಪ್ರಜ್ಞಾವಂತ ಜನತೆಯ ಈ ಟೀಕೆ, ವಿಮರ್ಶೆ, ಬುದ್ಧಿವಾದಗಳೆಲ್ಲ ಯಡ್ಡಿ ಎಂಬ ಬೋರ್ಗಲ್ಲಿನ ಮೇಲೆ ಮಳೆ ಸುರಿದಂತಾಗಿತ್ತು. ಆಗಲೇ ಜಾತ್ಯತೀತ ಮನಸ್ಸುಳ್ಳ ಜನಕ್ಕೆ ಮುಂಬರುವ ಆಪತ್ತಿನ ಅರಿವಾಗಿತ್ತು. ಸಮ್ಮಿಶ್ರ ಸರ್ಕಾರದಲ್ಲಿ ಅರ್ಧ ಅಧಿಕಾರವಿದ್ದಾಗಲೇ ಹೀಗೆ ಸಂಘಪರಿವಾರದ ವಕ್ತಾರನಂತೆ ವರ್ತಿಸಿದ ಯಡ್ಡಿ ಪಕ್ಷಕ್ಕೆ ಸಂಪೂರ್ಣ ಅಧಿಕಾರವೇನಾದರೂ ದಕ್ಕಿಬಿಟ್ಟರೆ ಜನರು ಬೆವರು ಹರಿಸಿ ಕಟ್ಟಿದ ತೆರಿಗೆ ಹಣ, ಸಾರ್ವಜನಿಕ ಸಂಪತ್ತು ಮಠಮಾನ್ಯಗಳ ಪಾಲಾಗುತ್ತದೆ ಎಂಬ ಆತಂಕವನ್ನು ಆವತ್ತೆ ಅವರು ವ್ಯಕ್ತಪಡಿಸಿದ್ದರು. ಅದೀಗ ಸತ್ಯವಾಗುತ್ತಿದೆ.

ಅದಕ್ಕೊಂದು ಉದಾಹರಣೆಯೆಂದರೆ, ಶತಶತಮಾನಗಳಷ್ಟು ಪುರಾತನವಾದ ವಿಶ್ವವಿಖ್ಯಾತ ಅಮೃತಮಹಲ್ ಪಶು ತಳಿಯನ್ನು ಕಾಪಾಡಲೆಂದೇ ಸ್ಥಾಪಿಸಲಾಗಿದ್ದ ಕೇಂದ್ರವನ್ನು ಮತ್ತು ಅದರ ಸಾವಿರಾರು ಎಕರೆ ಜಮೀನನ್ನು ಈಗ ಹೊಸನಗರದ ರಾಮಚಂದ್ರಾಪುರಮಠದ ಕಳ್ಳ ರಾಘವೇಶನ ಪಾದಗಳಿಗೆ ಅರ್ಪಿಸಿಬಿಟ್ಟಿದ್ದಾರೆ ಯಡ್ಡಿ ಮಹಾಶಯರು!

ಇದು ನಾಡಿನ ಸಂಪತ್ತು!

ಈ ಅಮೃತಮಹಲ್ ಎಂಬ ದನಗಳ ಬಗ್ಗೆ ಬಹಳಷ್ಟು ಜನಕ್ಕೆ ಗೊತ್ತಿರಲಿಕ್ಕಿಲ್ಲ. ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದ ಬಳಿ ಅಮೃತಮಹಲ್ ದನಗಳ ಅಭಿವೃದ್ಧಿ ಕೇಂದ್ರವೊಂದಿದೆ. ಇದು ಇಂದು ನಿನ್ನೆ ಪ್ರಾರಂಭವಾಗಿದ್ದಲ್ಲ. 16ನೇ ಶತಮಾನದಲ್ಲಿ ವಿಜಯನಗರದ ಅರಸರು ಸ್ಥಾಪಿಸಿದ್ದ ಕೇಂದ್ರವಿದು. ವ್ಯವಸಾಯವೇ ಪ್ರಧಾನವಾಗಿರುವ ನಮ್ಮ ಈ ಸಮಾಜದಲ್ಲಿ ಭೂಮಿಯ ಉಳುಮೆಗಾಗಿ ಎತ್ತುಗಳನ್ನು ಬಳಸುವುದು ಸಾಮಾನ್ಯ. ಬೇಸಾಯವನ್ನೇ ನೆಚ್ಚಿಕೊಂಡಿರುವ ನಾಡಿನ ಬಹುಸಂಖ್ಯಾತ ರೈತರಿಗೆ ಅತ್ಯುತ್ತಮ ತಳಿಯ ಬಲಿಷ್ಠ ಎತ್ತುಗಳನ್ನು ಒದಗಿಸುವ ದೃಷ್ಟಿಯಿಂದ ವಿಜಯನಗರದ ಅರಸರು ಈ ಕೇಂದ್ರವನ್ನು ಸ್ಥಾಪಿಸಿದ್ದರು. ಬೇಸಾಯಕ್ಕೆ ಬಳಸುವ ವಿಶ್ವದ ಯಾವುದೇ ತಳಿಗಳಿಗೆ ಹೋಲಿಸಿದರೂ ಈ ಅಮೃತಮಹಲ್ ತಳಿ ಅಗ್ರ ಸ್ಥಾನದಲ್ಲಿ ನಿಲ್ಲುತ್ತದೆ.

ಮೂಲತಃ ಉತ್ತರ ಪ್ರದೇಶದವರಾದ ಗೊಲ್ಲರು ಮತ್ತು ಅವರ ಉಪಪಂಗಡವಾದ ಹಳ್ಳಿಕಾರ್ ಜನಾಂಗದವರು ತಮ್ಮ ರಾಸುಗಳೊಂದಿಗೆ ಇಲ್ಲಿಗೆ ವಲಸೆ ಬಂದು ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ನೆಲೆಸಿ ಈ ಅಮೃತಮಹಲ್ ರಾಸುಗಳನ್ನು ಅಭಿವೃದ್ಧಿಪಡಿಸಿದರು ಎಂದು ಹೇಳಲಾಗುತ್ತದೆ. ಬೆಟ್ಟಗುಡ್ಡಗಳಿಂದ ಕೂಡಿದ ಸಾವಿರಾರು ಕಿ.ಮೀ.ಗಳ ಅತ್ಯಂತ ದುರ್ಗಮ ರಸ್ತೆಯನ್ನು ದಾಟಿ ಬರುವುದಕ್ಕೆ ಅಮೃತಮಹಲ್ ತಳಿಗಳಿಂದ ಮಾತ್ರವೇ ಸಾಧ್ಯ ಎಂದು ಕ್ಯಾಪ್ಟನ್ ಡೇವಿಡ್ಸನ್ ಮೆಚ್ಚುಗೆ ವ್ಯಕ್ತಪಡಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಈ ರಾಸುಗಳನ್ನು ಅಫಘಾನಿಸ್ತಾನ ಯುದ್ಧದಲ್ಲಿಯೂ ಬಳಸಲಾಗಿತ್ತೆಂದು ಹೇಳುತ್ತಾರೆ. ದಿನವೊಂದಕ್ಕೆ ಹದಿನಾರು ಗಂಟೆಗಳ ಕಾಲ ತಮ್ಮ ಹೆಗಲ ಮೇಲೆ ನೊಗಹೊತ್ತು ನಿರಾಯಾಸವಾಗಿ ಕೆಲಸ ಮಾಡಬಲ್ಲ ಈ ತಳಿಗಳಿಗೆ ಹೋಲಿಕೆಯಾಗುವ ಬೇರೊಂದು ತಳಿ ಎಲ್ಲೂ ಇರಲಿಕ್ಕಿಲ್ಲ.

ಇಂತಹ ಅತ್ಯಮೂಲ್ಯ ತಳಿಗಳನ್ನು ಕಾಪಾಡಿಕೊಂಡು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ವಿಜಯನಗರದ ಅರಸರು ಪ್ರಾರಂಭಿಸಿದ ಅಮೃತ ಮಹಲ್ ಪಶುಪಾಲನಾ ಕೇಂದ್ರ ತದನಂತರದಲ್ಲಿ ಮೈಸೂರು ಒಡೆಯರ ರಾಜಾಶ್ರಯವನ್ನು ಪಡೆದು ಮತ್ತಷ್ಟು ಅಭಿವೃದ್ಧಿ ಹೊಂದಿತು. ಜಯಚಾಮರಾಜ ಒಡೆಯರು, ಕಂಠೀರವ ನರಸಿಂಹರಾಜ ಒಡೆಯರು, ಚಿಕ್ಕದೇವರಾಜ ಒಡೆಯರು ಈ ಅಮೃತಮಹಲ್ ರಾಸುಗಳನ್ನು ತಾವೇ ಖುದ್ದಾಗಿ ವೀಕ್ಷಿಸಿ ಅತ್ಯುತ್ತಮ ರಾಸುಗಳನ್ನು ತಾವೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಹೈದರ್ ಅಲಿ ಮತ್ತು ಟಿಪ್ಪೂ ಸುಲ್ತಾನ್ ಕೂಡ ಈ ತಳಿಗಳ ಅಭಿವೃದ್ಧಿಗೆ ವಿಶೇಷ ಮಹತ್ವ ಕೊಟ್ಟಿದ್ದರು. ಟಿಪ್ಪೂ ಸುಲ್ತಾನ್ ಅಂತೂ ಅಮೃತಮಹಲ್ ತಳಿಗಳನ್ನು ರಕ್ಷಿಸುವುದಕ್ಕೆ, ಅಭಿವೃದ್ಧಿಪಡಿಸುವುದಕ್ಕೆ ಎಲ್ಲಿಲ್ಲದ ಕಾಳಜಿ ವಹಿಸಿದ್ದ. ಆತನ ಸೈನ್ಯದಲ್ಲಿ ಅರವತ್ತು ಸಾವಿರ ಕೊಬ್ಬಿದ ಅಮೃತಮಹಲ್ ತಳಿಗಳನ್ನು ಯುದ್ಧಕ್ಕಾಗಿ ಮೀಸಲಿಟ್ಟಿದ್ದ!



ತದನಂತರದಲ್ಲಿ ಅಧಿಕಾರಕ್ಕೆ ಬಂದ ಪರಂಗಿ ಬ್ರಿಟಿಷರೂ ಕೂಡ ಈ ಕೇಂದ್ರವನ್ನು ಮುಚ್ಚುವ ಅಥವಾ ಖಾಸಗಿ ವ್ಯಕ್ತಿಗಳಿಗೆ, ಮಠಮಾನ್ಯಗಳಿಗೆ, ಚರ್ಚುಗಳಿಗೆ ವಹಿಸಿಕೊಡುವ ದಾರ್ಷ್ಟ್ಯ ತೋರಲಿಲ್ಲ. ಸರ್ಕಾರವೇ ಅದರ ಅಭಿವೃದ್ಧಿಯನ್ನು ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಿದ್ದರು. ಸ್ವಾತಂತ್ರ್ಯಾನಂತರದಲ್ಲಿ ಆಡಳಿತಕ್ಕೆ ಬಂದ ನಮ್ಮದೇ ಸರ್ಕಾರಗಳು ಅಮೃತಮಹಲ್ ತಳಿಗಳ ಅಭಿವೃದ್ಧಿಗೆ ಕೊಡಬೇಕಾದಷ್ಟು ಗಮನ ಕೊಡದೇ ಹೋಗಿದ್ದರಿಂದ ಅದು ಅಧೋಗತಿಯ ದಾರಿಯನ್ನು ಹಿಡಿಯಿತು. ಒರಿಜಿನಲ್ ಅಮೃತಮಹಲ್ ತಳಿಗಳನ್ನು ಕಾಪಾಡುತ್ತಾ ಕೃತಕ ಗರ್ಭದಾರಣೆಯ ಮೂಲಕ ಅವುಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿ ರೈತರಿಗೆ ಕಡಿಮೆ ಬೆಲೆಯಲ್ಲಿ ಒದಗಿಸುವುದನ್ನೇ ಧ್ಯೇಯವನ್ನಾಗಿಟ್ಟುಕೊಂಡ ಅಮೃತಮಹಲ್ ಪಶುಪಾಲನಾ ಕೇಂದ್ರ ಭ್ರಷ್ಟ ಸರ್ಕಾರ ಮತ್ತು ಅಧಿಕಾರಿಗಳ ಸಾರಥ್ಯದಲ್ಲಿ ಸೊರಗಲಾರಂಭಿಸಿತು.

ಅಂದು ಈ ತಳಿಗಳ ಅಭಿವೃದ್ಧಿಗಾಗಿಯೇ ನಮ್ಮ ರಾಜ್ಯದ ಆರು ಜಿಲ್ಲೆಗಳಲ್ಲಿ ಸುಮಾರು ನಾಲ್ಕೂವರೆ ಲಕ್ಷ ಎಕರೆ ಜಮೀನನ್ನು ಮೀಸಲಿಡಲಾಗಿತ್ತು. ಅದನ್ನೆಲ್ಲಾ ಸರ್ಕಾರಗಳು ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗಿಸಿ ಇಂದು ಕೇವಲ ಕೆಲವೇ ಕೆಲವು ಸಾವಿರ ಎಕರೆ ಮಾತ್ರ ಉಳಿದುಕೊಂಡಿದೆ. ಅಮೃತಮಹಲ್ ತಳಿಗಳ ನಿರ್ನಾಮ ಮಾಡಲು ನಮ್ಮ ಹಿಂದಿನ ಸರ್ಕಾರಗಳು ಕೈಗೊಂಡ ಈ ಪುಣ್ಯಕಾರ್ಯವನ್ನು ಈಗ ಸನ್ಮಾನ್ಯ ಯಡಿಯೂರಪ್ಪನವರು ಪೂರ್ಣಗೊಳಿಸಿದ್ದಾರೆ. ಅಮೃತ ಮಹಲ್ ತಳಿಗಳ ಬಗ್ಗೆ ಪರಂಗಿ ಬ್ರಿಟಿಷರಿಗೂ ಇಲ್ಲದ ತಾತ್ಸಾರ ಈ ಯಡ್ಡಿಗೆ ಬಂದಿರುವುದು ಈ ನಾಡಿನ ದುರಂತ.

ರಾಜ್ಯ ಮಟ್ಟದಲ್ಲಿ ಸರ್ಕಾರಗಳು ನಿರ್ಲಕ್ಷ್ಯ ವಹಿಸಿದ್ದರೂ ಅಮೃತಮಹಲ್ ಕೇಂದ್ರದಲ್ಲಿದ್ದ ಕೆಲ ನಿಷ್ಠಾವಂತ ಅಧಿಕಾರಿಗಳು ಇದ್ದುದರಲ್ಲಿಯೇ ಈ ತಳಿಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ, ಬೇರೆ ದನಗಳೊಂದಿಗೆ ಬೆರಕೆಯಾಗದಂತೆ ರಕ್ಷಿಸಿಕೊಳ್ಳುವುದಕ್ಕೆ ವಿಶೇಷ ಗಮನ ಕೊಟ್ಟಿದ್ದರು. 1950ರಲ್ಲಿ ಈ ಕೇಂದ್ರದ ಮುಖ್ಯಾಧಿಕಾರಿಯಾಗಿದ್ದ ವೆಂಕಟರಾಮ್ ಎಂಬುವವರು ಈ ತಳಿಗಳ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ದುಡಿದದ್ದು ಇನ್ನೂ ಜನರ ನೆನಪಿನಲ್ಲಿದೆ. ಆದರೆ ಅವರ ನಂತರದಲ್ಲಿ ಬಂದ ಅಧಿಕಾರಿಗಳೂ, ಸರ್ಕಾರಗಳೂ ಈ ಕಡೆ ಕಣ್ಣು ಹಾಯಿಸಿ ನೋಡಲಿಲ್ಲ. ನಂತರದಲ್ಲಿ ಮತ್ತೊಬ್ಬ ದಕ್ಷ ಮತ್ತು ಅನುಭವಿ ಅಧಿಕಾರಿ ಡಾ. ಕೃಷ್ಣಮೂರ್ತಿ ಈ ಕೇಂದ್ರಕ್ಕೆ ಬಂದರು. ಆದರೆ ಅಷ್ಟು ಹೊತ್ತಿಗಾಗಲೇ ಅಮೃತಮಹಲ್ ಅವಸಾನದ ದಾರಿಯಲ್ಲಿ ಬಹಳಷ್ಟು ದೂರ ಸಾಗಿತ್ತು. ಆದರೆ ಛಲಬಿಡದ ತ್ರಿವಿಕ್ರಮನಂತೆ ಅವರು ಅಲ್ಲಿರುವತನಕ ಅದರ ಅಭಿವೃದ್ಧಿಗಾಗಿ ದುಡಿದರು. ಈಗ ಇವರೆಲ್ಲರ ದುಡಿಮೆಯನ್ನು ಯಡ್ಡಿ ಒಂದೇ ದಿನದಲ್ಲಿ ಮಣ್ಣುಗೂಡಿಸಿಬಿಟ್ಟಿದ್ದಾರೆ.

ಅಭಿವೃದ್ಧಿಗಾಗಿಯೇ ಕೊಟ್ಟಿದ್ದಾರಂತೆ!

ಈ ಬಗ್ಗೆ ನೀವು ಖುದ್ದು ಯಡ್ಡಿಯನ್ನೇ ಪ್ರಶ್ನಿಸಬೇಕು. "ತಾವು ಅಮೃತಮಹಲ್ ತಳಿಗಳನ್ನು ರಕ್ಷಿಸಿ ಅಭಿವೃದ್ಧಿಪಡಿಸುವುದಕ್ಕಾಗಿಯೇ ರಾಮಚಂದ್ರಾಪುರ ಮಠಕ್ಕೆ ಕೊಟ್ಟಿರುವುದು" ಎಂದು ಪುಂಗಿ ಊದುತ್ತಾರೆ. ಪಾಪ ಈ ನಾಡಿನ ಜನ ಕಿವಿಯಲ್ಲಿ ಹೂವು ಇಟ್ಟುಕೊಂಡಿದ್ದಾರೆ ಅಂತ ಅವರು ಭಾವಿಸಿರಬೇಕು.

ಅಮೃತಮಹಲ್ ತಳಿಯನ್ನು ನಿಜವಾಗಿಯೂ ಅಭಿವೃದ್ಧಿಪಡಿಸಬೇಕೆಂಬ ಕಾಳಜಿ ಯಡ್ಡಿಗೆ ಇದ್ದಿದ್ದರೆ ತಮ್ಮ ಸರ್ಕಾರದಿಂದಲೇ ಮುತುವರ್ಜಿ ವಹಿಸಿ ಆ ಕೇಂದ್ರಕ್ಕೆ ದಕ್ಷ ಅಧಿಕಾರಿಗಳನ್ನು ನೇಮಿಸಬಹುದಿತ್ತು. ಅದರ ಅಭಿವೃದ್ಧಿಗಾಗಿ ಅಗತ್ಯ ಹಣ ಬಿಡುಗಡೆ ಮಾಡಿ ಅಭಿವೃದ್ಧಿಪಡಿಸಬಹುದಿತ್ತು. ಅದನ್ನು ಬಿಟ್ಟು ಕಂಡಕಂಡವರಿಗೆ ವಹಿಸಿಕೊಡುತ್ತಾರೆಂದರೆ ಏನರ್ಥ? ಕನಿಷ್ಠ ಅಮೃತಮಹಲ್‌ನಂತಹ ಒಂದು ಕೇಂದ್ರವನ್ನು ನಡೆಸಲಾರದಷ್ಟು, ಅಭಿವೃದ್ಧಿಪಡಿಸಲಾರದಷ್ಟು ನಿಸ್ತೇಜವಾಗಿಬಿಟ್ಟದೆಯೇ ಯಡ್ಡಿಯ ಸರ್ಕಾರ? ಎಲ್ಲ ಕೆಲಸಗಳನ್ನು ಖಾಸಗಿಯವರಿಗೆ, ಮಠಮಾನ್ಯಗಳಿಗೆ ವಹಿಸುವುದಾದರೆ ಈ ಸರ್ಕಾರ ಕತ್ತೆಯ ಹಲ್ಲು ಉಜ್ಜೋಕಾ ಇರೋದು?


ಯಡ್ಡಿಯ ಅಭಿವೃದ್ಧಿ ಮಂತ್ರ ತೋರಿಕೆಗೆ ಮಾತ್ರ. ಆದರ ಅಸಲೀಯತ್ತೇ ಬೇರೆ ಇದೆ.

ಇವತ್ತು ಎಲ್ಲಾ ಸರ್ಕಾರಗಳು, ಭ್ರಷ್ಟ ಅಧಿಕಾರಿಗಳು ಮನಸೋಯಿಚ್ಛೆ ಕೊಳ್ಳೆ ಹೊಡೆದ ಮೇಲೂ ಅಮೃತಮಹಲ್‌ನ ಆಸ್ತಿ ಬೇಕಾದಷ್ಟಿದೆ. ರಾಸುಗಳಿಗೆ ಮೇಯುವುದಕ್ಕೆ ಮೀಸಲಿಡಲಾದ ಸಾವಿರಾರು ಎಕರೆ ಫಲವತ್ತಾದ ಭೂಮಿಯಿದೆ. ಈ ಹುಲ್ಲುಗಾವಲಿನಲ್ಲಿ ಅಮೃತಮಹಲ್ ದನಗಳು ಮೇಯಬೇಕಿತ್ತು. ದುರಂತ ಎಂದರೆ, ಅದರಲ್ಲಿ ರಾಘವೇಶ ಮೇಯುತ್ತಾನಷ್ಟೆ!

ಈಗ್ಗೆ ಒಂದು ವರ್ಷದ ಹಿಂದೆ ಇದೇ ರಾಘವೇಶ್ವರನ ಶಿವಮೊಗ್ಗ ಜಿಲ್ಲೆಯ ಹೊಸನಗರದ ಬಳಿಯಿರುವ ತನ್ನ ರಾಮಚಂದ್ರಾಪುರ ಮಠದಲ್ಲಿ ವಿಶ್ವ ಗೋ ಸಮ್ಮೇಳನ ಮಾಡಿದ್ದ. ಗೋ ಸಮ್ಮೇಳನ ಎಷ್ಟು ಯಶಸ್ವಿಯಾಯಿತೋ ಗೊತ್ತಿಲ್ಲ. ಆದರೆ ಅದರ ಹೆಸರಿನಲ್ಲಿ ಜನರಿಂದ, ರಾಜಕಾರಣಿಗಳಿಂದ, ಅಧಿಕಾರಿಗಳಿಂದ ಕೊನೆಗೆ ಸರಕಾರದಿಂದ ದುಡ್ಡು ಎತ್ತಿ ತನ್ನ ಚೀಲಕ್ಕೆ ಹಾಕಿಕೊಂಡ. ಅಂದು ಯಡ್ಡಿಯೇ ಜನರ ದುಡಿಮೆಯ ಎರಡು ಕೋಟಿ ರೂಪಾಯನ್ನು ಈ ರಾಘವೇಶ್ವರನ ಕಾಲಡಿಗೆ ಸುರಿದಿದ್ದ.

ಅಷ್ಟು ಸಾಲದೆಂಬಂತೆ ಈ ರಾಘವೇಶ್ವರನ ಸಮ್ಮೇಳನದ ಹೆಸರಿನಲ್ಲಿ ಅಕ್ಕಪಕ್ಕದ ಅರಣ್ಯ ಭೂಮಿಯನ್ನೆಲ್ಲಾ ಒತ್ತುವರಿ ಮಾಡಿಕೊಂಡು ಬೇಲಿ ಹಾಕಿಕೊಂಡಿದ್ದ. ಇಂತಹ ಕಳ್ಳಾತಿಕಳ್ಳನಿಗೆ ಅಮೃತಮಹಲ್‌ನಂತಹ ತಿಜೋರಿಯನ್ನು ಕಾಯುವ ಕೆಲಸ ಸಿಕ್ಕಿದೆಯೆಂದರೆ ಅದರ ಗತಿ ಏನಾಗಬಹುದು ನೀವೇ ಯೋಚಿಸಿ.

ಇದು ಯಡ್ಡಿ ಸರ್ಕಾರದ ಭ್ರಷ್ಟಾಚಾರದ, ಕಂದಾಚಾರದ ಆರಂಭವಷ್ಟೆ. ಈ ನಾಡಿನ ಜನ ನೋಡಬೇಕಾದದ್ದು ಇನ್ನೂ ಬಹಳ ಇದೆ. ■













ಭಾರತಕ್ಕೆ ಒಲಂಪಿಕ್ ಮೆಡಲ್ ಯಾಕೆ ಸಿಗುತ್ತಿಲ್ಲ?

2008ರ ಒಲಂಪಿಕ್ ಕ್ರೀಡೆಗಳು ಪ್ರಾರಂಭವಾಗುವುದಕ್ಕೆ ಕ್ಷಣಗಣನೆ ಶುರುವಾಗಿದೆ. ಇದಕ್ಕಾಗಿ ಚೀನಾದ ಬೀಜಿಂಗ್‌ನಲ್ಲಿರುವ ಹಕ್ಕಿಗೂಡು (Birds Nest) ಕ್ರೀಡಾಂಗಣ ಸಂಭ್ರಮದಿಂದ ಶೃಂಗಾರಗೊಂಡು ನಿಂತಿದೆ. ವಿಶ್ವದ ಹಲವಾರು ದೇಶಗಳ ಕ್ರೀಡಾಪಟುಗಳಂತೆ ಭಾರತದ ಕ್ರೀಡಾಪಟುಗಳೂ ಈ ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ ಕಾತುರರಾಗಿ ನಿಂತಿದ್ದಾರೆ. ಈ ಸಂದರ್ಭದಲ್ಲಿ 'ಭಾರತಕ್ಕೆ ಏಕೆ ಅತ್ಯಂತ ಕಡಿಮೆ ಒಲಂಪಿಕ್ ಮೆಡಲ್‌ಗಳು ಸಿಗುತ್ತಿವೆ?' ಎಂಬ ಪ್ರಶ್ನೆ ಮತ್ತಷ್ಟು ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ.

ಪ್ರಪಂಚದ ಜನಸಂಖ್ಯೆಯಲ್ಲಿ ಭಾರತ ಹೊಂದಿರುವ ಪಾಲಿಗೂ ಹಾಗೂ ಒಟ್ಟಾರೆ ಒಲಂಪಿಕ್ ಮೆಡಲ್‌ಗಳನ್ನು ಪಡೆಯುವಲ್ಲಿನ ಅದರ ಪಾಲಿಗೂ ಹೋಲಿಸಿ ನೋಡಿ. 2004ರ ಒಲಂಪಿಂಕ್‌ನ ಒಟ್ಟು 929 ಮೆಡಲ್‌ಗಳಲ್ಲಿ ಭಾರತಕ್ಕೆ ದಕ್ಕಿದ್ದು ಕೇವಲ ಒಂದು ಮಾತ್ರ. ಅಂದರೆ, ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಭಾರತದ ಪಾಲು ಶೇ.10ರಷ್ಟಿದ್ದರೆ ಒಲಂಪಿಕ್ ಮೆಡಲ್‌ಗಳಲ್ಲಿ ಅದರ ಶೇ.1ಕ್ಕಿಂತ ಕಡಿಮೆ!

ಇನ್ನೊಂದೆಡೆ ನೋಡಿ. ಭಾರತದ ಜನಸಂಖ್ಯೆಯ ಶೇ.10ಕ್ಕಿಂತಲೂ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಟರ್ಕಿ ಹತ್ತು ಒಲಂಪಿಕ್ ಮೆಡಲ್‌ಗಳನ್ನು ಗೆದ್ದಿತು. ಭಾರತದ ಜನಸಂಖ್ಯೆಯ ಶೇ. 6ರಷ್ಟು ಜನಸಂಖ್ಯೆಯನ್ನು ಹೊಂದಿರುವ ಥೈಲ್ಯಾಂಡ್ ಎಂಟು ಮೆಡಲ್‌ಗಳನ್ನು ಗೆದ್ದಿತು. ಆದರೆ ಪ್ರಪಂಚದ ಶೇ. ಹತ್ತರಷ್ಟು ಜನಸಂಖ್ಯೆಯನ್ನು ಹೊಂದಿರುವ ಭಾರತಕ್ಕೆ ದಕ್ಕಿದ್ದು ಕೇವಲ ಒಂದೇ ಒಂದು ಮೆಡಲ್! ಆಸ್ಟ್ರೇಲಿಯವು ತನ್ನ ಪ್ರತಿ ಹತ್ತು ಲಕ್ಷ ಜನರಿಗೆ 2.04 ಮೆಡಲ್‌ಗಳಂತೆ ಒಟ್ಟು 37 ಮೆಡಲ್‌ಗಳನ್ನು ಗಳಿಸಿತು. ಆದರೆ ಭಾರತ ತನ್ನ ಪ್ರತೀ ಹತ್ತು ಲಕ್ಷ ಜನರಿಗೆ 0.0009 ಮೆಡಲ್‌ನಂತೆ ಒಟ್ಟು ಒಂದು ಮೆಡಲ್ ಮಾತ್ರ ಗಳಿಸಿತ್ತು.

ಭಾರತ ಅಗಾಧ ಜನಸಂಖ್ಯೆಯನ್ನು ಹೊಂದಿದ್ದರೂ ಒಲಂಪಿಕ್ಸ್‌ನಲ್ಲಿ ಕಡಿಮೆ ಮೆಡಲ್‌ಗಳನ್ನು ಗಳಿಸುತ್ತಿರುವುದೇಕೆ? ಇಲ್ಲಿ ಸಮರ್ಥರು, ಪ್ರತಿಭಾವಂತರು ಇಲ್ಲ ಎಂದರ್ಥವೆ?

ಈ ವಿಚಾರವಾಗಿ ಈ ಹಿಂದೆ ಕೆಲವರು ವಿಶ್ಲೇಷಣೆ ನಡೆಸಿ ಒಲಂಪಿಕ್ಸ್‌ನಲ್ಲಿ ಭಾರತದ ಕಳಪೆ ಪ್ರದರ್ಶನವನ್ನು ಅದರ ಜಿಡಿಪಿಗೆ ತಳಕು ಹಾಕಿದ್ದರು. ಅಂದರೆ ಭಾರತವು ಇತರ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಕಡಿಮೆ ಜಿಡಿಪಿಯನ್ನು ಹೊಂದಿರುವುದರಿಂದ (ಬಡತನದಲ್ಲಿರುವುದರಿಂದ ಎಂದು ಬೇಕಾದರೂ ಹೇಳಬಹುದು) ಇಲ್ಲಿನ ಪ್ರತಿಭೆಗಳು ಅರಳುವುದಕ್ಕೆ ಅಡೆತಡೆಯುಂಟಾಗಿದೆ ಎಂದಿದ್ದರು. ಇದು ಒಂದಿಷ್ಟು ಮಟ್ಟಿಗೆ ಸತ್ಯವಾದರೂ ಇದೇ ಪರಿಪೂರ್ಣ ಸತ್ಯವಲ್ಲ. ಏಕೆಂದರೆ ಭಾರತಕ್ಕಿಂತ ಅತ್ಯಂತ ಕಡಿಮೆ ಜಿಡಿಪಿಯನ್ನು ಹೊಂದಿರುವ ಕ್ಯೂಬಾ, ಇಥೋಪಿಯ, ಖಜಕಿಸ್ತಾನ, ಕೀನ್ಯಾ ಮತ್ತು ಉಜ್ಬೇಕಿಸ್ತಾನದಂತ ದೇಶಗಳಲ್ಲಿ ಭಾರತಕ್ಕೆ ಹೋಲಿಸಿದರೆ ಜನಸಂಖ್ಯೆಯೂ ಅತ್ಯಂತ ಕಡಿಮೆ, ಅವುಗಳ ಜಿಡಿಪಿಯೂ ಅತ್ಯಂತ ಕಡಿಮೆ. ಆದರೂ ಒಲಂಪಿಕ್ಸ್‌ನಲ್ಲಿ ಅವು ಭಾರತಕ್ಕಿಂತ ಹೆಚ್ಚು ಮೆಡಲ್‌ಗಳನ್ನು ಗೆದ್ದಿವೆ.

ಹಾಗಿದ್ದರೆ ಕಾರಣವೇನು?

ಭಾರತದಲ್ಲಿ ಜನಸಂಖ್ಯೆ ಜಾಸ್ತಿಯಿದ್ದರೂ ಅವರೆಲ್ಲರಿಗೂ ಸ್ಪರ್ಧಾತ್ಮಕ ಆಟಗಳಲ್ಲಿ ಭಾಗವಹಿಸುವ ಅವಕಾಶ ಇಲ್ಲದಿರುವುದೇ ಇದರ ಹಿಂದಿನ ಪ್ರಧಾನ ಕಾರಣ. ಕೇವಲ ಆಟೋಟಗಳಲ್ಲಿ ಮಾತ್ರವಲ್ಲ ಇನ್ನಿತರ ರಾಜಕೀಯ-ಆರ್ಥಿಕ ರಂಗಗಳಲ್ಲೂ ಬಹಳಷ್ಟು ಭಾರತೀಯರಿಗೆ ಕ್ರಿಯಾಶೀಲವಾಗಿ ಭಾಗವಹಿಸುವುದಕ್ಕೆ ಆಗುತ್ತಿಲ್ಲ. ನೊಬೆಲ್ ಪುರಸ ತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್' ಸಾಮಾಜಿಕ ಅಡೆತಡೆಗಳು, ಅನಕ್ಷರತೆ, ಅನಾರೋಗ್ಯ ಅವಕಾಶಗಳ ಕೊರತೆ, ಬಂಡವಾಳದ ಕೊರತೆ - ಮುಂತಾದವುಗಳ ಕಾರಣದಿಂದಾಗಿ ಸಮಾಜದ ಬಹುಸಂಖ್ಯಾತ ಜನತೆ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಆಗುತ್ತಿಲ್ಲ, ಇದರಿಂದ ದೇಶದ ಆರ್ಥಿಕ ಅಭಿವೃದ್ಧಿ ಕುಂಠಿತಗೊಂಡಿದೆ' ಎಂದಿದ್ದರು. ಅದು ಕೇವಲ ಆರ್ಥಿಕ ಚಟುವಟಿಕೆಗಳಿಗೆ ಮಾತ್ರವಲ್ಲ, ಕ್ರೀಡೆಯನ್ನೂ ಒಳಗೊಂಡಂತೆ ಇನ್ನಿತರ ಎಲ್ಲಾ ಸಾಮಾಜಿಕ ಚಟುವಟಿಕೆಗಳ ವಿಚಾರದಲ್ಲೂ ಸತ್ಯ ಎಂದು ಹೇಳಬಹುದು.

ಅವಕಾಶಗಳ ಬಗೆಗಿನ ಮಾಹಿತಿ!

ಇನ್ನೊಂದು ಪ್ರಧಾನ ಸಮಸ್ಯೆಯೆಂದರೆ ಭಾರತದಂತಹ ದೇಶದಲ್ಲಿ ಸಂಪರ್ಕ ಮತ್ತು ಮಾಹಿತಿ ಎಲ್ಲರಿಗೂ ಸಿಗುವಂತಿಲ್ಲ. ಅಂದರೆ, ದೇಶದ ಮುಕ್ಕಾಲು ಭಾಗ ಜನತೆಗೆ ಇಂತಹ ಅವಕಾಶಗಳ ಬಗ್ಗೆ ಮತ್ತು ಅವುಗಳನ್ನು ಪಡೆಯುವ ಬಗ್ಗೆ ಮಾಹಿತಿಯೇ ಇರುವುದಿಲ್ಲ. ಈ ಮಾಹಿತಿಯಿದ್ದವರು ತಮ್ಮಷ್ಟೇ ಸಮರ್ಥರಾಗಿರುವ ಆದರೆ ಅವುಗಳ ಬಗ್ಗೆ ಗೊತ್ತಿರದವರಿಗಿಂತ ಮುಂದೆ ಬಂದು ಈ ಅವಕಾಶಗಳನ್ನು ಬಳಸಿಕೊಳ್ಳುತ್ತಾರೆ. ಒಂದು ವೇಳೆ ದೇಶದ ಬಹುಪಾಲು ಜನರಿಗೆ ಅವಕಾಶಗಳ ಬಗ್ಗೆ, ಅವುಗಳನ್ನು ಬಳಸಿಕೊಳ್ಳುವ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೆ ಎಲ್ಲರೂ ಅವುಗಳನ್ನು ಬಳಸಿಕೊಳ್ಳಲು ಮುಂದಾಗಿ ದೊಡ್ಡ ಸ್ಪರ್ಧೆ ಏರ್ಪಡುತ್ತದೆ. ಈ ಸ್ಪರ್ಧೆಯಿಂದಲೇ ಉನ್ನತ ಪ್ರತಿಭೆಗಳು ಗೆದ್ದು ಬರುತ್ತವೆ.

ಒಲಂಪಿಕ್ಸ್ ಕ್ರೀಡಾಕೂಟಗಳ ಬಗ್ಗೆಯೇ ನೋಡಿ. ಈ ರೀತಿಯ ಕ್ರೀಡಾಕೂಟಗಳು ನಡೆಯುತ್ತವೆ ಎಂಬ ವಿಚಾರ ಭಾರತದ ಒಂದು ನೂರು ಕೋಟಿ ಜನಸಂಖ್ಯೆಯಲ್ಲಿ ಎಷ್ಟು ಜನಕ್ಕೆ ಗೊತ್ತಿದೆ? ತೀರಾ ಕಡಿಮೆ. ಟಿವಿಯಿದ್ದವರಿಗೆ, ಪತ್ರಿಕೆ ಓದುವವರಿಗೆ, ರೇಡಿಯೋ ಕೇಳುವವರಿಗೆ ಮಾತ್ರ ಗೊತ್ತಿರುತ್ತದೆ. ಭಾರತದಲ್ಲಿ ಶೇ. 65ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಬೆರಳೆಣಿಕೆಯಷ್ಟು ಜನರು ಮಾತ್ರವೇ ಈ ಮೇಲಿನ ಸೌಲಭ್ಯ ಹೊಂದಿದ್ದಾರೆ. ಇಡೀ ದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಅನಕ್ಷರಸ್ಥರೇ ಆಗಿದ್ದಾರೆ. ಹೀಗಿರುವಾಗ ಒಲಂಪಿಕ್ಸ್ ಕ್ರೀಡಾಕೂಟಗಳ ಬಗ್ಗೆ ಅವರಿಗೆ ಗೊತ್ತಾಗುವುದಾದರೂ ಹೇಗೆ? ಗೊತ್ತೇ ಇಲ್ಲ ಎಂದಮೇಲೆ ಅದರಲ್ಲಿ ಭಾಗವಹಿಸುವ ಕನಸನ್ನು ಕಾಣುವುದಾದರೂ ಹೇಗೆ? ಹೀಗಾಗಿ ಇದರ ಬಗ್ಗೆ



ಗೊತ್ತಿರುವ ತೀರಾ ಕಡಿಮೆ ಜನ ಅದರಲ್ಲಿ ಭಾಗವಹಿಸುವ ಕನಸನ್ನು ಕಾಣುತ್ತಾರೆ. ಆ ನಿಟ್ಟಿನಲ್ಲಿ ಶ್ರಮ ಪಡುತ್ತಾರೆ. ಕೊನೆಗೆ ಅವರಲ್ಲಿಯೇ ಕೆಲವರು ಆಯ್ಕೆಯಾಗುತ್ತಾರೆ. ಒಂದು ವೇಳೆ ಭಾರತದ ನೂರು ಕೋಟಿ ಜನರಿಗೂ ಅದರ ಬಗ್ಗೆ ಗೊತ್ತಿದ್ದರೆ, ಬಹಳಷ್ಟು ಜನ ಅದರಲ್ಲಿ ಭಾಗವಹಿಸುವುದಕ್ಕೆ ಮುಂದಾಗುತ್ತಿದ್ದರು. ದೊಡ್ಡ ಮಟ್ಟದಲ್ಲಿ ಪೈಪೋಟಿ ನಡೆದು ಉತ್ತಮ ಪ್ರತಿಭೆಗಳು ಆಯ್ಕೆಗೊಳ್ಳುತ್ತಿದ್ದರು. ಅಂತೆಯೇ ಉತ್ತಮ ಪ್ರದರ್ಶನ ನೀಡಿ ದೊಡ್ಡ ಸಂಖ್ಯೆಯಲ್ಲಿ ಮೆಡಲ್‌ಗಳನ್ನು ತರುತ್ತಿದ್ದರು. ಅಂದರೆ, ಒಟ್ಟಾರೆಯಾಗಿ ಕ್ರೀಡೆಯನ್ನೂ ಒಳಗೊಂಡಂತೆ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದರಲ್ಲಿನ ವೈಫಲ್ಯ ಕಳಪೆ ಪ್ರದರ್ಶನಕ್ಕೆ ಒಂದು ಪ್ರಧಾನ ಕಾರಣವಾಗಿ ತೋರುತ್ತದೆ. ಅಮೆರಿಕ 102 ಮೆಡಲ್‌ಗಳನ್ನು ಹಾಗೂ ಭಾರತ ಒಂದೇ ಒಂದು ಮೆಡಲ್ ಪಡೆಯುತ್ತದೆ ಎಂದರೆ ಅದರ ಹಿಂದೆ ಈ ಅಂಶವೂ ಕೆಲಸ ಮಾಡಿರುತ್ತದೆ.

ಇದನ್ನೇ ಇನ್ನೊಂದು ರೀತಿಯಲ್ಲಿ ನೋಡಿ. 1996ರಲ್ಲಿ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ ಎಂಬ ಇಂಗ್ಲಿಷ್ ವಾರಪತ್ರಿಕೆಯಲ್ಲಿ ಪ್ರಕಟವಾದ ವರದಿಯೊಂದರಲ್ಲಿ ಸಂಶೋಧಕರೊಬ್ಬರು ಕರ್ನಾಟಕ ಮತ್ತು ರಾಜಸ್ತಾನಗಳಲ್ಲಿ ಎರಡೆರಡು ಜಿಲ್ಲೆಗಳನ್ನು, ಇಪ್ಪತ್ತು ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಸಮೀಕ್ಷೆ ನಡೆಸಿತು. ಅದರ ಪ್ರಕಾರ ಈ ಇಪ್ಪತ್ತು ಹಳ್ಳಿಗಳಲ್ಲಿರುವ ಸುಮಾರು 60,000 ವಿದ್ಯಾರ್ಥಿಗಳ ಪೈಕಿ ಶೇ.40 ರಷ್ಟು ಜನ ಶಾಲಾ ಶಿಕ್ಷಕರಾಗುವ ಗುರಿಯಿಟ್ಟುಕೊಂಡಿದ್ದರು. ಉಳಿದಂತೆ ಕೆಲವರು ಬಸ್ ಕಂಡಕ್ಟರ್‌ಗಳಾಗುವುದಕ್ಕೆ, ಟೈಪಿಸ್ಟುಗಳಾಗುವುದಕ್ಕೆ, ಸೈನ್ಯ ಸೇರುವುದಕ್ಕೆ, ಪೊಲೀಸರಾಗುವುದಕ್ಕೆ ಇಷ್ಟ ಪಟ್ಟರು. ಒಬ್ಬನೇ ಒಬ್ಬ ವಿದ್ಯಾರ್ಥಿ ತಾನು ಒಲಂಪಿಕ್ ಕ್ರೀಡಾಪಟು ಆಗಬೇಕೆಂದು ಹೇಳಲಿಲ್ಲ. ಅಂದರೆ, ಅವರ ಅರಿವಿಗೆ ಇರುವುದು ಇವಿಷ್ಟೇ ಉದ್ಯೋಗಗಳು. ಹಾಗಾಗಿ ಅವುಗಳಲ್ಲಿಯೇ ಕೆಲವನ್ನು ಆಯ್ಕೆ ಮಾಡಿಕೊಳ್ಳುತ್ತಾರೆಯೇ ಹೊರತು ಅವರ ಅರಿವಿಗೆ ಬಾರದ್ದನ್ನು, ಅವರಿಗೆ ಗೊತ್ತಿರದ್ದನ್ನು ಆಯ್ಕೆ ಮಾಡಿಕೊಳ್ಳುವುದು ಕಷ್ಟ. ಎಂದೂ ಒಲಂಪಿಕ್ ಕ್ರೀಡೆಗಳ ಬಗ್ಗೆ ಕೇಳಿರದ, ಅವುಗಳನ್ನು ನೋಡಿರದ ಅವರು ಒಲಂಪಿಕ್ ಕ್ರೀಡಾಪಟುಗಳಾಗಬೇಕೆಂಬ ಆಸೆಯನ್ನು ಇಟ್ಟುಕೊಳ್ಳುವುದಾದರೂ ಹೇಗೆ?

> ಪ್ರಪಂಚದ ಜನಸಂಖ್ಯೆಯಲ್ಲಿ ಭಾರತ ಹೊಂದಿರುವ ಪಾಲಿಗೂ ಹಾಗೂ ಒಟ್ಟಾರೆ ಒಲಂಪಿಕ್ ಮೆಡಲ್‌ಗಳನ್ನು ಪಡೆಯುವಲ್ಲಿನ ಅದರ ಪಾಲಿಗೂ ಹೋಲಿಸಿ ನೋಡಿ. 2004ರ ಒಲಂಪಿಂಕ್‌ನ ಒಟ್ಟು 929 ಮೆಡಲ್‌ಗಳಲ್ಲಿ ಭಾರತಕ್ಕೆ ದಕ್ಕಿದ್ದು ಕೇವಲ ಒಂದು ಮಾತ್ರ. ಅಂದರೆ, ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಭಾರತದ ಪಾಲು ಶೇ.10ರಷ್ಟಿದ್ದರೆ ಒಲಂಪಿಕ್ ಮೆಡಲ್‌ಗಳಲ್ಲಿ ಅದರ ಶೇ.1ಕ್ಕಿಂತ ಕಡಿಮೆ!

ಇದೇ ಸಮೀಕ್ಷೆಯಲ್ಲಿ ಇನ್ನೊಂದು ವಿಚಾರವನ್ನೂ ಗಮನಿಸಲಾಯಿತು. ಈ ವಿದ್ಯಾರ್ಥಿಗಳು ಮಾಹಿತಿಯನ್ನು ಯಾವ ಮೂಲದಿಂದ ಪಡೆಯುತ್ತಾರೆ ಹಾಗೂ ಅವರು ಭವಿಷ್ಯದಲ್ಲಿ ಏನಾಗಬೇಕೆಂದುಕೊಂಡಿದ್ದಾರೆ ಎಂಬುದನ್ನೂ ತಾಳೆ ಮಾಡಿ ನೋಡಲಾಯಿತು. ಯಾವ ಯಾವ ವಿದ್ಯಾರ್ಥಿಗಳು ಟಿ.ವಿ, ರೇಡಿಯೋ, ಪತ್ರಿಕೆ ಮುಂತಾದ ವಿಶಾಲ ಮೂಲಗಳನ್ನು ಮಾಹಿತಿಗಾಗಿ ಬಳಸುತ್ತಾರೋ ಅವರು ಉತ್ತಮವಾದ, ಉನ್ನತವಾದ ಆಸೆಗಳನ್ನು, ಗುರಿಗಳನ್ನು ಇಟ್ಟುಕೊಂಡಿದ್ದರೆ, ಇವುಗಳನ್ನು ಬಳಸದ ವಿದ್ಯಾರ್ಥಿಗಳು ಚಿಕ್ಕಮಟ್ಟ ಆಸೆಗಳನ್ನು, ಗುರಿಗಳನ್ನು ಇಟ್ಟುಕೊಂಡಿರುವುದು ಗೊತ್ತಾಯಿತು. ಮೊದಲನೆಯ ಗುಂಪಿನ ವಿದ್ಯಾರ್ಥಿಗಳ ಪೋಷಕರೂ ಕೂಡ ಸುಶಿಕ್ಷಿತರಾಗಿದ್ದರೆ ಎರಡನೇ ಗುಂಪಿನ ವಿದ್ಯಾರ್ಥಿಗಳ ಪೋಷಕರು ಅನಕ್ಷರಸ್ಥರಾಗಿರುವುದು ಅಥವ ಕಡಿಮೆ ವಿದ್ಯಾಭ್ಯಾಸ ಮಾಡಿರುವುದು ಸಮೀಕ್ಷೆಯಿಂದ ತಿಳಿದುಬಂತು. ಇದರಿಂದ ಸ್ಪಷ್ಟವಾಗುವುದು ಏನೆಂದರೆ ಅವಕಾಶಗಳ ಬಗ್ಗೆ ಮತ್ತು ಅದನ್ನು ಪಡೆದುಕೊಳ್ಳುವುದಕ್ಕಿರುವ ದಾರಿಗಳ ಬಗ್ಗೆ ಹೆಚ್ಚೆಚ್ಚು ಮಾಹಿತಿಯುಳ್ಳವರು, ಸುಶಿಕ್ಷಿತರು ಬಹು ಬೇಗನೇ ಅವುಗಳ ಸಾಧನೆಗಾಗಿ ಕೈಹಾಕುತ್ತಾರೆ. ಗೊತ್ತಿಲ್ಲದವರು ತಮಗೆ ಗೊತ್ತಿರುವ ಮಾಹಿತಿಯನ್ನಷ್ಟೇ ಆಧರಿಸಿ ಚಿಕ್ಕಮಟ್ಟ ಕನಸುಗಳನ್ನು ಕಾಣುತ್ತಾರೆ.

ಅದೂಅಲ್ಲದೇ ಭಾರತದಲ್ಲಿ ಜಾತಿ, ಉಪಜಾತಿಗಳೆಂಬ ಅಡ್ಡಗೋಡೆಗಳಿರುವುದರಿಂದ ವ್ಯಕ್ತಿಗಳ ಮುಕ್ತ ಚಲನೆಗೆ ಅವಕಾಶ ಮಾಡಿಕೊಡುವುದಿಲ್ಲ. ಹಳ್ಳಿಯಲ್ಲಿ ವಾಸವಾಗಿರುವ ಒಬ್ಬ ದಲಿತ ಕುಟುಂಬವನ್ನೇ ನೋಡಿ. ಅವರಿಗೆ ಮೊದಲನೇಯದಾಗಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದೇ ತತ್‌ಕ್ಷಣದ ಗುರಿಯಾಗಿರುತ್ತದೆ. ಅವರ ಬಡತನದ ಕಾರಣದಿಂದಲೇ ಮಕ್ಕಳನ್ನು ಶಾಲೆಗೆ ಕಳಿಸಲು ಸಾಧ್ಯವಾಗುವುದಿಲ್ಲ. ಅವರ ಹತ್ತಿರ ಟಿ.ವಿ., ಪತ್ರಿಕೆಗಳು, ರೇಡಿಯೋಗಳಂತೂ ಇರುವುದೇ ಇಲ್ಲ. ಅದೂಅಲ್ಲದೇ, ಇನ್ನಿತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದರೆ ಜಾತಿ ವ್ಯವಸ್ಥೆ ಬಿಡುವುದಿಲ್ಲ. ಉದಾಹರಣೆಗೆ ಹಳ್ಳಿಯೊಂದರಲ್ಲಿ ಅವರು ಮೇಲ್ಜಾತಿಯವರೊಂದಿಗೆ ಸ್ಪರ್ಧೆಗಿಳಿಯುವುದಕ್ಕೆ ಅವಕಾಶವೇ ಇರುವುದಿಲ್ಲ. ಹೀಗಿರುವಾಗ ಅವರಲ್ಲಿ ಪ್ರತಿಭೆಗಳು ಅರಳುವುದಾದರೂ ಹೇಗೆ ಸಾಧ್ಯ? ಇದು ಒಂದು ಹಳ್ಳಿಯ ಸಮಸ್ಯೆಯಲ್ಲ, ಇಡೀ ಭಾರತದ ಕತೆ.

ಇದೇರೀತಿ ಆರೋಗ್ಯದ ವಿಚಾರ ಕೂಡ. ಒಲಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ, ಕ್ರೀಡಾಪಟುಗಳು ಹೆಚ್ಚು ಆರೋಗ್ಯವಂತರಾಗಿರಬೇಕಾಗುತ್ತದೆ. ಆದರೆ ಭಾರತದ ಆರೋಗ್ಯ ಪರಿಸ್ಥಿತಿಯು ಇನ್ನಿತರ ಮುಂದುವರಿದ ದೇಶಗಳಿಗೆ ಹೋಲಿಸಿದರೆ ತುಂಬಾ ಕೆಳಮಟ್ಟದಲ್ಲಿದೆ. ಹೀಗಾಗಿ ಆರೋಗ್ಯವಂತರಾಗಿರುವ ಸಮಾಜದ ಕೆಲವೇ ವ್ಯಕ್ತಿಗಳ ನಡುವೆ ಈ ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ ಪೈಪೋಟಿ ನಡೆಯುತ್ತದೆ. ಅಂದರೆ ಉತ್ತಮ ಆರೋಗ್ಯವಿಲ್ಲದ ಕಾರಣದಿಂದಲೂ ಬಹಳಷ್ಟು ಜನ ಇಂತಹ ಅವಕಾಶಗಳಿಂದ ವಂಚಿತರಾಗಿ ಬಿಡುತ್ತಾರೆ.

2004ರಲ್ಲಿ ಯಾವ್ಯಾವ ದೇಶ ಎಷ್ಟೆಷ್ಟು ಒಲಂಪಿಕ್ ಮೆಡಲ್‌ಗಳನ್ನು ಗಳಿಸಿತು ಎಂಬುದನ್ನು ಲೆಕ್ಕ ಹಾಕಿ ನೋಡಿ. ಇಪ್ಪತ್ತು ಕೋಟಿಯಷ್ಟು ಜನಸಂಖ್ಯೆ ಹೊಂದಿರುವ ಅಮೆರಿಕಕ್ಕೆ 102 ಮೆಡಲ್‌ಗಳು ಬಂದವು. ಕೇವಲ ಒಂದು ಕೋಟಿಗಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಜರ್ಮನಿಗೆ 49 ಒಲಂಪಿಕ್ ಮೆಡಲ್‌ಗಳು ಬಂದವು. ಆದರೆ ಒಂದು ನೂರು ಕೋಟಿ ಜನಸಂಖ್ಯೆ ಹೊಂದಿರುವ ಭಾರತಕ್ಕೆ ಒಂದೇ ಒಂದು ಮೆಡಲ್ ಸಿಕ್ಕಿತು. ಈ ಮೂರು ದೇಶಗಳನ್ನೇ ಇಟ್ಟುಕೊಂಡು ಚರ್ಚಿಸುವುದಾದರೆ, ಅಮೆರಿಕ ಮತ್ತು ಜರ್ಮನಿಗಳಲ್ಲಿ ಶಿಕ್ಷಣ, ಆರೋಗ್ಯ ಜನರಿಗೆ ಮಾಹಿತಿಯ ಲಭ್ಯತೆ ಬಹಳ ಚೆನ್ನಾಗಿದೆ. ಅಲ್ಲಿ ಮುಕ್ತ ಸಾಮಾಜಿಕ ಚಲನೆಗೆ ಜಾತಿಯಂತಹ ಅಡ್ಡಗೋಡೆಗಳಿಲ್ಲ. ಈ ಅಂಶಗಳೇ ಒಲಂಪಿಕ್ಸ್‌ನಲ್ಲಿ ಈ ಎರಡೂ ದೇಶಗಳು ಹೆಚ್ಚು ಮೆಡಲ್ ಗಳಿಸಲು ಕಾರಣವಾದವು. ಅಷ್ಟು ಮಾತ್ರವಲ್ಲ, ಜಮೈಕಾ ಮತ್ತು ಕ್ಯೂಬಾದಂತ ಬಡ ಹಾಗೂ ಸಣ್ಣ ದೇಶಗಳೂ ಸಹ ಹತ್ತಾರು ಪದಕ ಪಡೆಯಲು ಕಾರಣ ಅವಕಾಶಗಳ ಅರಿವು ಮತ್ತು ಅದನ್ನು ಪಡೆದುಕೊಳ್ಳುವ ಸಾಧ್ಯತೆ ಭಾರತಕ್ಕಿಂತ ಪಾರದರ್ಶಕವಾಗಿರುವುದು. ಆದರೆ ಭಾರತದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಜನರಿಗೆ ಮಾಹಿತಿಯ ಲಭ್ಯತೆ ಸಾಪೇಕ್ಷವಾಗಿ ಆ ದೇಶಗಳಿಗಿಂತ ತೀರಾ ಕಡಿಮೆಯಿದೆ. ಅಲ್ಲದೆ ಇಲ್ಲಿ ಜಾತೀಯತೆಯಂತಹ ಅಡ್ಡಗೋಡೆಗಳಿವೆ. ಇವೇ ಅಂಶಗಳು ಭಾರತವು ಒಲಂಪಿಕ್ಸ್‌ನಲ್ಲಿ ಕಡಿಮೆ ಮೆಡಲ್ ಗಳಿಸುವುದಕ್ಕೆ ಕಾರಣವಾಯಿತು.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಭಾರತದಲ್ಲಿ ಅವಕಾಶಗಳ ಮಾಹಿತಿ ಇರುವವರು, ಆರೋಗ್ಯವಾಗಿರುವವರು, ಶಿಕ್ಷಣ ಪಡೆದವರು, ತಥಾಕಥಿತ ಮೇಲ್ಜಾತಿಯಲ್ಲಿ ಹುಟ್ಟಿದವರು ಇಡೀ ಜನಸಂಖ್ಯೆಯ ಸಣ್ಣಭಾಗ ಮಾತ್ರ. ಪೈಪೋಟಿ ನಡೆಯುವುದೇನಿದ್ದರೂ ಈ ಕಡಿಮೆ ಸಂಖ್ಯೆಯ ಜನರ ನಡುವೆ ಮಾತ್ರ. ಹಾಗಾಗಿ, ನೂರು ಕೋಟಿ ಜನರಿರುವ ಭಾರತಕ್ಕೆ ಒಂದೇ ಒಲಂಪಿಕ್ಸ್ ಮೆಡಲ್ ಬಂತು ಎಂದು ಹೇಳುವುದಕ್ಕಿಂತ ಈ ಕೆಲವೇ ಸಂಖ್ಯೆಯ ಭಾರತೀಯರಿಗೆ ಒಂದು ಮೆಡಲ್ ಬಂದಿತು ಎಂದು ಹೇಳುವುದೇ ಸರಿಯೆನಿಸುತ್ತದೆ.

ಎಲ್ಲಿಯತನಕ ಶಿಕ್ಷಣ, ಆರೋಗ್ಯ, ಜೀವನಮಟ್ಟ, ಮಾಹಿತಿಯ ಪ್ರಸರಣೆಗಳಲ್ಲಿ ಗಣನೀಯ ಅಭಿವೃದ್ಧಿ ಸಾಧಿಸುವುದಿಲ್ಲವೋ, ಎಲ್ಲಿಯತನಕ ಜಾತಿಯತೆಯಂತಹ ಅಡ್ಡಗೋಡೆಗಳನ್ನು ತೊಡೆದುಹಾಕುವುದಿಲ್ಲವೋ, ಎಲ್ಲಿಯತನಕ ದೇಶದ ಜನರು ಸಮಾನವಾಗಿ ಅವಕಾಶಗಳನ್ನು ಅರಿಯುವಂತಹ, ಅವುಗಳನ್ನು ಬಳಸಿಕೊಳ್ಳಲು ಸ್ಪರ್ಧೆಗಿಳಿಯುವಂತಹ ವಾತಾವರಣ ಸೃಷ್ಟಿಯಾಗುವುದಿಲ್ಲವೋ ಅಲ್ಲಿಯ ತನಕ ಒಲಂಪಿಕ್ಸ್‌ನಲ್ಲಿ ಮಾತ್ರವಲ್ಲ, ಇನ್ನಿತರ ಯಾವುದೇ ಆರ್ಥಿಕ, ಸಾಮಾಜಿಕ, ಕ್ರೀಡಾ ಚಟುವಟಿಕೆಗಳಲ್ಲಿ ಭಾರತದ ಪ್ರದರ್ಶನ ಈಗಿರುವುದಕ್ಕಿಂತ ಬಹಳಷ್ಟು ಸುಧಾರಣೆಯಾಗಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಜವಾಬ್ದಾರಿ ಪ್ರಭುತ್ವಕ್ಕಿರಬೇಕು.

■ ಕುಮಾರ್ ಬುರಡಿಕಟ್ಟಿ

ಒಂದನಾಡಲು ಹೋಗಿ ಮತ್ತೊಂದನಾಡಿದರೆ....

'ಅಕ್ಕನ ಅಮರವಾಣಿ' ಎಂಬ ಹೆಸರಲ್ಲಿ ಅಕ್ಕ ಮಹಾದೇವಿಯ ವಚನಗಳನ್ನು ಮಾತಾಜಿ ಎಂಬ ಹೆಸರಲ್ಲಿ ಸಂಕಲನಗೊಳಿಸಿರುವ ಕೃತಿ ಈಗ ಸಾಕಷ್ಟು ವಿವಾದಕ್ಕೆಡೆ ಮಾಡಿದೆ. ಈ ವಿವಾದಕ್ಕೆ ಕಾರಣವಾಗಿರುವವರು ಮಾತೆ ಮಹಾದೇವಿ. ಅವರಿಗೆ ವಿವಾದಗಳೇನೂ ಹೊಸದಲ್ಲ, ಈಗ ಚರ್ಚಿತವಾಗುತ್ತಿರುವ ವಿಷಯದ ವಸ್ತು ಹಳೆಯದು. ಈಗಾಗಲೇ ಒಮ್ಮೆ ನ್ಯಾಯಾಲಯದ ಮೆಟ್ಟಿಲು ಏರಿ ನಿಷೇಧಕ್ಕೊಳಗಾದ ವಿಚಾರವೇ ಮತ್ತೆ ಈಗ ಪ್ರಲಿಸತೊಡಗಿದೆ. ಆಗ ವಿವಾದವಾಗಿ ನಿಷೇಧಕ್ಕೊಳಗಾಗಿದ್ದು 'ಬಸವ ವಚನ ದೀಪ್ತಿ' ಎಂಬ ಕೃತಿ. ಅದರಲ್ಲಿ ಬಸವಣ್ಣನ ವಚನಗಳಿಗೆ ಅನೂಚಾನವಾಗಿ ಬಳಕೆ ಮಾಡಲ್ಪಟ್ಟಿದ್ದ 'ಕೂಡಲ ಸಂಗಮದೇವಾ' ಎಂಬ ವಚನಾಂಕಿತವನ್ನು ಬದಲಿಸಿ, 'ಲಿಂಗದೇವಾ' ಎಂದು ಮಾತೆಯವರು ಮುದ್ರಿಸಿದ್ದರು. ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ನ್ಯಾಯಾಲಯ ಆ ರೀತಿ ಮಾಡಕೂಡದೆಂಬ ಆದೇಶದೊಂದಿಗೆ ಕೃತಿಯ ನಿಷೇಧವನ್ನು ಎತ್ತಿ ಹಿಡಿಯಿತು.

ಈಗ 'ಅಕ್ಕನ ಅಮರವಾಣಿ'ಯ ಸರದಿ. ಅದರಲ್ಲಿ ಅಕ್ಕ ಮಹಾದೇವಿಯ ವಚನಗಳಿಗೆ ಇರುವ 'ಚನ್ನಮಲ್ಲಿಕಾರ್ಜುನ' ಎಂಬ ವಚನಾಂಕಿತವನ್ನು ಬದಲಿಸಿ 'ಮಹಾದೇವಿಯಕ್ಕ ಪ್ರಿಯ ಲಿಂಗದೇವಾ' ಎಂದು ಮುದ್ರಿಸಲಾಗಿದೆ. ಆದ್ದರಿಂದ ವಚನಾಂಕಿತ ಬದಲಾಗಿರುವುದು ಈ ಸಲ ಅಕ್ಕ ಮಹಾದೇವಿಯದು ಎಂಬುದನ್ನು ಹೊರತುಪಡಿಸಿದರೆ ವಿವಾದದ ವಸ್ತು ಮಾತ್ರ ಹಳೆಯದೇ.

ಈ ಕೃತಿ ಮೊದಲು ಮುದ್ರಣವಾಗಿದ್ದು 1962 ರಲ್ಲಿ ಎಂದು ಸೂಚಿಸಲಾಗಿದೆ. ನಂತರ ಹತ್ತು ವರ್ಷ ಬಿಟ್ಟು ಮತ್ತೊಂದು ಮುದ್ರಣ ಮಾಡಲಾಗಿದೆ. ನಂತರ 23 ವರ್ಷ ಬಿಟ್ಟು 1995 ರಲ್ಲಿ ಮತ್ತೊಂದು ಮುದ್ರಣ ಮಾಡಲಾಗಿದೆ. ಈಗ ಲಭ್ಯವಿರುವ 'ಅಕ್ಕನ ಅಮರವಾಣಿ' 2004 ರಲ್ಲಿ ಮುದ್ರಿತವಾಗಿದೆ. ಮೊದಲು 1962 ರಲ್ಲಿ ಇದನ್ನು ಮುದ್ರಿಸಿದಾಗ ವಚನಾಂಕಿತ ಬದಲಾವಣೆ ಮಾಡಲಾಗಿತ್ತೋ ಇಲ್ಲವೊ ಸ್ಪಷ್ಟವಿಲ್ಲ, ಆದರೆ ಅನಂತರದ ಮುದ್ರಣದಲ್ಲಿ, ಮಾತೆಯವರ ಗುರುಗಳಾದ ಶ್ರೀ ಲಿಂಗಾನಂದರು ಜೀವಿಸಿರುವಾಗಲೇ ಈ ವಚನಾಂಕಿತ ಬದಲಾವಣೆ ಮಾಡಲಾಗಿತ್ತೆಂಬುದನ್ನು ಮಾತ್ರ ಮಾತೆಯವರು ಹೇಳಿಕೊಂಡಿದ್ದಾರೆ.

ಇದರಲ್ಲಿರುವ ಎಲ್ಲಾ ವಚನಗಳಿಗೂ ಅವರು ಲಿಂಗದೇವಾ ಎಂಬ ಅಂಕಿತವನ್ನು ಬಳಸಿಲ್ಲ, ಕೆಲವು ವಚನಗಳಿಗೆ 'ಚನ್ನಮಲ್ಲಿಕಾರ್ಜುನಾ' ಎಂಬ ವಚನಾಂಕಿತವನ್ನೇ ಉಳಿಸಿದ್ದಾರೆ. ಉದಾಹರಣೆಗೆ

"ಅಕ್ಕ ಕೇಳಾ, ಅಕ್ಕಯ್ಯಾ ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ಎಲೆ ತೆಂಗಿನಕಾಯ ಕಂಡೆ.
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ,
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚನ್ನಮಲ್ಲಿಕಾರ್ಜುನನ ಕಂಡು ಕಣ್ತೆರೆದೆನು" (ಪುಟ 60, ಅಕ್ಕನ ಅಮರವಾಣಿ, 2004)

ಅದೇ ಪುಸ್ತಕದ ಪುಟ 55 ರಲ್ಲಿ ಇರುವ ವಚನದ ಅಂಕಿತವನ್ನು ಬದಲಿಸಿರುವ ರೀತಿ ಹೀಗಿದೆ:

"ಆರೂ ಇಲ್ಲದವಳೆಂದು ಅಳಿಗೊಳಲುಬೇಡ ಕಂಡೆಯಾ?
ಏನ ಮಾಡಿದಡೂ ಅನಂಜುವಳಲ್ಲ
ತರಗೆಲೆಯ ಮೆಲಿದು ಆನಿಹೆನು;
ಸುರಗಿಯ ಮೇಲೊರಗಿ ಆನಿಹೆನು;
ಚನ್ನಮಲ್ಲಿಕಾರ್ಜುನ ಮಹಾದೇವಿಯಕ್ಕಪ್ರಿಯ
ಲಿಂಗದೇವಯ್ಯ ಕರಕಾದಿ ನೋಡಿದೊಡೆ
ಒಡಲನು ಪ್ರಾಣಮಂ ನಿಮಗರ್ಪಿಸಿ ಶುದ್ಧಳಹೆನು"
(ವಚನ 108, ಸರ್ವಾರ್ಪಣ ವಿಭಾಗ)

ಈ ವಚನದಲ್ಲಿ 'ಮಹಾದೇವಿಯಕ್ಕಪ್ರಿಯ ಲಿಂಗದೇವಯ್ಯ' ಎಂಬ ಸಾಲುಮಾತೆಯವರ ಸೇರ್ಪಡೆ.

ಹೀಗೇಕೆ ಮಾಡಲಾಗಿದೆ ಎಂಬುದಕ್ಕೆ ಮಾತೆಯವರ ಬಳಿ ತಾತ್ವಿಕ ವಿವರಣೆ ಇದೆ. ಚನ್ನಮಲ್ಲಿಕಾರ್ಜುನ ಎಂಬ ವಚನಾಂಕಿತ ಸ್ಥಾವರ ಲಿಂಗ ಸೂಚಕವಾದದ್ದು. ಒಮ್ಮೆ ಶರಣ ಪಥವನ್ನು ಹಿಡಿದು ಲಿಂಗಾಯತ ಧರ್ಮವನ್ನು ಒಪ್ಪಿಕೊಂಡೊಡನೆ ಸ್ಥಾವರ ಲಿಂಗ ಪೂಜೆಯನ್ನುವುದು



ನಿಷಿದ್ಧ, ಆದ್ದರಿಂದ ಅಕ್ಕ ಮಹಾದೇವಿ ಮೊದಲು ಶೈವಳಾಗಿದ್ದಾಗ ಬರೆದ ವಚನಗಳಲ್ಲಿ ಸ್ಥಾವರಲಿಂಗ ಅಂಕಿತನಾಮ ಇರುವುದು ಸಹಜ. ಆದರೆ ಒಮ್ಮೆ ಲಿಂಗಾಯತದ ಶರಣ ಪಥಕ್ಕೆ ಬಂದ ಮೇಲೂ ಅದೇ ವಚನಾಂಕಿತ ಬಳಸುವುದು ಒಟ್ಟಾರೆ ಬಸವಣ್ಣನ ತತ್ವಾದರ್ಶಕ್ಕೆ ವಿರುದ್ಧವಾದುದು. ಆದ್ದರಿಂದ ಶರಣ ಧರ್ಮದ ಆಚರಣೆ ಮತ್ತು ಆಶಯಗಳ ನಡುವೆ ಒಂದು ಶುದ್ಧತೆಯನ್ನು ಜಾರಿಗೊಳಿಸುವುದಕ್ಕೋಸ್ಕರ ಈ ವಚನಾಂಕಿತ ಬದಲಾವಣೆ ಮಾಡಲಾಗಿದೆ ಎಂಬುದು ಅವರ ವಿವರಣೆ.

ಈ ವಿವಾದಕ್ಕೆ ಹಲವು ಮಗ್ಗಲುಗಳಿರುವುದು ವಚನಾಭ್ಯಾಸಿಗಳಿಗೆ ಗೊತ್ತಾಗುತ್ತದೆ. ಪರೋಕ್ಷವಾಗಿ ಮಾತೆ ಮಹಾದೇವಿ ಈ ಮೂಲಕ ವಚನಗಳನ್ನು ಈ ಮೊದಲು ಸಂಕಲನ ಮಾಡಿದವರ ತತ್ವ ಶುದ್ಧಿಯನ್ನು ಪ್ರಶ್ನಿಸುತ್ತಿದ್ದಾರೆ. ಮತ್ತೊಂದು ಕಡೆ ಲಿಂಗಾಯತವನ್ನು ಸರ್ವಾಂಗವಾಗಿ ನಿರಾಕಾರಿ ದೇವರ ಉಪಾಸನಾ ಪಂಥವನ್ನಾಗಿ ಮಾತ್ರ ಉಳಿಸಬೇಕೆಂಬ ಹವಣಿಕೆಯಲ್ಲಿ ಅತ್ತ ಸ್ಥಾವರ ಲಿಂಗಪೂಜೆಯನ್ನೂ, ಇತ್ತ ಇಷ್ಟ ಲಿಂಗಪೂಜೆಯನ್ನೂ ಒಟ್ಟೊಟ್ಟಿಗೆ ನಡೆಸುತ್ತಾ ಬಂದಿರುವ ವೀರಶೈವರನ್ನು ನೀವು ಲಿಂಗಾಯತ ಮತದವರಲ್ಲ ಎಂದು ಹೇಳಬಯಸುತ್ತಿದ್ದಾರೆ. ಅದೇ ಸಮಯದಲ್ಲಿ ವಚನಗಳನ್ನು ಸಂಪಾದಿಸುವವರು ತಮಗಿಷ್ಟ ಬಂದ ಆಶಯಗಳನ್ನು ಅಲ್ಲಲ್ಲಿ ವಚನಗಳಲ್ಲಿ ಪ್ರಕ್ಷಿಪ್ತಗೊಳಿಸಿದ್ದಾರೆ ಎಂಬ ಆಪಾದನೆಯನ್ನು ಮಾಡುತ್ತಿದ್ದಾರೆ.

ಈ ಬಗೆಯ ನಿಲುವಿನಲ್ಲಿ ವಾಸ್ತವಾಂಶಗಳಿರಬಹುದು ಎಂಬುದನ್ನು ಯಾರೂ ಅಲ್ಲಗಳೆಯಬೇಕಾಗಿಲ್ಲ. ವಚನಗಳ ಬಗ್ಗೆ ವಚನಕಾರರ ಜೀವನ ವಿವರಗಳ ಬಗ್ಗೆ ನಮಗೆ ತಿಳಿದಿರುವ ಹಲವಾರು ಅಂಶಗಳಲ್ಲಿ ಈ ಬಗೆಯ ಕೈವಾಡವಿರುವುದನ್ನು ಹಲವರು ಈಗಾಗಲೇ ಚರ್ಚಿಸಿದ್ದಾರೆ. ಲಿಂಗಾಯತ ಮತ್ತು ವೀರಶೈವರ ನಡುವಿನ ಭಿನ್ನಮತವನ್ನು ಮಾತೆ ಮಹಾದೇವಿ ಹಾಗೂ ಎಂ. ಚಿದಾನಂದ ಮೂರ್ತಿಯವರು ಬೇಕಾದಷ್ಟು ಚರ್ಚಿಸಿದ್ದಾರೆ. ವಚನಗಳು ಯಾವ ಪ್ರಮಾಣದಲ್ಲಿ ಪ್ರಕ್ಷಿಪ್ತಗೊಂಡಿವೆ, ಬದಲಿಸಿ ಬರೆಯಲ್ಪಟ್ಟಿವೆ ಹಾಗೂ ಅವುಗಳನ್ನು ಸಂಕಲನ ಮಾಡಿದವರ ಇಚ್ಛೆಯನುಸಾರ ಆಯ್ಕೆ ಮಾಡಲ್ಪಟ್ಟು ಪ್ರಕಟಗೊಂಡಿವೆ? ಅದೇರೀತಿ ಪ್ರಕಟಗೊಳ್ಳದೆ ಎಷ್ಟು ವಚನಗಳು ಕಣ್ಮರೆ ಮಾಡಲ್ಪಟ್ಟಿವೆ ಇತ್ಯಾದಿಗಳನ್ನು ಬಲ್ಲವರೇ ಬಲ್ಲರು. ಈ ಬಗ್ಗೆ ಅಧಿಕೃತ ಅಧ್ಯಯನಗಳು ಅಥವಾ ಸಂಶೋಧನೆಗಳು ನಡೆದಿಲ್ಲ.

ನಡೆದಿರುವ ಅಲ್ಪಸ್ವಲ್ಪ ಚರ್ಚೆಗಳೆಲ್ಲ ಒಂದು ಪದ ಅಥವಾ ಅಕ್ಷರದ ಪಾಠಾಂತರಗಳಿಗೆ ಮಾತ್ರ ಸಂಬಂಧ ಪಟ್ಟವುಗಳು. ಇದು ಮಾತ್ರ ಸಾಲುವುದಿಲ್ಲ ಎಂಬ ಅರಿವಿರುವ ಹಲವಾರು ವಿದ್ವಾಂಸರಿದ್ದಾರೆ. ಆದರೆ ಅದನ್ನು ಕೈಗೆತ್ತಿಕೊಳ್ಳುವ ಪ್ರಯತ್ನಗಳನ್ನು ಮಾತ್ರ ಯಾರೂ ಮಾಡುತ್ತಿಲ್ಲ. ಕಾರಣಗಳು ಬೇರೆ ಬೇರೆ ಇರಬಹುದು. ಶರಣ ಧರ್ಮ ಅಥವಾ ಬಸವ ಪಥ ಎಂದು ಕರೆಯಬಹುದಾದ ನಮ್ಮ ನಾಡಿನ ಅತ್ಯಂತ ಹೆಮ್ಮೆಯ ವೈಚಾರಿಕ, ತಾತ್ವಿಕ ದರ್ಶನವೊಂದು ಒಂದು ಭಕ್ತಿ ಮಂಡಲಿಯಂತಾಗಿರುವ ದುರಂತವನ್ನು ನಾವಿಂದು ಕಾಣುತ್ತಿದ್ದೇವೆ. ಮಠ ಮಾನ್ಯಗಳಿಗೆ ನಿಖರ ಅಧ್ಯಯನ, ಸ್ಪಷ್ಟ ತತ್ವದರ್ಶನಗಳಿಂತ ಕುದುರೆ ಮೇಲೆ ಕುಳಿತ ಕಿರೀಟಧಾರಿ ಬಸವಣ್ಣನೇ ಹೆಚ್ಚು ಇಷ್ಟ. ಪರಿವ್ರಾಜಕನಂತೆ ಅಲೆಯುತ್ತಾ ದಿಕ್ಕಾಲಗಳನ್ನು ಮೂಗು ಹಿಡಿದು ಎಳೆದಾಡುವಂತಹ ದಾರ್ಶನಿಕ ಅಲ್ಲಮನಿಗಿಂತ ಶೂನ್ಯ ಸಿಂಹಾಸನದ ಮೇಲೆ ಕುಳಿತ, ಲಿಂಗಧಾರಣೆಯ ಕುರುಹಿನ ಬಗ್ಗೆ ತನ್ನ ನಿಲುವು ಏನೇ ಆಗಿದ್ದರೂ, ಸಿದ್ಧರಾಮನಿಗೆ ಲಿಂಗಧಾರಣೆಯ ಅಗತ್ಯ ಬೋಧಿಸುವ ಜಂಗಮಮೂರ್ತಿ ಪ್ರಭುದೇವರೇ ಹೆಚ್ಚು ಅಚ್ಚುಮೆಚ್ಚು.

ವಚನ ಚಳವಳಿ, ವಚನಕಾರರ ತತ್ವಾದರ್ಶಗಳೆಲ್ಲ ಹೆಚ್ಚೆಚ್ಚು ರಂಜಕ ಕಥನಗಳಾಗಿ, ಪವಾಡಗಳಾಗಿ, ಅವತಾರ ಸ್ವರೂಪಿಯಾಗಿ ಕೀರ್ತಿಸಲ್ಪಡುವುದರಲ್ಲೇ ಇಂದಿನ ಶರಣ ಪಂಥದ ಯಶಸ್ಸು ಅಡಗಿದೆ ಎಂಬಂತೆ ವಿದ್ವಾಂಸರೂ ಕೂಡ ಆಡತೊಡಗಿದ್ದಾರೆ. ಇದೊಂದು ಬಗೆಯ ಹುಲಿ ಸವಾರಿ. ಜನರಂಜನೆಗೆ ರೂಪಿಸಲ್ಪಟ್ಟ ಕೆಲವು ದಂತಕಥೆಗಳ ಮೇಲೆ ಮೋಜಿನ ಸವಾರಿ ಮಾಡಿದ ಪಂಡಿತರಿಗೆ ಇಂದು ಅದರಿಂದ ಕೆಳಗಿಳಿಯಲಾಗದೆ ಒದ್ದಾಡುವಂತಾಗಿದ್ದರೆ ಆಶ್ಚರ್ಯವಿಲ್ಲ, ಅವರೆಲ್ಲರ ಇಂತಹ ಸಂದಿಗ್ಧತೆಗಳ ಸಂದಿನಲ್ಲೇ ಮಾತೆ ಮಹಾದೇವಿಯವರ ಪೆದ್ದು ಸಾಹಸಗಳು ನಡೆಯುತ್ತಿವೆ.

ಇವುಗಳನ್ನು ಪೆದ್ದು ಸಾಹಸಗಳೆಂದು ಮಾತ್ರ ಕರೆಯಬೇಕಾದ ಅಗತ್ಯವಿದೆ. ಯಾಕೆಂದರೆ ಬೇರೆಯವರೆಲ್ಲ ತಮ್ಮ ಪಾರಂಪರಿಕ ಪೀಠಗಳ ಯಜಮಾನಿಕೆಯನ್ನು ನಿರ್ವಹಿಸುತ್ತಾ, ಆಸ್ತಿಪಾಸ್ತಿಗಳ ಹೆಚ್ಚಳಕ್ಕಾಗಿ ದೇವರಲ್ಲಿ, ಕೆಲವೊಮ್ಮೆ ಅಧಿಕಾರಸ್ಥರಲ್ಲಿ ಪ್ರಾರ್ಥಿಸುತ್ತಾ, ತಮ್ಮ ಭಕ್ತರ ನಡುವೆ ಸಮಾಜದ ಪ್ರಭಾವದಿಂದ ನೆಲೆಗೊಳ್ಳುತ್ತಲೇ ಹೋದ ಶರಣ ಮಾರ್ಗ ವಿರೋಧಿ ಆಚಾರ-ವಿಚಾರಗಳನ್ನು ನಿರ್ಲಕ್ಷಿಸುತ್ತಾ ಕುಳಿತುಕೊಂಡಿದ್ದ ಸಂದರ್ಭದಲ್ಲಿ ಮಾತೆ ಮಹಾದೇವಿಯವರ ಆಗಮನವಾಯಿತು. ಬಸವ ಪಂಥವನ್ನು, ಶರಣ ತತ್ವಾದರ್ಶಗಳನ್ನು ಬೋಧಿಸುವುದರ ಹೊರತು ಅವರಿಗೆ ಬೇರೆ ಬಂಡವಾಳ ಇರಲಿಲ್ಲ, ಅವರು ಪಾರಂಪರಿಕ ಪೀಠವೊಂದರ ಅಧಿಕಾರಿಣಿಯಾಗಿ ಪಟ್ಟಕ್ಕೆ ಬಂದವರಲ್ಲ, ಅಲ್ಲದೆ ಅವರಿಗೆ ಮಹಿಳಾ ಜಗದ್ಗುರುವೊಬ್ಬರು



ಬೇರೆ ಕಡೆ ಮಾತ್ರವಲ್ಲ ಲಿಂಗಾಯತರಲ್ಲೂ ಇರಲಿಲ್ಲ.

ಹೀಗಿರುವಾಗ ಸಾಧ್ಯವಾದಷ್ಟೂ ಶರಣ ಧರ್ಮದ ವೈಚಾರಿಕ ನಿಲುವುಗಳನ್ನು ಪ್ರಚಾರ ಮಾಡುತ್ತಾ, ಅದರೊಳಗಿದ್ದ ಬಂಡುಕೋರ ಅಂಶಗಳಿಗೆ ಒತ್ತು ಕೊಡುತ್ತಾ ಈಗಿರುವ ಮಾನ್ಯತೆಯನ್ನು ಇತರ ಮಠಾಧೀಶರ ವಿರೋಧದ ನಡುವೆ ಅವರು ಸಾಧಿಸಿಕೊಂಡವರು. ಕೂಡಲ ಸಂಗಮದಲ್ಲಿನ ಬಸವಣ್ಣನ ಐಕ್ಯಸ್ಥಳದ ರಕ್ಷಣೆಯ ಪ್ರಶ್ನೆ ಮುಂದಿಟ್ಟುಕೊಂಡು ಸಾಧ್ಯವಾದಷ್ಟೂ ಲಿಂಗಾಯತರ ಬೆಂಬಲ ಪಡೆದುಕೊಂಡವರು. ಇದೇ ಮಾರ್ಗದಲ್ಲಿ ನಡೆಯುತ್ತಾ ಮಾತೆಯವರಿಗೆ ಲಿಂಗಾಯತ ಧರ್ಮವನ್ನು ಶುದ್ಧೀಕರಿಸಬೇಕೆಂಬ ಆಸೆ ಹುಟ್ಟಿಕೊಂಡಿದೆ. ಯಾಕೆಂದರೆ ಸಂಪ್ರದಾಯವಾದಿ ವೀರಶೈವದಿಂದ ಮಾತೆ ಅನುಭವಿಸಿದ ಮಾನಸಿಕ ನೋವು ಬೇಕಾದಷ್ಟಿದೆ. ಆದರೆ ಅದಕ್ಕಾಗಿ ಅವರು ಆರಿಸಿಕೊಂಡ ಮಾರ್ಗಗಳಲ್ಲಿ ಬೇಕಾದಷ್ಟು ಅಸಂಬದ್ಧತೆ ಇದೆ.

ಅಂತಹ ಅಸಂಬದ್ಧತೆಯ ಒಂದು ರೀತಿಯೇ ಈ ವಚನಾಂಕಿತ ತಿದ್ದುಪಡಿ ಪ್ರಹಸನ. ಪ್ರಾಚೀನವಾಗಿ ಚಾಲ್ತಿಯಲ್ಲಿದ್ದ ವಚನಗಳನ್ನು ಸಂಗ್ರಹಿಸುವಾಗ, ಕೆಲವು ವಚನಕಾರರು ಬಳಸಿದ ಅಂಕಿತಗಳ ವಿಷಯದಲ್ಲಿ ಒಂದು ಪುಟ್ಟನ ಗೊಂದಲವಿತ್ತೆಂಬುದು ನಿಜ. ಮಾತೆಯವರು 'ಸಂಶೋಧಿಸಿರುವಂತೆ' ಬಸವಣ್ಣನ ಒಂಬತ್ತು ವಚನಗಳು ಲಿಂಗದೇವಾ ಎಂಬ ಅಂಕಿತವನ್ನು ಬಳಸಿವೆ. ಆದ್ದರಿಂದ ಅವರ ಉಳಿದ ಸಾವಿರಕ್ಕೂ ಮಿಕ್ಕ ವಚನಗಳಿಗೆ ಲಿಂಗದೇವಾ ಎಂಬ ವಚನಾಂಕಿತವನ್ನೇ ಅವರು ಅಳವಡಿಸುವ ಸಾಹಸವನ್ನು ಮಾಡಿದ್ದಾರೆ. ಯಾಕೆಂದರೆ ಅವರ ಪ್ರಕಾರ ವಚನಗಳು ಅತ್ಯಂತ ಮುಖ್ಯವಾಗಿ ತತ್ವಾದರ್ಶ ಮಂಡನೆಯ ಅಭಿವ್ಯಕ್ತಿಗಳು. ಶರಣ ಮಾರ್ಗದಲ್ಲಿ ನಿರಾಕಾರ ದೇವರನ್ನು ಪೂಜಿಸಬಹುದೇ ಹೊರತು ಸಗುಣೋಪಾಸನೆ ಸಲ್ಲದು. ಬಸವಣ್ಣನವರ ವಚನಾಂಕಿತ ಸ್ಥಾವರಲಿಂಗ ಸೂಚಿಯಾದ್ದರಿಂದ ಅದನ್ನು ಕೈಬಿಡುವುದು ಲಿಂಗಾಯತದ ಶುದ್ಧೀಕರಣಕ್ಕೆ ಅತ್ಯಂತ ಅಗತ್ಯ. ಇದನ್ನು ಮಾಡಲು ನಿಮಗೆ ಪ್ರೇರಣೆ ಏನು ಎಂದರೆ ಬಸವಣ್ಣ ಕನಸಿನಲ್ಲಿ ಬಂದು ನನಗೆ ವಚನಾಂಕಿತ ತಿದ್ದುಪಡಿ ಮಾಡಲು ಆದೇಶವಿತ್ತ ಎಂದು ಅವರು ಉತ್ತರಿಸಿದ್ದರು.

ಯಾವ ಶರಣ ಧರ್ಮವನ್ನು ನಿರಾಕಾರ ದೈವೋಪಾಸನೆಯ, ವೈಚಾರಿಕ ನಿಲುವುಗಳ ಕ್ರಾಂತಿಕಾರಿ ಪಥವನ್ನಾಗಿ ಬದಲಾಯಿಸಬೇಕೆಂದು ಅವರು ಪ್ರತಿಪಾದಿಸುತ್ತಿದ್ದಾರೋ ಅದಕ್ಕೆ ಎಂತಹ ವೈಚಾರಿಕ ನೆಲೆಯ ಸಮರ್ಥನೆಗಳನ್ನು ಹುಡುಕಿಕೊಂಡಿದ್ದಾರೆ ನೋಡಿ. ಇಂತಹ ಹಾಸ್ಯಾಸ್ಪದ ಪಲಾಯನಗಳ ಬದಲು ಮತ್ತಷ್ಟು ದಿಟ್ಟವಾದ ಬೌದ್ಧಿಕ ಜಿಜ್ಞಾಸೆಯ ಕಾರಣಗಳನ್ನು ನೀಡಲು ಸಾಧ್ಯವಿತ್ತು, ಆದರೆ ಅಷ್ಟು ತ್ರಾಸದಾಯಕವಾದ ನಡಿಗೆ ನಡೆಯುವ ಮನಸ್ಸಿಲ್ಲ, ತಮ್ಮ ಹಿಂದಿರುವ ಸಾಮಾನ್ಯ ಬಸವಾಭಿಮಾನಿಗಳನ್ನು ಕನಸಿನ ಪವಾಡ ಹೇಳಿ ಮೆಚ್ಚಿಸುವುದು ಸುಲಭವಾದ್ದರಿಂದ, ಅದಕ್ಕೆ ಬೇರೆ ಯಾವುದೇ ಸಾಕ್ಷ್ಯಾಧಾರ ನೀಡಬೇಕಾಗಿಲ್ಲವಾದ್ದರಿಂದ ತಮ್ಮ ತತ್ವ ಶುದ್ಧೀಕರಣದ ವೈಚಾರಿಕ ಕ್ರಾಂತಿಗೆ ಕನಸಿನ ಪವಾಡದ ಬೆಂಬಲ.

ಅಕ್ಕ ಮಹಾದೇವಿಯ ವಚನಗಳಿಗೆ ಸಂಬಂಧಿಸಿದಂತೆ ಆಗಿರುವುದೂ ಇದೇ ಕಥೆ. ಸದ್ಯ ಕನಸಿನ ಪವಾಡವನ್ನು ಪುನರಾವರ್ತಿಸಿಲ್ಲ ಎಂಬುದನ್ನು ಹೊರತುಪಡಿಸಿ ಮಿಕ್ಕ ಸಾಹಸವೆಲ್ಲ ಹುಂಬತನದ್ದೇ. ಕೂಡಲ ಸಂಗಮದೇವ ಎಂಬುದು ಬಸವಣ್ಣನ ದೃಷ್ಟಿಯಲ್ಲಿ ಸ್ಥಾವರಲಿಂಗವನ್ನು ಸೂಚಿಸುತ್ತಿದೆ ಎಂಬ ಮಾತೆಯ ತೀರ್ಮಾನವೇ ಪ್ರಶ್ನಾರ್ಹವಾದುದು. ಅದೇರೀತಿ ಚನ್ನ ಮಲ್ಲಿಕಾರ್ಜುನ ಎಂಬ ಅಕ್ಕನ ಅಂಕಿತ. ಯಾವ ಮಠಮಾನ್ಯಗಳನ್ನು ಕಟ್ಟಿಸಿ, ಸಾಮಾನ್ಯ ಭಕ್ತಾಂಗಣಗಳನ್ನು ಮೆಚ್ಚಿಸುವ ದರ್ದಿಲ್ಲದ 'ಆರೇನ ಮಾಡಿದಡೂ ಅನಂಜುವಳಲ್ಲ' ಎಂದು ಬಾಳಿದ ಭಕ್ತೆ ವಿರಾಗಿಣಿ ಅಕ್ಕ ಮಹಾದೇವಿ ತಾನೊಂದು ವಚನಾಂಕಿತವನ್ನು ಬಳಸುವಾಗ ಅದು ಸ್ಥಾವರಲಿಂಗಾರ್ಚನೆಯನ್ನು ಪ್ರತಿಪಾದಿಸುವ ಕುರುಹಾಗಿದೆ ಎಂಬುದನ್ನು ಅರಿಯದಷ್ಟು ಮೂಢೆಯಾಗಿದ್ದಳು ಎಂದು ತರ್ಕಿಸುವುದೇ ಆಭಾಸಕರ. ಅಲ್ಲದೆ ಕೆಲವು ವಚನಗಳಲ್ಲಿ 'ಚನ್ನಮಲ್ಲಿಕಾರ್ಜುನ' ಅಂಕಿತವಿರಬಹುದು, ಆಕೆ ಶರಣಳಾದ ಮೇಲಿನ ವಚನಗಳಲ್ಲಿ ಅದು 'ಲಿಂಗದೇವಾ' ಎಂದಾಗಬೇಕು ಎಂಬುದನ್ನು ಆಯ್ಕೆ ಮಾಡುವಾಗ ಅವರು ಅನುಸರಿಸಿದ ಮಾನದಂಡ ಯಾವುದು ಎಂಬುದೂ ಕೂಡ ಚರ್ಚಾರ್ಹವಾಗಿದೆ.

ಸಾಕಾರ-ನಿರಾಕಾರ ದೈವ ಎಂಬ ಆಧ್ಯಾತ್ಮಿಕ ಪ್ರಶ್ನೆಗಳನ್ನೂ ಮೀರಿದ ಯಾವುದೋ ಆತ್ಮ ಸಾಕ್ಷಾತ್ಕಾರದ ಮಾರ್ಗದಲ್ಲಿ ನಡೆದ ಅಕ್ಕ ತನ್ನ ವ್ಯಕ್ತಿ ಅಸ್ಮಿತೆಯ ಅಂಗವಾಗಿ ಬಳಸಿಕೊಂಡ ಇಷ್ಟಲಿಂಗ ಪರಿಕಲ್ಪನೆಯಾಗಿ 'ಚನ್ನ ಮಲ್ಲಿಕಾರ್ಜುನ' ಎಂಬುದು ಆಕೆಯ ವಚನಗಳಲ್ಲಿ ಬಂದಿರುವುದನ್ನು ನಾವು ಪರಿಶೀಲಿಸಬೇಕು. ದೈವವಾಗಿ, ಗುರುವಾಗಿ, ತಂದೆಯಾಗಿ, ಗಂಡನಾಗಿ, ಕಾಡುವ ಪ್ರಿಯಕರನಾಗಿ ಹಲವು ತೆರನಾಗಿ ವರ್ಣಿತನಾಗುವ ಚನ್ನಮಲ್ಲಿಕಾರ್ಜುನ ಅಂತಿಮವಾಗಿ ಅವು ಯಾವುದೂ ಅಲ್ಲದ 'ಆತ್ಮ ಸಂಗಾತ'ದ ವಿಷಯ ಆಕೆಗೆ ಎಂಬುದೇ ಅಕ್ಕನ ವಚನಗಳನ್ನು ಸರಿಯಾಗಿ ಗ್ರಹಿಸುವ ವಿಧಾನ.

ಶರಣ ಮಾರ್ಗದಲ್ಲಿ 'ನಾನೇ ದೈವ'ವೆಂಬ ಅಲ್ಲಮನ ನಿಲುವಿನಂತೆ, 'ದೇವರೇ ಒಡೆಯ ನಾನು ಭೃತ್ಯ' ಎಂಬ ಬಸವಣ್ಣನ ನಿಲುವೂ ಇದೆ. ಕಾಯಕದೊಳಿದ್ದಾಗ ಗುರುವಾದೊಡೂ ಮರೆಯಬೇಕು, ಲಿಂಗವಾದೊಡೂ ಮರೆಯಬೇಕು ಎಂಬ ಕಾಯಕನಿಷ್ಠ ಧೋರಣೆಯೂ ಇದೆ. ಮುಖ್ಯವಾಗಿ ಅದು ಪರಮಾತ್ಮನನ್ನೂ, ಭಕ್ತನನ್ನೂ ಐಕ್ಯಗೊಳಿಸುವ ಹಾದಿ. ತಾನು ದುಡಿದುದು, ತಾನು ನುಡಿದುದು, ತಾನು ಪರಿಭಾವಿಸಿದ್ದು ದೈವಕ್ಕೆ ಅರ್ಪಿತವಾಗಬೇಕೆಂಬ ಶರಣತ್ವದ ಹಾದಿಯಲ್ಲಿ ಒಟ್ಟೊಟ್ಟಿ ಶರಣನೂ ತನ್ನ ಇಷ್ಟಲಿಂಗದ ಕುರುಹನ್ನು ಹೊಂದಿರಲು ಹಕ್ಕುದಾರನಾಗಿದ್ದಾನೆ. ಅವರಿಗೆ ಗುರು-ಲಿಂಗ-ಜಂಗಮ ಅಭಿನ್ನವಾದ್ದರಿಂದ ಕೆಲವರು ಗುರುವಿನ ಹೆಸರನ್ನು, ಕೆಲವರು ತಮ್ಮ ಇಷ್ಟಲಿಂಗದ ಹೆಸರನ್ನು, ಕೆಲವರು ತಮ್ಮ ಹೆಸರನ್ನೇ ಅಂಕಿತ ಮಾಡಿಕೊಂಡಿರುವ ನಿದರ್ಶನಗಳಿವೆ.

ತನ್ನ ವ್ಯಕ್ತಿತ್ವ ಗುರುತಿನ ಯಾವ ಅಂಶಗಳೂ ಕೂಡ

▶▶▶

...ಅಕ್ಕನ ಸಂದಾದಿಗೆ ಅರ್ಥವಾಗುವುದಿಲ್ಲವೆಂಬ ನಿಲುವೇ ಅಪ್ರಬುದ್ಧ ಪೂರ್ವಾಗ್ರಹಪೀಡಿತವಾದುದಾಗಿದ್ದು ಬಹುಳತೆಯನ್ನು ...ಅಂಗೀಕರಿಸಿಯೇ ಶರಣ ಕಾಲದ ಏಕತೆಯನ್ನು ...ಣಗೊಳಿಸುವ ವಚನಕಾರರ ಹಾದಿಯನ್ನು ಕೇವಲ ಲಿಂಗಾರ್ಚನೆಯ ವಿಧಾನದ ಮೂಲಕ ಅರ್ಥೈಸಹೊರಡು ...ವುದು ಅನರ್ಥಕಾರಿ. ಅಲ್ಲಮ 'ಗುಹೇಶ್ವರ ಲಿಂಗ' ಎಂದದ್ದು ...ಆತನ ಇಷ್ಟ ದೈವ ಗುಹೇಶ್ವರನನ್ನು ಸೂಚಿಸುವಷ್ಟಕ್ಕೇ ನಿಲ್ಲುತ್ತದೆಂದು ಹೇಳಲು ಸಾಧ್ಯವಿದೆಯೇ? 'ಕೂಡಲ ಸಂಗಮದೇವ'ನೆಂಬುದು ಕೂಡಲಸಂಗಮದಲ್ಲಿರುವ ಲಿಂಗರೂಪಿ ದೇವರು ಮಾತ್ರವೇ ಆಗಿದ್ದರೆ, 'ಅಲ್ಲಿ ಉಂಟೊಡೆ ಲಿಂಗ, ಇಲ್ಲಿ ಉಂಟೊಡೆ ಸಂಗ' ಎಂಬ ದಾರ್ಶನಿಕತೆ ವ್ಯಕ್ತವಾಗುವುದು ಸಾಧ್ಯವಿತ್ತೇ? ಅಥವಾ ಕಟ್ಟಿಕೊಂಡಿರುವುದು ಬದನೇಕಾಯಿಗಳಾಗಿದ್ದರೂ ಅವುಗಳನ್ನು ಲಿಂಗ ಸ್ವರೂಪಿಯೆಂದು ಪರಿಭಾವಿಸುವ ಸರ್ವ ದೇವಾತ್ಮವಾದ ಸಾಧ್ಯವಿತ್ತೇ? ಹಮ ಕದಿಯಲು ಬಂದ ಕಳ್ಳರೂ ಸಹ ಶಿವ ಸ್ವರೂಪಿಗಳೆಂದು ಭಾವಿಸಿದ ಅನುಭಾವಿ ನಿಲುವುಗಳನ್ನು ಕೇವಲ ಲಿಂಗಾರ್ಚನೆಗೆ ಸಂಬಂಧಿಸಿದ ವೈಧಾನಿಕ ಸಮಸ್ಯೆಯಾಗಿ ಮಂಡಿಸುವುದು ಶರಣ ದರ್ಶನ ವನ್ನು ಸಂಕುಚಿತಗೊಳಿಸುವ ಪ್ರಯತ್ನಗಳಾಗುತ್ತವೆಂಬುದು ಮಾತೆ ಮಹಾದೇವಿಯವರಿಗೆ ಅರ್ಥವಾಗುತ್ತಿಲ್ಲ.

ಅಕ್ಕನ ವಚನಗಳು ಶರಣ ಮಾರ್ಗದ ತತ್ವ ಪ್ರಣಾಳಿಕೆಗಳಾಗಿರುವ ಹೊತ್ತಲ್ಲೇ, ಸಾಹಿತ್ಯಾಭಿವ್ಯಕ್ತಿಯ ರಚನೆಗಳಾಗಿರುವುದನ್ನು ನಾವು ಅಲ್ಲಗಳೆಯಬಾರದು. ಪ್ರತಿ ಸಾಹಿತ್ಯ ರಚನೆಗೂ ಒಂದು ಕರ್ತೃತ್ವವಿರುತ್ತದೆ. ಆ ಸಾಹಿತ್ಯ ಕೃತಿಯ ರಚನಕಾರ ತನ್ನ ಕರ್ತೃತ್ವವನ್ನು ಪ್ರದರ್ಶಿಸಲು ಬಳಸಿದ ಅಂಕಿತಗಳನ್ನು ಬದಲಾಯಿಸುವುದು ಸಾಹಿತ್ಯ ಪರಂಪರೆಗೆ ಎಸಗಿದ ದ್ರೋಹವಾಗುತ್ತದೆ. ತನ್ನನ್ನು ಕುಮಾರವ್ಯಾಸನೆಂದು ಕರೆದುಕೊಂಡ ಕವಿ ಕೃಷ್ಣ ಕಥೆಯನ್ನು ಹಾಡಿದ್ದಾನೆ. ವ್ಯಾಸ ಶೈವ ಪಂಥೀಯನೋ, ವೈಷ್ಣವ ಪಂಥೀಯನೋ ಗೊತ್ತಾಗಿಲ್ಲ, ವ್ಯಾಸಮುನಿ ಶೈವನೆಂದಾದಲ್ಲಿ, ಕೃಷ್ಣ ಲೀಲೆಯನ್ನು ಹಾಡಿ ಹೊಗಳುವ ಕವಿ ಶೈವನಾದ ವ್ಯಾಸನಿಗೆ ಕುಮಾರನೆಂಬ ಕಾವ್ಯ ನಾಮವನ್ನು ಹೊಂದಿರಬಾರದೆಂದು ತಿದ್ದುಪಡಿ ಮಾಡಲು ಹೊರಟರೆ ಯಾವ ಆಭಾಸ ಸಂಭವಿಸುತ್ತದೆಯೋ ಅದೇ ಆಭಾಸ ಚೆನ್ನಮಲ್ಲಿಕಾರ್ಜುನ ಎಂಬ ವಚನಾಂಕಿತವನ್ನು ಬದಲಿಸಿ ಬರೆದಾಗ ಉಂಟಾಗುತ್ತದೆ.



ಚೆನ್ನಮಲ್ಲಿಕಾರ್ಜುನ ಎಂಬ ವಚನಾಂಕಿತ ಅಕ್ಕ ಮಹಾದೇವಿಯ ವ್ಯಕ್ತಿತ್ವದ ಪ್ರಾಣ ಹಾಗೂ ತ್ರಾಣ. ಆಕೆ ಸಗುಣೋಪಾಸಕಿಯೋ, ನಿರ್ಗುಣೋಪಾಸಕಿಯೋ ಎಂಬ ಬಗ್ಗೆ ಮಾತೆ ಮಹಾದೇವಿಯವರು ಸಂಶೋಧನೆ ಮಾಡಬಹುದು. ಸ್ಥಾವರ ಲಿಂಗಪೂಜೆ ವಿರೋಧಿಸುತ್ತಾ, ಸ್ಥಾವರಲಿಂಗ ಸೂಚಕ ಅಂಕಿತ ಹೊಂದಿದ ವಚನಕಾರರ ಗ್ರಹಿಕೆಯ ತೊಡಕಿನ ಬಗ್ಗೆ ವಿಶ್ಲೇಷಣೆ-ಚಿಂತನೆ ಬರೆಯಬಹುದು. ಆದರೆ ಸಾಹಿತ್ಯ ಪರಂಪರೆಯಲ್ಲಿ ಒಬ್ಬ ವಚನಕಾರಳ ಸಾಹಿತ್ಯ ಕುರುಹನ್ನು ಬದಲಿಸುವ ಹಕ್ಕನ್ನು ಚಲಾಯಿಸಲು ಬರುವುದಿಲ್ಲ, ಪರಂಪರೆಯ ವಾರಸುದಾರಿಕೆ ಯಾರೊಬ್ಬರದೂ ಅಲ್ಲ. ವಚನಾಂಕಿತವು ಪ್ರಕ್ಷಿಪ್ತವಾದುದು, ಸ್ವಹಿತಾಸಕ್ತಿ ಸಾಧನೆಗಾಗಿ ಯಾರಿಂದಲೋ ಸೇರಿಸಲ್ಪಟ್ಟದ್ದು ಎಂಬ ಗ್ರಹಿಕೆ ಮಾತೆಯವರಿಗಿದ್ದರೆ, ಆ ಬಗ್ಗೆ ಸೂಕ್ತ ವೇದಿಕೆಯಲ್ಲಿ ಬೌದ್ಧಿಕ ಚರ್ಚೆ ಎತ್ತಬೇಕು. ತಮ್ಮ ಅನಿಸಿಕೆಗೆ ಪೂರಕವಾಗಿರುವ ಅಂಶಗಳನ್ನು ಸಾರ್ವಜನಿಕವಾಗಿ ಚರ್ಚೆಗಿಡಬೇಕು. ಅದು ಸಾಹಿತ್ಯ ವಲಯದಲ್ಲಿ, ಸಂಶೋಧನಾ ವಲಯದಲ್ಲಿ ಸಾಕಷ್ಟು ಚರ್ಚಿತವಾದ ನಂತರ, ಅಂಕಿತ ಬದಲಾವಣೆಯ ಸಾಹಸ ಮಾಡಬಹುದೇ ಹೊರತು ಏಗೆ ಏಕಪಕ್ಷೀಯವಾಗಿ ತಮಗೆ ಸರಿಕಂಡಂತೆ ವಚನಾಂಕಿತ ತಿದ್ದಿ ಮುದ್ರಿಸಬಾರದು. ಇದು ಕನಿಷ್ಠ ತಿಳಿವಳಿಕೆಯ ವಿಚಾರ.

ಅಷ್ಟಕ್ಕೂ ಬಹುಸಂಖ್ಯಾತ ಲಿಂಗಾಯತರು ಶರಣ ಮಾರ್ಗವನ್ನು ಒಪ್ಪಿದವರಾಗಿದ್ದಾಗಲೂ ಸ್ಥಾವರ ಲಿಂಗಾರ್ಚನೆಯ ತಪ್ಪು ಆಚರಣೆಗಳಿರುವುದಕ್ಕೆ ಯಾವುದೇ ವಚನಕಾರರ ಅಂಕಿತಗಳು ಕಾರಣವಲ್ಲ, ಅದು ಮಾತೆ ಹೇಳುವಂತೆ ಅಕ್ಕನ ಸ್ಥಾವರ ದೈವಸೂಚಕವಾಗಿದ್ದಾಗಲೂ, ಶರಣ ಧರ್ಮೀಯರು ದೇವಾಲಯಗಳಿಗೆ ಹೋಗುವ ಪದ್ಧತಿಯನ್ನು ಅವುಗಳಿಂದಾಗಿ ಬೆಳೆಸಿಕೊಂಡಿಲ್ಲ, ಅದಕ್ಕೆ ...ರೆಯುದೇ ಸಾಮಾಜಿಕ, ಸಾಂಸ್ಕೃತಿಕ ಇತಿಹಾಸದ ಕಾರಣಗಳಿವೆ. ವಚನಗಳನ್ನು ಓದುವ ಪ್ರಾಜ್ಞರು ಯಾರೂ ವಚನಕಾರರು ಈ ಅಂಕಿತಗಳ ಕಾರಣದಿಂದಾಗಿ ...ದಿಯಾಲಾಜಿಕಲ್ 'ಇನ್‌ಕ್ಲೈನೆನ್ಸಿ' ಹೊಂದಿದ್ದ ...ರೆಂದು ಭಾವಿಸುವುದಿಲ್ಲ, ಬದಲಿಗೆ ವಚನಗಳು ಪ್ರತಿಪಾದಿಸುವ ಸಾಮಾಜಿಕ, ಸಾಂಸ್ಕೃತಿಕ ...ಮಾನತೆ, ಕಾಯಕ ಗೌರವದ, ವ್ಯಕ್ತಿ ವಿಚಾರ ...ಸ್ವಾತಂತ್ರ್ಯ ಆಶಯಗಳೇ ಬಹಳ ಮುಖ್ಯ ...ನವನ್ನು ಎಂಬುದನ್ನು ಗಮನಿಸುತ್ತಾರೆ.



ವಚನಗಳ ಪ್ರಸ್ತುತತೆ ಇಂದಿನ ಸಮಾಜಕ್ಕೆ ಅತ್ಯಗತ್ಯವಾಗಿರುವುದು ಸಗುಣೋಪಾಸನೆಯ ಅಥವಾ ನಿರ್ಗುಣೋಪಾಸನೆಯ ಧರ್ಮಾನುಷ್ಠಾನ ಕಾರಣಕ್ಕಲ್ಲ. ವಚನಗಳು ತತ್ವ ಪ್ರಣಾಳಿಕೆಗಳೂ ಹೌದು. ಆದರೆ ಅವು ಕೇವಲ ಸ್ಥಾವರ ಲಿಂಗ ಅಥವಾ 'ರೂಪಿಲ್ಲದ' ಲಿಂಗ ಎಂಬ ಏಕ ತತ್ವದ ಪ್ರತಿಪಾದನೆಯನ್ನು ಮಾಡಲಿಕ್ಕಾಗಿ ಮಾತ್ರ ಬರೆದವುಗಳಲ್ಲ, ಸಾಮಾಜಿಕ ವಿಷಮತೆಗಳನ್ನು ಅಲ್ಲಗಳೆಯುತ್ತಾ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುತ್ತಾನೆ ಎಂಬ ಪ್ರಾಯೋಗಿಕ ಸರಳ ಸೂತ್ರವನ್ನು ಪ್ರತಿಪಾದಿಸುವುದಕ್ಕಾಗಿಯೂ ಬರೆಯಲ್ಪಟ್ಟವುಗಳು.

ಬಸವಣ್ಣ ಜಾತಿ ಅಸಮಾನತೆ, ಮೇಲುಕೀಳುಗಳ ಬಗ್ಗೆ ಮಾತನಾಡಿದ್ದು ಇಂದಿನ ಸಂದರ್ಭದಲ್ಲಿ ಹೆಚ್ಚು ಮಹತ್ವಪೂರ್ಣವೇ ಹೊರತು, ಲಿಂಗಾರ್ಚನೆಯ ವಿಧಾನದ ಬಗ್ಗೆ ಆತನಿಗಿದ್ದ ನಿಲುವುಗಳು ಪ್ರಾಸಂಗಿಕ. ಅಕ್ಕ ಮಹಾದೇವಿ ಮುಂದಿಸಿದ ಲಿಂಗ ಸಮಾನತೆಯ, ಇತರರಿಚ್ಛೆಯಂತಲ್ಲದೆ ತನ್ನಿಚ್ಛೆಯಂತೆ ಬಾಳುವ ದಿಟ್ಟತನದ ಸಂದೇಶ ಇಂದಿನ ಪ್ರಸ್ತುತತೆಯೇ ಹೊರತು ಚೆನ್ನ ಮಲ್ಲಿಕಾರ್ಜುನನೆಂಬುದು ಶಬ್ದಾರ್ಥದಲ್ಲಿ ಗಿರಿ ಮಲ್ಲಯ್ಯನೆಂಬ ದೇವರನ್ನು ಸೂಚಿಸುತ್ತಿದೆಯೋ ಅಲ್ಲವೋ ಎಂಬುದಲ್ಲ, ಶರಣ ಮಾರ್ಗವನ್ನು ಮತ್ತೊಂದು ಬಗೆಯ ಅನುಷ್ಠಾನಾಧಾರಿತ ಧರ್ಮ ಮಾಡಬೇಕೆಂದು ಪ್ರಯತ್ನಪಡುವುದು ಸ್ಥಾವರವೆನ್ನುವುದನ್ನು ಲಿಂಗಕ್ಕೆ ಮಾತ್ರವಲ್ಲ, 'ಮೂರ್ತಿಯಾದಡೆ ಪ್ರಳಯ ತಪ್ಪದು' ಎಂಬ ನಿಲುವಿನಿಂದ ಪ್ರತಿ ಸಂಗತಿಗೂ ಚಲನಶೀಲತೆಯನ್ನೇ ಅತ್ಯಂತ ಮುಖ್ಯ ಪ್ರಮೇಯವನ್ನಾಗಿ ಪರಿಭಾವಿಸಿದ ವಚನಕಾರರ ತತ್ವಾದರ್ಶಗಳಿಗೇ ದ್ರೋಹ ಬಗೆದಂತೆ.


ಹಾಗಾಗಿ ಮಾತೆ ಮಹಾದೇವಿಯವರಿಗೆ ಇತರ ಮಠಾಧೀಶರು ಅನುಸರಿಸುವ ವಿಧಿವಿಧಾನಗಳಿಗೆ ಬದಲಾಗಿ ಹೊಸ ಅನುಷ್ಠಾನಾಚಾರ ಸಂಪನ್ನ ಬಸವ ಧರ್ಮವನ್ನು ಕಟ್ಟಿ ಅದಕ್ಕೆ ತಾವೇ ಆದ್ಯ ಪಟ್ಟಾಧಿಕಾರಿಯಾಗುವ ಕನಸು ಮೈಹೊಕ್ಕಿರುವುದನ್ನು ಗಮನಿಸಬಹುದಾಗಿದೆ. ತತ್ವವೊಂದು ಚಿಂತನೆಯಾಗಿರುವವರೆಗೆ ಅದು ಆಧ್ಯಾತ್ಮಿಕವಾಗಿರುತ್ತದೆ. ಅದು ಕ್ರಿಯಾವಿಧಿಗಳೊಂದಿಗೆ ಸಾಂಸ್ಥಿಕಗೊಂಡೊಡನೆ ಮತಧರ್ಮವಾಗಿ ಅಧೋಗತಿಯಾಗುತ್ತದೆ. ನಿರ್ಗುಣ ದೇವೋಪಾಸನೆಯನ್ನು ಹೇಳುವ ಎಷ್ಟೋ ಮತಗಳ ಅನುಯಾಯಿಗಳು ಇತರೆ ವಿಚಾರಗಳಲ್ಲಿ ಎಷ್ಟು ಜನವಿರೋಧಿಯಾದ ಕಂದಾಚಾರಿಗಳಾಗಿರುವುದನ್ನು ಇದಕ್ಕೆ ಉದಾಹರಣೆಯಾಗಿ ಯಾರಾದರೂ ನೋಡಬಹುದು. ಪ್ರಶ್ನೆ ಅರ್ಚನೆಯ ಮಾರ್ಗದ್ದು ಮಾತ್ರವಾಗಬಾರದು, ಜೀವಪರ ಚಿಂತನೆಯದ್ದಾಗಬೇಕು ಎಂಬ ವಿವೇಚನೆಯ ಮೂಡದ ಹೊರತು ಬಸವ ಮಾರ್ಗದಲ್ಲಿ ನಡೆಯುವುದು ಸಾಧ್ಯವೇ?

ಶಿವಪ್ರಕಾಶರ 'ಮಹಾಚೈತ್ರ'ದ ವಿಷಯ, ಅಥವಾ 'ಆನು ದೇವಾ ಹೊರಗಣವನು...' ಕೃತಿಯ ವಿಷಯ ಬಂದಾಗ ವಿಶ್ಲೇಷಣೆ, ಸಂಶೋಧನೆ, ಹೊಸ ಗ್ರಹಿಕೆ ಮುಂತಾದ ಯಾವುದೇ ಪರಿಗಣನೆ ಇಟ್ಟುಕೊಳ್ಳದೆ, ಸಂಪ್ರದಾಯವಾದಿಗಳನ್ನು ಮೆಚ್ಚಿಸಲಿಕ್ಕಾಗಿಯೇ ಚಳವಳಿ ಮಾಡುವ ಪ್ರವೃತ್ತಿಯ ಮಾತೆಯವರು, ಕನ್ನಡ ಸಾಹಿತ್ಯ ಪರಂಪರೆಯ ವಾರುಸುದಾರಿಕೆ ಹೊಂದಿರುವ ಅಕ್ಕನ ವಚನಗಳ ಅಂಕಿತವನ್ನು ಮಾತ್ರ ತಾವು ಅಂದುಕೊಂಡಂತೆ ಏಕಾಂಗಿಯಾಗಿ ತಿದ್ದುಪಡಿ ಮಾಡಿದಾಗ ಮಾತ್ರ ಬೇರೆಯವರು ಈ ಬಗ್ಗೆ ಸಮಾಧಾನಕರವಾಗಿ ಬೌದ್ಧಿಕ ಸಂವಾದ ಮಾತ್ರ ನಡೆಸಬೇಕು ಎಂದು ನಿರೀಕ್ಷಿಸುತ್ತಾರೆ.

ಮಾತೆ ಮಹಾದೇವಿಯವರಿಗೆ ಶರಣ ಧರ್ಮದಲ್ಲಿ ಸೇರಿಕೊಂಡಿರುವ ಪುರುಷಕ ವೈದಿಕಶಾಹಿಯನ್ನು, ಪುರೋಹಿತಶಾಹಿಯನ್ನು ವಿರೋಧಿಸಿ ಲಿಂಗಾಯ ಮಾರ್ಗ ಶುದ್ಧೀಕರಣ ಮಾಡಬೇಕೆಂಬ ಇಚ್ಛೆಯಿದ್ದರೆ ಅದನ್ನು ಬೇರೆ ವಿಧಾನಗಳಲ್ಲಿ ಮಾಡಬಹುದು. ಇಡೀ ಕರ್ನಾಟಕ ಸಂಸ್ಕೃತಿಯ ಭಾಗವಾಗಿ, ಸಾಹಿತ್ಯ ಪರಂಪರೆಯ ಅಂಗವಾಗಿ ದೀಪಸ್ತಂಭದಂತೆ ನಿಂತಿರುವ, ಅಸಂಖ್ಯಾತ ಕಾಯಕ ನಿಷ್ಠ ಸಮುದಾಯಗಳ ತಾತ್ವಿಕ ಪಂಥಗಳ ಸಾರದಿಂದ ಸಂಪನ್ನವಾಗಿರುವ ವಚನಗಳನ್ನು, ವಚನಾಂಕಿತಗಳನ್ನು ಏಕಪಕ್ಷೀಯವಾಗಿ, ವ್ಯಕ್ತಿಗತ ನಿಲುವುಗಳಿಗನುಸಾರವಾಗಿ ತಿದ್ದುವ ತಪ್ಪುಮಾರ್ಗವನ್ನು ಅನುಸರಿಸಬಾರದು.

■ ಡಾ. ಬಂಜಗೆರೆ ಜಯಪ್ರಕಾಶ


ವೀರಶೈವರ ಸ್ವಯಂಘೋಷಿತ ಜಗದ್ಗುರು ಮಾತೆ ಮಹಾದೇವಿಗೆ ಮಾಡಲು ಬೇರೆ ಕೆಲಸವಿಲ್ಲವೋ ಅಥವಾ ಪುಗಸಟ್ಟೆ ಪ್ರಚಾರದ ಗೀಳು ಶುರುವಾಗಿದೆಯೋ ತಿಳಿಯುತ್ತಿಲ್ಲ.



ಒಟ್ಟಿನಲ್ಲಿ ಈ ಮಾತೆ ಹೊಸದೊಂದು ಮಾತು ಆರಂಭಿಸಿದ್ದಾರೆ. ಮೇಲ್ನೋಟಕ್ಕೆ ಈಕೆಯದು ತರಲೆ ಮಾತೆಂದು ಗೊತ್ತಾಗುವಂತಿದೆ.

ಎಲ್ಲರಿಗೂ ತಿಳಿದಿರುವಂತೆ ಅಕ್ಕ ಮಹಾದೇವಿಯ ವಚನಗಳಲ್ಲಿ ಕೊನೆಗೆ ಬರುವ 'ಚನ್ನಮಲ್ಲಿಕಾರ್ಜುನ'ವೆಂಬ ಅಂಕಿತವನ್ನು ಈ ಆಧುನಿಕ ಢೋಂಗಿ ಶರಣೆ ಮಾತೆ ಮಹಾದೇವಿ ಕೆಲ ವಚನಗಳಲ್ಲಿ 'ಮಹಾದೇವಿಯಕ್ಕ ಪ್ರಿಯ ಲಿಂಗದೇವಾ' ಎಂದು ಬದಲಿಸಿಬಿಟ್ಟಿದ್ದಾರೆ.

ತರಲೆ ಮಾದೇವಿ



ಮಾತೆ ಮಹಾದೇವಿಯ ಈ ಚಾಳಿ ಹೊಸದೇನಲ್ಲ. 1996 ರಲ್ಲೂ ಬಸವಣ್ಣನವರ ಕೂಡಲ ಸಂಗಮದೇವಾ' ಎಂಬ ಅಂಕಿತ ಬದಲಿಸಿ ಬರೀ 'ಲಿಂಗದೇವಾ' ಎಂಬುದಾಗಿ ಕೆಲ ವಚನಗಳನ್ನು ತಿರುಚಿಬಿಟ್ಟಿದ್ದರು. ಅದು ಆಮೇಲೆ ಗುಲ್ಬರ್ಗಾದಲ್ಲಿ ಕೋರ್ಟಿಗೂ ಹೋಗಿ ಮಾತೆಯ 'ಬಸವ ವಚನ ದೀಪ್ತಿ' ಪುಸ್ತಕ ನಿಷೇಧಕ್ಕೊಳಗಾಗಿತ್ತು.

ಈ ಮಾತೆ ಮಹಾದೇವಿ ತನ್ನ ಮಾರ್ಗದರ್ಶಿಯಾಗಿದ್ದ ಲಿಂಗಾನಂದ ಸ್ವಾಮಿಯನ್ನು ವಿಪರೀತ ಹಚ್ಚಿಕೊಂಡಿದ್ದರಿಂದಾಗಿ ಬಹುಶಃ ಈ ರೀತಿ ಲಿಂಗಪ್ರೇಮ ತೋರಿಸಿರಬಹುದೆಂಬ ಕುಹಕದ ಮಾತುಗಳೂ ಆಗ ಕೇಳಿಬಂದಿದ್ದವು. ಅದೇನೇ ಇರಲಿ, ಮಾತೆ ತನ್ನ ಈ ಚೇಷ್ಟೆಗಳಿಗೆ ವೀರಶೈವ ಸಿದ್ಧಾಂತ, ಶರಣರ ಆಶಯಗಳನ್ನು ಗುರಾಣಿಯಂತೆ ಅಡ್ಡ ಹಿಡಿದು ಸಮರ್ಥಿಸಿಕೊಳ್ಳುತ್ತಿದ್ದಾರೆ.

ಆಶ್ಚರ್ಯ ಏನೆಂದರೆ ವೀರಶೈವ ಧರ್ಮದ ಬಗ್ಗೆಯೋ ಇಲ್ಲಾ ಬಸವಣ್ಣನ ಕುರಿತೋ ಬೇರೆ ಯಾರಾದರೂ ಒಂದು ಮಾತಾಡಿದರೂ ಅಟ್ಟಿಸಿಕೊಂಡು ಬರುವ ರಾಜ್ಯದ ವೀರಶೈವ ಲೀಡರ್‌ಗಳೆಲ್ಲಾ ಈಗ ಗಪ್‌ಚುಪ್ ಆಗಿರುವುದು. ಅನ್ಯಜಾತಿಯ ಲೇಖಕರ್‍ಯಾರಾದರೂ ಹೀಗೆ ಕೂಡಲಸಂಗಮ ದೇವಾ ಬದಲು ಲಿಂಗಾದೇವಾ ಎಂತಲೋ ಅಥವಾ ಚನ್ನಮಲ್ಲಿಕಾರ್ಜುನನ ಅಂಕಿತದ ಬದಲಾಗಿ ಮಹಾದೇವಿಯಕ್ಕ... ಎಂಬಿತ್ಯಾದಿ ಅಸಂಬದ್ಧಗಳನ್ನು ಸೇರಿಸಿಬಿಟ್ಟಿದಿದ್ದರೆ ಇಷ್ಟು ಹೊತ್ತಿಗೆ ಲಿಂಗಾಯತರೆಲ್ಲಾ ಕಠಾರನೆ ಕಿರುಚಿಕೊಂಡು ಬೀದಿಗಿಳಿಯುತ್ತಿದ್ದರೇನೋ.



ಕರ್ನಾಟಕದ ಲಿಂಗಾಯತರಿಗೆ ಈ ಮಾತೆ ಮಹಾದೇವಿ ಒಂದು ಅನರ್ಘ್ಯ ರತ್ನವೆಂಬ ಭ್ರಮೆ ಕವಿದುಕೊಂಡಿರಬಹುದು. ದಯಮಾಡಿ ಅವರೊಮ್ಮೆ ಈಕೆಯ ಚರಿತ್ರೆ-ಜಾತಕಗಳನ್ನು ಚೆಕ್ ಮಾಡಿನೋಡಲಿ.

ಅಂಗೈ ತೋರಿಸಿ ಅವಲಕ್ಷಣ

62 ರ ವಯಸ್ಸಿನ ಮಾತೆ ಮಹಾದೇವಿಗೆ ಇರುವ ಗೀಳುಗಳು ಒಂದೆರಡಲ್ಲ, ಬಸವತತ್ವ, ರಾಜಕೀಯ, ಆಸ್ತಿ ಸಂಗ್ರಹಣೆ, ಎಲೆಕ್ಷನ್ನು, ಭೂ ಕಬಳಿಕೆ, ಬೀದಿ ಜಗಳ.... ಹೀಗೆ ತರಲೆ, ರಗಳೆಗಳ ಮೊತ್ತ ಈಕೆ.

1965 ರಲ್ಲಿ ಅದೇನು ಆನಂದವಾಯಿತೋ ಏನೋ ಲಿಂಗಾನಂದ ಸ್ವಾಮಿಗಳು ಆಗ 20 ರ ತರುಣಿಯಾಗಿದ್ದ ಮಾತೆಮಹಾದೇವಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟರು. ಅದಾದ ಒಂದೇ ವರ್ಷದೊಳಗೆ ಮಹಾದೇವಿ ತನ್ನನ್ನು ತಾನೇ ಜಗದ್ಗುರು ಎಂದು ಅನೌನ್ಸ್ ಮಾಡಿಕೊಂಡು ಬಿಟ್ಟರು. ಆಮೇಲೆ ಸ್ವಲ್ಪ ಶ್ರದ್ಧೆಯಿಂದಲೇ ಬಸವ ತತ್ವ ದರ್ಶನ, ತರಂಗಿಣಿ, ವಚನಸಾರ... ಹೀಗೆ ಕೆಲ ಪುಸ್ತಕಗಳನ್ನು ಬರೆದರು. ಮಾತೆಯ ಹೆಪ್ಪಿಟ್ಟ ಹಾಲು ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಬಂತು. ಒಂದೆರಡು ಬೌಂಡ್ ಫಾರಿನ್ ಟ್ರಿಪ್ ಮಾಡಿ ಅಮೆರಿಕಾದಲ್ಲಿ Universal Centre Of Basava ಎಂಬ ಕೇಂದ್ರವನ್ನು ಸ್ಥಾಪಿಸಿದರು.

ಆದರೆ ಮಾತೆಗೆ ಇಷ್ಟರಿಂದಲೇ ತೃಪ್ತಿಯಾಗಲಿಲ್ಲವೆಂದು ಕಾಣುತ್ತದೆ. ಆಗ ಭಕ್ತಾದಿಗಳು ಗೌರವಿಸಿ ಕೊಟ್ಟಿದ್ದ ಸ್ವಾಗತದಿಂದ ಎರಡು ಮೆಟ್ಟಿಲು ಕೆಳಗಿಳಿದು ಚಿಲ್ಲರೆ ಕೆಲಸ ಶುರು ಮಾಡಿಕೊಂಡರು. ಕೂಡಲ ಸಂಗಮದಲ್ಲಿ ಬಸವಣ್ಣ ಐಕ್ಯನಾದ ಸ್ಥಳದ ಬಳಿ ಸ್ವಲ್ಪ ಜಾಗ ಖರೀದಿಸಿ ಅರಿವಿ-ಮರೆವಿ ಎಂದು ಪಿಂಗಡಿಸಿ ಕೇಲಿಗಿಟ್ಟರು.... ಅದು ಸ್ಮಶಾನ.

ಶರಣ ಶ್ರೇಷ್ಠ ನಿರ್ವಾಣ ಹೊಂದಿದ ಜಾಗದಲ್ಲೇ ನಿಮಗೂ ಕೈಲಾಸ ಯಾತ್ರೆ ಮಾಡಿಸುತ್ತೇನೆಂದು ಆಮಿಷ ಒಡ್ಡಿದ್ದ ಸ್ಕೀಂ ಅದಾಗಿತ್ತು. ಕೊನೆಗೆ ಅದ್ಯಾಕೋ ಏನೋ ಬರ್ಕತ್ತಾಗಲಿಲ್ಲ. ಆಮೇಲೆ 1994 ರಲ್ಲಿ ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' ನಾಟಕದ ಮೇಲೆ ಜಗಳ ಶುರು ಮಾಡಿದರು. ಗುಲ್ಬರ್ಗಾ ಹಾಗೂ ಕುವೆಂಪು ವಿವಿ ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದ ಆ ಪುಸ್ತಕ ರದ್ದಾಗುವಂತೆ ನೋಡಿಕೊಂಡರು. ಮಹಾಚೈತ್ರ ಬಸವಣ್ಣನವರ ವ್ಯಕ್ತಿತ್ವಕ್ಕೆ ಅಪಚಾರ ಮಾಡಿದೆ ಎಂಬುದು ಮಾತೆಯ ವಾದವಾಗಿತ್ತು. ವಿಪರ್ಯಾಸವೇನೆಂದರೆ ಈಗ ಈಕೆಯೇ ಬಸವಣ್ಣ-ಅಕ್ಕ ಮಹಾದೇವಿಯರನ್ನು ತನ್ನ ಪೆದ್ದು ತಿಳಿವಳಿಕೆಯಡಿ ಸಿಕ್ಕಿಸಿ ಘೋರ ಅಪಚಾರ ಮಾಡುತ್ತಿರುವುದು. 1996 ರಲ್ಲಿ ಬಸವಣ್ಣನ ಅಂಕಿತವನ್ನು ಲಿಂಗದೇವ ಎಂದು ಬದಲಿಸಿ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡು ಕೊನೆಗೆ ಆ ಕೃತಿ ನಿಷೇಧಕ್ಕೊಳಗಾಯಿತು. ಆಗಲೂ ತನ್ನ ತಪ್ಪು ಒಪ್ಪಿಕೊಳ್ಳದ ಮಾತೆ 'ಈ ವಿವಾದಕ್ಕೆ ಭೀಮಣ್ಣ ಖಂಡ್ರೆ, ಲೀಲಾದೇವಿ ಪ್ರಸಾದ್ ಮತ್ತು ಚಿತ್ರದುರ್ಗದ ಶರಣರೇ ಕಾರಣ' ಎಂದು ಗೋಳಾಡಿದ್ದರು.

ರಾಜಕೀಯ-ಲ್ಯಾಂಡ್ ಡೀಲ್‌ಗಳು

ಈ ಮಾತೆಗೆ ಆಧ್ಯಾತ್ಮಕ್ಕಿಂತ ರಾಜಕೀಯದ ಆಕರ್ಷಣೆಯೇ ಜಾಸ್ತಿ.

ಕಾಡುಗಳ್ಳ ವೀರಪ್ಪನ್ ಮಾಜಿ ಮಂತ್ರಿ ನಾಗಪ್ಪರನ್ನು ಕಿಡ್ನ್ಯಾಪ್ ಮಾಡಿದಾಗ ಅದಕ್ಕೆ ಲಿಂಗಾಯತ ಜಾತಿ ಬಣ್ಣಕಟ್ಟಿ ಕೊಳ್ಳೇಗಾಲಕ್ಕೆ ಹೋಗಿ ಬೀದಿ ನೃತ್ಯ ಮಾಡಿ ಬಂದಿದ್ದರು. ಇರಲಾರದೆ ಅದೇನೊ ಬಿಟ್ಟುಕೊಂಡರು ಅನ್ನುವಂತೆ ವಿಜಯ ಸಂಕೇಶ್ವರನ ಕನ್ನಡ ನಾಡು ಪಾರ್ಟಿ ಸೇರಿ 2004 ರ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಉತ್ತರ ಕ್ಷೇತ್ರದಲ್ಲಿ ಸ್ಪರ್ಧಿಸಿದರು. ಆಗ ಈ ಜಗದ್ಗುರುಗೆ ಠೇವಣಿಯೂ ಉಳಿಯಲಿಲ್ಲ. ಈ ನಡುವೆ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದಲ್ಲಿ ಮೊಟ್ಟೆ ಕೊಡುವ ಸರ್ಕಾರದ ತೀರ್ಮಾನ ವಿರೋಧಿಸಿ ಪೆದ್ದಿಗಳೊಂದಿಗೆ ಸೇರಿ ಗಲಾಟೆ ಮಾಡಿ ಪುಟ್ಟ ಮಕ್ಕಳಿಗೂ ಅನ್ಯಾಯ ಮಾಡಿದ್ದರು.

ಇದರ ಜೊತೆಜೊತೆಗೆ ಲ್ಯಾಂಡ್ ಡೀಲ್‌ಗಳ ದುರ್ಗಂಧವೂ ಮಾತೆಯ ಬೆನ್ನಂಟಿಕೊಂಡಿದೆ.

ಬೆಂಗಳೂರು, ಧಾರವಾಡ, ಬಸವ ಕಲ್ಯಾಣಗಳಲ್ಲಿ ಕಟ್ಟಡಗಳನ್ನು ಹೊಂದಿರುವ ಮಾತೆ ಬಸವ ಕಲ್ಯಾಣದಲ್ಲೇ 1 ಕೋಟಿ ಬೆಲೆಯ 20 ಎಕರೆ ಜಮೀನು ಮಾಡಿಕೊಂಡಿದ್ದಾರೆ.

ಬೆಂಗಳೂರಿನ ಕುಂಬಳಗೋಡಿನ ಹತ್ತಿರದ ಕಂಬೀಪುರದಲ್ಲಿ ಅನಾಥಾಶ್ರಮ ಕಟ್ಟುತ್ತೇನೆಂದು ಭಕ್ತರನ್ನು ನಂಬಿಸಿ ಹಣ ಎತ್ತಿ ಒಂದು ಕಟ್ಟಡ ಕಟ್ಟಿದ್ದಾರಾದರೂ ಅದೇ ನೆಪದಲ್ಲಿ ಅಕ್ಕಪಕ್ಕದ ರೈತರ ಜಮೀನು ಕಬಳಿಸುವ ಕುತಂತ್ರವನ್ನು ನಡೆಸುತ್ತಿದ್ದಾರೆ.

ಈಗ ಮತ್ತೆ ಅಕ್ಕ ಮಹಾದೇವಿಗೆ ತಗುಲಿಕೊಂಡಿದ್ದಾರೆ.

'ಶರಣರ ಗುಣ ಮರಣದಲ್ಲಿ ...' ಮಾತೇನೋ ಇದೆ ಸರಿ, ಆದರೆ ಅದೇ ಶರಣರ ಗುಣ ಬದುಕಿದ್ದಾಗಲೂ ಕಾಣಬೇಕು ಅಲ್ಲವೆ?

■ ...

ಆದಿ ಉಡುಪಿ ಬೆತ್ತಲೆ ಪ್ರಕರಣ: ಬೆತ್ತಲಾದವರು ಯಾರು?

"ಕ್ರಿಮಿನಲ್ ಕೃತ್ಯಗಳನ್ನು ವೈಪರೀತ್ಯವೆಂದು ಭಾವಿಸದೆ ಇರುವ ಸಮಾಜದಲ್ಲಿ ಕೋರ್ಟು ವಿಚಾರಣೆಯಿಂದ ನ್ಯಾಯ ದೊರೆಯದು."

ಜರ್ಮೇನ್ ಟಿಲ್ಲಿಯನ್ (ನಾಝಿಗಳ ವಿರುದ್ಧ ಫ್ರೆಂಚ್ ಭೂಗತ ಹೋರಾಟದ ನಾಯಕಿ).

"ವೈಪರೀತ್ಯಕ್ಕೆ ಬೆದರಲಾಗದು ಸ್ವಾಮಿ ಕಾರ್ಯವಿದು."

-ಕುಮಾರವ್ಯಾಸ ಭಾರತದಲ್ಲಿ ಅಭಿಮನ್ಯುವನ್ನು ಮೋಸದಲ್ಲಿ ಕೊಲ್ಲಲು ಹುರಿದುಂಬಿಸುತ್ತ ದ್ರೋಣ ಹೇಳುವ ಮಾತು



ಉಡುಪಿಯ ಜಿಲ್ಲಾ ತ್ವರಿತ ನ್ಯಾಯಾಲಯ, ತಾ. 29.7.08 ರಂದು, ಆದಿ ಉಡುಪಿ ಬೆತ್ತಲೆ ಪ್ರಕರಣವೆಂದೇ ನಾಡಿನಲ್ಲಿ ಮನೆ ಮಾತಾಗಿರುವ ಮೊಕದ್ದಮೆಯಲ್ಲಿ ತನ್ನ ತೀರ್ಪನ್ನು ಪ್ರಕಟಿಸಿದ್ದು ಎಲ್ಲ 13 ಆರೋಪಿಗಳನ್ನೂ ಖುಲಾಸೆಗೊಳಿಸಿದೆ. ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಪ್ರಾಸಿಕ್ಯೂಷನ್-ಅಂದರೆ ದೂರು ದಾಖಲಿಸಿಕೊಂಡು ತನಿಖೆ ನಡೆಸಿ ಕೇಸು ಹಾಕಿದ ಸಿಓಡಿ ಪೊಲೀಸ್ ಖಾತೆ ಮತ್ತು ನ್ಯಾಯಾಲಯದ ಮುಂದೆ ಕೇಸನ್ನೂ ಸಮರ್ಥಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್-ಆರೋಪಿಗಳ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಲು ವಿಫಲರಾದರು ಎಂಬ ಅಂಶವನ್ನು ಎತ್ತಿ ಹಿಡಿದಿದ್ದಾರೆ.

ನ್ಯಾಯಾಲಯದ ಈ ತೀರ್ಪಿನಲ್ಲಿ ಆಶ್ಚರ್ಯಪಡುವಂತಹದ್ದು ಏನೂ ಇಲ್ಲ. ಮನುಷ್ಯ ಮಾತ್ರರಾದ ಉಡುಪಿ ಜಿಲ್ಲಾ ತ್ವರಿತ ನ್ಯಾಯಾಲಯದ ನ್ಯಾಯಾಧೀಶರೇ ಯಾಕೆ, ಸಾಕ್ಷಾತ್ ನ್ಯಾಯದೇವತೆಯೇ ಈ ಮೊಕದ್ದಮೆಯ ವಾದ ಪ್ರತಿವಾದಗಳನ್ನು ಆಲಿಸಿದ್ದರೂ... ತೀರ್ಪು ಇದಕ್ಕಿಂತ ಬೇರೆಯಾಗಿರುವುದು ಸಾಧ್ಯವಿರಲಿಲ್ಲ. ನ್ಯಾಯಾಲಯ ಮುಂದೆ, ಪ್ರಕರಣದ ಬಗ್ಗೆ ಸಾಕ್ಷಿ ನೀಡಿದ ಪೊಲೀಸ್ ಸಿಬ್ಬಂದಿ ಹಾಗೂ ಮೊಕದ್ದಮೆಯ ಪರವಾಗಿ ವಾದಿಸಿ, ಆರೋಪಿಗಳನ್ನೂ ಸಾಕ್ಷಿಗಳನ್ನೂ ಪ್ರಶ್ನಿಸಬೇಕಾಗಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್ ತಮ್ಮ ಕರ್ತವ್ಯವನ್ನು ನಿರ್ವಹಿಸಿದ ವೈಖರಿಯಿಂದಾಗಿ, ಆರೋಪಿಗಳು ದೋಷಮುಕ್ತರಾಗುವುದು ಶತಸ್ಸಿದ್ಧವಾಗಿತ್ತು.

ತ್ವರಿತ ನ್ಯಾಯಾಲಯದ ಮುಂದೆ ಹೆಚ್ಚುಕಡಿಮೆ ಎರಡು ವರ್ಷಗಳ ಕಾಲಾವಧಿಯಲ್ಲಿ ಈ ಮೊಕದ್ದಮೆಯ ವಿಚಾರಣೆ ನಡೆದ ರೀತಿಯಲ್ಲೂ ವಿಶೇಷವಾಗಿ ಎತ್ತಿ ಹೇಳುವಂತಹದ್ದೇನೂ ಇಲ್ಲ. ನಿತ್ಯ ಸಾಯುವವರಿಗೆ ಯಾರು ಅಳುತ್ತ ಕೂರುತ್ತಾರೆ? 2002 ರ ಗುಜರಾತ್ ನರಹತ್ಯೆ ಮತ್ತು 1992-93 ರ ಮುಂಬಯಿ ಹಿಂಸಾಚಾರಕ್ಕೆ ಸಂಬಂಧಿಸಿದ ಮೊಕದ್ದಮೆಗಳನ್ನೇ ನಮ್ಮ ಘನತೆವೆತ್ತ ನ್ಯಾಯಾಲಯಗಳು ವಜಾಗೊಳಿಸಿರುವಾಗ ಉಡುಪಿಯ ಈ ಮೊಕದ್ದಮೆ ಯಾವ ಲೆಕ್ಕ? ಪ್ರಾಯಕ್ಕೆ ಬಂದ ಗಂಡಸರನ್ನು ಬಲಾತ್ಕಾರವಾಗಿ ಬೆತ್ತಲೆಗೊಳಿಸುವುದು, ಕೊಲೆಯಷ್ಟು ಅಥವಾ ಅತ್ಯಾಚಾರದಷ್ಟು ಹೇಯವಾದ ಅಪರಾಧವಲ್ಲ ಎಂದು ಕಾಣಬಹುದು. ಆದರೆ ಆದಿ ಉಡುಪಿ ಬೆತ್ತಲೆ ಪ್ರಕರಣದ ವಿವರಗಳು, ಆ ಕುರಿತ ಪೊಲೀಸ್ ತನಿಖೆ ಮತ್ತು ಉಡುಪಿಯ ನ್ಯಾಯಾಲಯದಲ್ಲಿ ನಡೆದ ವಿಚಾರಣೆ ಎಂಬ ವಿಕಟ ನಾಟಕ–ಇವು ಒಟ್ಟಾಗಿ ಸೂಚಿಸುವ ರಾಜಕೀಯ ಸಂಸ್ಕೃತಿಯೇ ಮುಂಬಯಿ ಗಲಭೆಗಳಿಗೂ, ಗುಜರಾತ್ ನರಹತ್ಯೆಗೂ ಕಾರಣವಾಗಿದೆ ಎಂಬುದನ್ನು ನಾವು ಮರೆಯಕೂಡದು.

ನ್ಯಾಯಾಲಯದ ಪ್ರಶ್ನಾರ್ಹ ತೀರ್ಪು

ತೋಳ್ಬಲದ ಎಗ್ಗಿಲ್ಲದ ಬಳಕೆ, ದುರ್ಬಲರ ದಮನ, ತನಗಿಂತ ಬೇರೆಯಾಗಿರುವ ಎಲ್ಲದರ ಕುರಿತು ಅತೀವ ಅಸಹನೆ, ದ್ವೇಷ ಮತ್ತು ಅಸಾಧಾರಣ ಕ್ರೌರ್ಯಗಳೇ ಮುಖ್ಯ ಲಕ್ಷಣವಾಗಿರುವ ಈ ರಾಜಕೀಯ ಸಂಸ್ಕೃತಿಗೆ ಆದಿ ಉಡುಪಿ ಬೆತ್ತಲೆ ಪ್ರಕರಣ ಒಂದು ರೂಪಕ. ಭಯಾನಕತೆಯ ವಿವರಗಳೇ ವಿವರಣೆಯೂ ಆಗುವ ರೂಪಕ ಅದು.

2005 ಮಾರ್ಚ್ 13 ರಂದು, ಉಡುಪಿಯ ಹೊರವಲಯದ ಆದಿ ಉಡುಪಿ ಎಂಬಲ್ಲಿ ಸಂಜೆ ಸುಮಾರು 7.30 ರ ಸುಮಾರಿಗೆ ಈ ಪ್ರಕರಣ ನಡೆಯಿತು. ಉಡುಪಿಗೆ ಸಮೀಪದ ಕಾಪುವಿನ ಮೂಳೂರು ಗ್ರಾಮದ ಸುಮಾರು 62 ವರ್ಷ ಪ್ರಾಯದ ಹಾಜಬ್ಬ ಮತ್ತು ಅವರ ಮಗ, 28 ರ ಹರೆಯದ ಹಸನಬ್ಬ ಜಾನುವಾರು ಖರೀದಿಗೆಂದು ಆದಿ ಉಡುಪಿಗೆ ತಾಗಿಕೊಂಡಿರುವ ಮೂಡುಬೆಟ್ಟು ಗ್ರಾಮಕ್ಕೆ ಬಂದಿದ್ದರು. ವಾಸ್ತವವಾಗಿ ಒಂದು ದನ ಮತ್ತು ಕರು ಮಾರುವುದಿದೆ ಎಂದು ಅವರನ್ನು ಅಲ್ಲಿಗೆ ಕರೆಸಲಾಗಿತ್ತು. ಹಾಜಬ್ಬ ಮತ್ತು ಅವರ ಮಗ ಜಾನುವಾರು ವ್ಯಾಪಾರವನ್ನೇ ತಮ್ಮ ವೃತ್ತಿ ಮಾಡಿಕೊಂಡವರು. ಮೂಡುಬೆಟ್ಟಿನಲ್ಲಿ ಅವರು ದನಕರು ಖರೀದಿಸಿ, ತಮ್ಮ ಮಾರುತಿ ವ್ಯಾನಿನಲ್ಲಿ ಅದನ್ನು ಸಾಗಿಸುವಾಗ, ಸುಮಾರು 15 ರಿಂದ 20 ಜನರ ಗುಂಪೊಂದು ಅವರನ್ನ ತಡೆಯಿತು. ಗುಂಪಿನಲ್ಲಿದ್ದವರು ಹಾಜಪ್ಪ ಹಸನಬ್ಬರನ್ನು ವ್ಯಾನಿನಿಂದ ಹೊರಗೆಳೆದು ಅವರ ಬಳಿ ಇದ್ದ ಮೊಬೈಲು, ನಗದು ಹಣ ಇತ್ಯಾದಿಗಳನ್ನು ದೋಚಿ, ಬಲಾತ್ಕಾರದಲ್ಲಿ ಅವರನ್ನು ಸಂಪೂರ್ಣ ಬೆತ್ತಲೆಗೊಳಿಸಿ ಥಳಿಸಿದರು.

ಈ ಘಟನೆ ನಡೆದ ಆದಿ ಉಡುಪಿಯ ಮೈದಾನ, ಸದಾ ಜನನಿಬಿಡವಾಗಿರುವ ಹೆದ್ದಾರಿಯ ಪಕ್ಕದಲ್ಲೇ ಇದ್ದು ಈ ಪ್ರಕರಣವನ್ನು ದಾಖಲು ಮಾಡಿಕೊಂಡ ಮಲ್ಪೆ ಪೊಲೀಸ್ ಠಾಣೆಯೂ ಸಮೀಪದಲ್ಲೇ ಇದೆ. ಹಾಜಬ್ಬ ಹಸನಬ್ಬರ ವಸ್ತ್ರಾಪಹರಣ ಪ್ರಸಂಗ ಮೈದಾನದಲ್ಲಿ ನೂರಾರು ಜನರ ಸಮ್ಮುಖದಲ್ಲೇ ನಡೆದಿದೆ. ಅವರ ಮೇಲೆ ಹಲ್ಲೆ ಮಾಡಿದವರ ಪೈಕಿ ಸ್ವತಃ ಪೊಲೀಸರೇ 13 ಜನರನ್ನು ಹೆಸರಿಸಿದ್ದಾರೆ. ಹಾಗಿದ್ದೂ ತಮ್ಮ ದೂರನ್ನು ನ್ಯಾಯಾಲಯದ ಎದುರು ಸಾಬೀತುಪಡಿಸಲು ಪ್ರಾಸಿಕ್ಯೂಷನ್‌ಗೆ ಯಾಕೆ ಸಾಧ್ಯವಾಗಲಿಲ್ಲ?



ಸರಕಾರಿ ವಕೀಲರೂ ಬೆತ್ತಲೆ!
ಸಿಓಡಿ ಅಧಿಕಾರಿಯೂ ಬೆತ್ತಲೆ!!

ಆದಿ ಉಡುಪಿ ಬೆತ್ತಲೆ ಪ್ರಕರಣಕ್ಕೆ ಸಂಬಂಧಿಸಿದ ಚಾರ್ಜ್‌ಶೀಟ್‌ನ್ನೇ ಓದಿನೋಡುವ ಕನಿಷ್ಠ ಕಾಳಜಿಯನ್ನು ತೋರ್ಪಡಿಸದ ಶೇಖರ ಬೋವಿ ಒಂದೇ ಒಂದು ಬಾರಿ ಆರೋಪಿಗಳನ್ನಾಗಲಿ, ಸಾಕ್ಷಿದಾರರನ್ನಾಗಲಿ ನ್ಯಾಯಾಲಯದ ಕಟಕಟೆಯಲ್ಲಿ ವಿಚಾರಣೆ ನಡೆಸುವ ಕೆಲಸವನ್ನು ನಡೆಸಲಿಲ್ಲ.


ಆದಿ ಉಡುಪಿ ಬೆತ್ತಲೆ ಪ್ರಕರಣದ ಆರೋಪಿಗಳೆಂದು ಗುರುತಿಸಲ್ಪಟ್ಟಿದ್ದ ಎಲ್ಲಾ 13 ಜನರನ್ನು ಉಡುಪಿ ಜಿಲ್ಲಾ ತ್ವರಿತಗತಿಯ (ಫಾಸ್ಟ್ ಟ್ರ್ಯಾಕ್) ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್. ಗೌಡರು ಖುಲಾಸೆಗೊಳಿಸಿ ತೀರ್ಪು ನೀಡಿದ್ದಾರೆ.

2005ರ ಮಾರ್ಚ್ 13ರಂದು ರಾತ್ರಿ ಆದಿ ಉಡುಪಿ ಹೆಲಿಪ್ಯಾಡ್‌ನಲ್ಲಿ ಆರೋಪಿಗಳು ಹಾಜಬ್ಬ ಹಾಗೂ ಹಸನಬ್ಬರ ಮೇಲೆ ಮಾರಕಾಯುಧಗಳಿಂದ ಹಲ್ಲೆ ನಡೆಸಿಲ್ಲ ಎಂದಾಗಲಿ, ನಗದು ಹಣ ಮತ್ತು ಬೆಲೆಬಾಳುವ ಸೊತ್ತುಗಳನ್ನು ದರೋಡೆ ಮಾಡಿಲ್ಲ ಎಂದಾಗಲಿ, ಬಲಾತ್ಕಾರವಾಗಿ ಬೆತ್ತಲೆಗೊಳಿಸಿಲ್ಲ ಎಂದಾಗಲಿ ನ್ಯಾಯಾಧೀಶರು ತೀರ್ಪಿನಲ್ಲಿ ಹೇಳಿಕೊಂಡಿಲ್ಲ.

ಆದರೆ ಒಂದು ವಿಷಯವನ್ನು ಮಾತ್ರ ಜಡ್ಜ್ ಸ್ಪಷ್ಟವಾಗಿ ಹೇಳಿದ್ದಾರೆ. ಅದೇನೆಂದರೆ ಪ್ರಕರಣದ ತನಿಖೆ ನಡೆಸಿದ ಅಧಿಕಾರಿಗಳು ಹಾಗೂ ಪ್ರಾಸಿಕ್ಯೂಶನ್ ಪರ ವಕೀಲರು (ಸರಕಾರದ ಪರ ವಕೀಲರು) ಆರೋಪಿಗಳ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿ, ಆರೋಪಿಗಳಿಗೆ ಶಿಕ್ಷೆಯಾಗುವಂತೆ ನ್ಯಾಯಾಲಯದ ಮುಂದೆ ಸಮರ್ಥವಾಗಿ ಪ್ರತಿಪಾದಿಸಲು ಸಂಪೂರ್ಣವಾಗಿ ವಿಫಲರಾಗಿದ್ದಾರೆ!

ಪಾಪಿಯಾದ ಪಿಪಿ

ಬೆತ್ತಲೆ ಪ್ರಕರಣದ ಆರೋಪಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುವಂತಾಗಲು ಬಹುದೊಡ್ಡ ಕೊಡುಗೆ ಕೊಟ್ಟವರು ಸರ್ಕಾರಿ ವಕೀಲ ಶೇಖರ ಬೋವಿ.



ಸರಕಾರಿ ವಕೀಲನಾಗುವ ಮೊದಲು ಜನತಾದಳದ ಸ್ಥಳೀಯ ನಾಯಕನಾಗಿದ್ದ ಬೋವಿ, ಉಡುಪಿ ನ್ಯಾಯಾಲಯದಲ್ಲಿ ವಕೀಲರಾಗಿ ರಶೀದಿ ಕೊಡದೆ ಫೀಸು ಪಡೆದು ಅನೇಕ ಮಂದಿ ಆರೋಪಿಗಳನ್ನು ರಕ್ಷಿಸಿದ ಅನುಭವಿ.

ಈ ಅನುಭವದ ಹಿನ್ನೆಲೆಯೊಂದಿಗೆ ಸರಕಾರಿ ವಕೀಲ ರಾಗಿ ನೇಮಕಗೊಂಡ ಶೇಖರ ಬೋವಿ, ಸರ್ಕಾರಿ ವಕೀಲರಾದ ಬಳಿಕ ಬಜೆಪಿ ಪಕ್ಷಪಾತಿ ಯಾಗಿ ನಡೆದುಕೊಂಡು ಯಾವುದೋ ಒಂದು ಋಣವನ್ನು ತೀರಿಸಿದ್ದಾರೆ ಅಷ್ಟೇ.

ಫಾಸ್ಟ್ ಟ್ರ್ಯಾಕ್ ಕೋರ್ಟ್‌ನಲ್ಲಿ ಬೆತ್ತಲೆ ಕೇಸ್‌ನ ವಿಚಾರಣೆ ಪ್ರಕ್ರಿಯೆ ನಡೆಯುತ್ತಿದ್ದಾಗ ಬಾಯಿಗೆ ಬೀಗ ಹಾಕಿದವರಂತೆ ಒಂದು ಮಾತನ್ನೂ ಆಡದೇ ಮೌನ ವಹಿಸಿದ್ದೇ ಬೋವಿಯ ಭಾರೀ ಸಾಧನೆ.

ಆದಿ ಉಡುಪಿ ಬೆತ್ತಲೆ ಪ್ರಕರಣಕ್ಕೆ ಸಂಬಂಧಿಸಿದ ಚಾರ್ಜ್‌ಶೀಟ್‌ನ್ನೇ ಓದಿನೋಡುವ ಕನಿಷ್ಠ ಕಾಳಜಿಯನ್ನು ತೋರ್ಪಡಿಸದ ಶೇಖರ ಬೋವಿ ಒಂದೇ ಒಂದು ಬಾರಿ ಆರೋಪಿಗಳನ್ನಾಗಲಿ, ಸಾಕ್ಷಿದಾರರನ್ನಾಗಲಿ ನ್ಯಾಯಾಲಯದ ಕಟಕಟೆಯಲ್ಲಿ ವಿಚಾರಣೆ ನಡೆಸುವ ಕೆಲಸವನ್ನು ನಡೆಸಲಿಲ್ಲ.

ಆರೋಪಿ ಪರ ವಕೀಲರಾದ ಎಂ.ಶಾಂತರಾಮ ಶೆಟ್ಟಿಯವರು ಸಾಕ್ಷಿದಾರರನ್ನು, ಫಿರ್ಯಾದಿದಾರರನ್ನು ಹತ್ತು ಹಲವು ಪ್ರಶ್ನೆಗಳನ್ನು ಕೇಳಿ ಗೊಂದಲಕ್ಕೆ ಸಿಲುಕಿಸುತ್ತಿದ್ದಾಗ ಅದರ ಚಂದವನ್ನು ನೋಡುತ್ತಾ ಕುಳಿತದ್ದೇ ಪಿಪಿ ಬೋವಿಯ ಸಾಹಸ!

ಹಾಜಬ್ಬರ ಪತ್ನಿ ಚಾಮಮ್ಮ (60) ಹಾಗೂ ಬೆತ್ತಲೆ ಫೋಟೋ ತೆಗೆದ ಉಮೇಶ್ ಮಾರ್ಪಳ್ಳಿಯವರನ್ನು ಆರೋಪಿ ಪರ ವಕೀಲರು ಕೇಳಬಾರದ ಪ್ರಶ್ನೆಗಳನ್ನು ಕೇಳುವಾಗ, ಮಧ್ಯೆ ಪ್ರವೇಶಿಸದೆ, ನಂತರ ಗೊಂದಲ ಪರಿಹರಿಸುವ ನಿಟ್ಟಿನಲ್ಲಿ ಪಾಟಿಸವಾಲಿಗೂ ಗುರಿಪಡಿಸದೆ ಪರೋಕ್ಷವಾಗಿ ಆರೋಪಿಗಳ ಪರವಾಗಿ ನಿಯುಕ್ತಿಗೊಂಡಿದ್ದ ಎರಡನೇ ವಕೀಲರಂತೆ ನಡೆದುಕೊಂಡರು ಶೇಖರ್ ಬೋವಿ.

ಫೋಟೋ ನೆಗೆಟಿವ್ ನಾಶ

ಆದಿ ಉಡುಪಿ ಪ್ರಕರಣದ ಅತ್ಯಂತ ಅಮೂಲ್ಯ ಮತ್ತು ಅತೀ ಪ್ರಮುಖ ಸಾಕ್ಷಿಯಾಗಿದ್ದುದು ಫೋಟೋ ನೆಗೆಟಿವ್ಸ್!

ಸಿಓಡಿ ಇನ್ಸ್‌ಪೆಕ್ಟರ್.ಕೆ.ವಿ.ಶೆಟ್ಟಿ 2005ರ ಜೂನ್ 15ರಂದು ಉಮೇಶ್ ಮಾರ್ಪಳ್ಳಿಯವರಿಂದ ಫೋಟೋ ನೆಗೆಟಿವ್ಸ್‌ನ್ನು ವಶಪಡಿಸಿಕೊಂಡಿದ್ದರು.

ಹೀಗೆ ವಶಪಡಿಸಿಕೊಂಡಿದ್ದ ನೆಗೆಟಿವ್ಸ್‌ನ್ನು ಪ್ರಕರಣದ ತನಿಖಾಧಿಕಾರಿ ಸಿಓಡಿ ಡಿವೈಎಸ್ಪಿ ವಿ.ಎಸ್. ಅನಿಲ್ ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪಣಾ ಪಟ್ಟಿ (ಚಾರ್ಜ್‌ಶೀಟ್)ಯಲ್ಲಿ ಲಗತ್ತಿಸಿರಲೇ ಇಲ್ಲ! ಯಾಕೆ ಗೊತ್ತಾ? ಫೋಟೋ ನೆಗೆಟೀವ್ಸ್ ಕಾಣೆಯಾಗಿದೆಯಂತೆ!

ಇಡೀ ಪ್ರಕರಣದ ಅತೀ ಪ್ರಮುಖ ಸಾಕ್ಷಿಯಾಗಿದ್ದ ನೆಗೆಟಿವ್ಸ್ ಕಾಣೆಯಾಗುವುದಾದರೂ ಹೇಗೆ? ಕ್ರಿಮಿನಲ್ ಆರೋಪಿಗಳನ್ನು ರಕ್ಷಿಸುವ ಸಲುವಾಗಿಯೇ ಸಿಓಡಿ ತನಿಖಾಧಿಕಾರಿಗಳು ನೆಗೆಟಿವ್ಸ್‌ನ್ನು ನಾಶಪಡಿಸಿದರು!

ಯಾವುದೇ ಪ್ರಕರಣದಲ್ಲಿ ಯಾರಾದರೂ ಸಾಕ್ಷ್ಯ ನಾಶಪಡಿಸುವ ಕೆಲಸ ಮಾಡಿದರೆ, ಅವರ ಮೇಲೆ ಮೊಕದ್ದಮೆ ಗ್ಯಾರಂಟಿ. ಆದರೆ ಇಲ್ಲಿ ಈ ಕೃತ್ಯ ನಡೆಸಿದವರು ಸಿಓಡಿ ಡಿವೈಎಸ್ಪಿ, ಈ ಅನನ್ಯ ಸಾಧನೆಗಾಗಿ ಬಿಜೆಪಿ ಸರಕಾರ ವಿ.ಎಸ್. ಅನಿಲ್‌ಗೆ ಚಿನ್ನದ ಪದಕ ನೀಡಿ ಪ್ರಮೋಶನ್ ಕೊಟ್ಟರೂ ಆಶ್ಚರ್ಯವಿಲ್ಲ.


■ ಶ್ರೀರಾಮ ದಿವಾಣ

ಆರೋಪಿಗಳಿವರು

1. ಕಾಂತು ಪೂಜಾರಿ(66), ಮೂಡಬೆಟ್ಟು ಗದ್ದೆಗೆ ಮೇಯಲು ಬಂದ ಹಸುವಿನ ಕರುವನ್ನು ಕಟ್ಟಿ ಹಾಕಿದವರು. ಬೊಗ್ಗು ಶೆಟ್ಟಿ ಎಂಬಾತನೊಂದಿಗೆ ಸೇರಿಕೊಂಡು ಹಾಜಬ್ಬರನ್ನು ದೂರವಾಣಿ ಮೂಲಕ ತಾವೇ ಸ್ವತಃ ಮನೆಗೆ ಕರೆಸಿಕೊಂಡವರು. 250 ರೂ. ಪಡೆದು ಹಸುವಿನ ಕರುವನ್ನು ಹಾಜಬ್ಬರಿಗೆ ಮಾರಾಟ ಮಾಡಿದವರು.
2. ಸತೀಶ್ ಪೂಜಾರಿ (24), ಕಾಂತು ಪೂಜಾರಿಯ ಮಗ. ಮೆಕಾನಿಕ್, ಭಜರಂಗದಳ ಮತ್ತು ಹಿಂದೂ ಯುವ ಸೇನೆ ಕಾರ್ಯಕರ್ತ.
3. ಜಯಂತ್ ಶೆಟ್ಟಿ (31), ಮೂಡಬೆಟ್ಟು, ಕಂಡಕ್ಟರ್, ಭಜರಂಗದಳ ಮತ್ತು ಹಿಂದೂ ಯುವಸೇನೆ ಕಾರ್ಯಕರ್ತ.
4. ಧರ್ಮ ಕುಮಾರ್ (31), ಕಲ್ಮಾಡಿ, ರಿಕ್ಷಾ ಚಾಲಕ, ಭಜರಂಗಿ
5. ಯಶಪಾಲ್ ಎ ಸುವರ್ಣ (25), ಅಜ್ಜರಕಾಡು, ಹಿಂದೂ ಯುವಸೇನೆಯ ಮಾಜಿ ಜಿಲ್ಲಾಧ್ಯಕ್ಷ. ಹಾಲಿ ಉಡುಪಿ ನಗರಸಭೆಯ ಬಿಜೆಪಿ ಸದಸ್ಯ.
6. ಜಯಪ್ರಕಾಶ ಭಂಡಾರಿ (36), ಮೂಡಬೆಟ್ಟು, ಬಸ್ ಮಾಲೀಕ
7. ರಾಮಭಟ್(31), ವ್ಯಾಪಾರಿ, ಅಂಬಲಪಾಡಿ, ಹಿಂದೂ ಯುವಸೇನೆ ಕಾರ್ಯಕರ್ತ
8. ಪ್ರಶಾಂತ್ ಕೋಟ್ಯಾನ್ (23), ಮಧ್ವನಗರ ಟೆಂಪೋಚಾಲಕ, ಹಿಂದೂ ಯುವಸೇನೆ ಕಾರ್ಯಕರ್ತ
9. ಅಶೋಕ ಪೂಜಾರಿ (30), ಮೂಡಬೆಟ್ಟು, ವ್ಯಾಪಾರಿ, ಹಿಂದೂ ಯುವಸೇನೆ ಕಾರ್ಯಕರ್ತ
10. ಭೀಮ ಬಸಣ್ಣಗೌಡ (35), ಆದಿ ಉಡುಪಿ, ಹಮಾಲಿ, ಮೂಲತಃ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ಅಗಸಿ ನಿವಾಸಿ
11. ಸುಕೇಶ ಪೂಜಾರಿ (23), ಆದಿ ಉಡುಪಿ, ವ್ಯಾಪಾರಿ
12. ಮನೋಜ್‌ಕುಮಾರ್ ಶೆಟ್ಟಿ (24), ಕೊಡವೂರು, ವ್ಯಾಪಾರಿ
13. ವಿಜಯಪ್ರಕಾಶ್ ಪೂಜಾರಿ (30), ಮಧ್ವನಗರ, ಪೇಯಿಂಟರ್

ಅದರ ಈ ವೈಫಲ್ಯಕ್ಕೆ ನಮ್ಮ ಪೊಲೀಸು ಖಾತೆ ಮತ್ತು ಕಾನೂನು ವ್ಯವಸ್ಥೆಯ ಜಾಣ ಕುರುಡು ಮತ್ತು ಬುಬ್ಬುಗೇಡಿ ಸ್ವಾಮಿನಿಷ್ಠೆಗಳೇ ಕಾರಣವಾಗಿವೆ. ವಾಸ್ತವವಾಗಿ ಈ ಘಟನೆ ನಡೆದ ತಕ್ಷಣ ಮಲ್ಪೆ ಪೊಲೀಸರು, ಹಾಜಬ್ಬರ ಮೇಲೆಯೇ ದನಕಳುಗಳ ಅಕ್ರಮ ಸಾಗಾಟದವ ದೂರೊಂದನ್ನು ದಾಖಲಿಸಿಕೊಂಡಿದ್ದರು. ಹಾಜಬ್ಬ ಹಸನಬ್ಬರ ಮೇಲೆ ಹಲ್ಲೆ ನಡೆಸಿದವರೇ ಅವರ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನೂ ಸಲ್ಲಿಸಿದ್ದರು. ಹಾಜಬ್ಬ ಹಸನಬ್ಬರ ಬೆತ್ತಲೆ ಫೋಟೋ ತಾ. 14.3.05 ರ ವಿಜಯಕರಣ ಮತ್ತು ತಾ. 15.3.05 ರ ಕನ್ನಡ ಪ್ರಭ ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೆ, ಪೊಲೀಸರು, ಅವರು ಚಿಕಿತ್ಸೆ ಪಡೆಯುತ್ತಿದ್ದ ಉಡುಪಿ ಸರ್ಕಾರಿ ಆಸ್ಪತ್ರೆಗೆ ಹೋಗಿ, ಘಟನೆಯ ಬಗ್ಗೆ ಅವರಿಂದಲೇ ಮಾಹಿತಿ ಪಡೆದುಕೊಂಡು (ಅಥವಾ ಹಾಗೆ ನಟಿಸಿ) ಇನ್ನೊಂದು ದೂರನ್ನು ದಾಖಲಿಸಿಕೊಂಡರು.

ಈ ಬೆತ್ತಲೆ ಫೋಟೋ ತೆಗೆದ ಪತ್ರಕರ್ತ ಫೋಟೋಗ್ರಾಫರ್ ನ್ಯಾಯಾಲಯದ ಮುಂದೆ ನೀಡಿದ ಸಾಕ್ಷಿ ಪ್ರಕಾರವೇ ಅವರು ಈ ಫೋಟೋ ತೆಗೆದಾದ ಸ್ಥಳದಲ್ಲಿ ಪೊಲೀಸರು ಹಾಜರಿದ್ದರು! ಪತ್ರಿಕೆಗಳಲ್ಲಿ ಈ ಬೆತ್ತಲೆ ಫೋಟೋ ಪ್ರಕಟವಾಗಿ, ವಿಧಾನಸಭೆಯಲ್ಲೂ ಆ ಕುರಿತು ಗದ್ದಲವಾಗಿರದೆ ಹೋಗಿದ್ದರೆ, ಈ ಎರಡನೆಯ ದೂರು ಖಂಡಿತ ದಾಖಲಾಗುತ್ತಿರಲಿಲ್ಲ. ಇದು ಘಟನೆ ಜಗಜ್ಜಾಹೀರಾದ ಮೇಲೆ ಪೊಲೀಸರು ಕೇವಲ ಕಾಟಾಚಾರಕ್ಕೆ ದಾಖಲಿಸಿಕೊಂಡ ದೂರು. ಹಾಗಾಗಿ ನ್ಯಾಯಾಲಯದ ಮುಂದೆ ದೂರನ್ನು ಸಾಬೀತುಪಡಿಸಲು ಅಗತ್ಯವಾದ ಸಾಕ್ಷ್ಯಾಧಾರಗಳ ಸಂಗ್ರಹಿಸುವುದರಲ್ಲಿ ಉಡುಪಿಯ ಪೊಲೀಸರು ವಿಫಲರಾದರು ಎಂದು ಹೇಳುವುದು ತಪ್ಪಾಗುತ್ತದೆ. ಯಾಕೆಂದರೆ ವೈಫಲ್ಯವೇ ಅವರ ಉದ್ದೇಶವಾಗಿತ್ತು. ತಮ್ಮ ಆರೋಪ ಸಾಬೀತಾಗುವುದು ಸ್ವತಃ ಪೊಲೀಸರಿಗೇ ಬೇಕಿರಲಿಲ್ಲ.



ಪೊಲೀಸರು ಈ ಪ್ರಕರಣದಲ್ಲಿ ಆರೋಪಿಗಳು ಎಂದು ಹೆಸರಿಸಿದ 13 ಜನ, ನಿಜಕ್ಕೂ ಈ ಪ್ರಕರಣದಲ್ಲಿ ಪಾಲುಗೊಂಡಿದ್ದರೆ? ಹೌದಾದರೆ ಅದನ್ನ ಸಾಬೀತುಪಡಿಸಲು ಪೊಲೀಸು ಖಾತೆ ಮತ್ತು ಪ್ರಾಸಿಕ್ಯೂಷನ್ ಸಂಪೂರ್ಣವಾಗಿ ವಿಫಲವಾಗಿದೆ. ಈ 13 ಜನ ನಿರಪರಾಧಿಗಳಾಗಿದ್ದಲ್ಲಿ ಹಾಜಬ್ಬ ಹಸನಬ್ಬರ ಮೇಲೆ ಹಲ್ಲೆ ನಡೆಸಿದವರು ಯಾರು? ಯಾಕೆ ಅವರನ್ನು ಪತ್ತೆಹಚ್ಚಲು ಪೊಲೀಸರಿಗೆ ಸಾಧ್ಯವಾಗಲಿಲ್ಲ? ಹೆಚ್ಚುಕಡಿಮೆ ಒಂದು ಬಯಲು ನಾಟಕದಷ್ಟು ಡಾಣಾಡಂಗುರವಾಗಿ ನಡೆದ ಈ ಘಟನೆಯ ಅಪರಾಧಿಗಳನ್ನೇ ಹಿಡಿಯಲು ಪೊಲೀಸರಿಗೆ ಸಾಧ್ಯವಾಗದೆ ಹೋದರೆ, ಅವರು ಭೂಗತ ಕಾರ್ಯಾಚರಣೆ ನಡೆಸುವ ಪಾತಕಿಗಳನ್ನು ಮತ್ತು ಭಯೋತ್ಪಾದಕರನ್ನು ಸೆರೆಹಿಡಿಯಲು ಸಾಧ್ಯವಾ? ಈ ಪ್ರಶ್ನೆಗೆ ಉಡುಪಿಯ ಪೊಲೀಸರನ್ನು ಮಾತ್ರ ಉತ್ತರದಾಯಿಯನ್ನಾಗಿ ಮಾಡುವುದು ಸಾಧುವಲ್ಲ. ರಾಜ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಈ ಬಗ್ಗೆ ಹೊಣೆಗಾರಿಕೆಯಿಂದ ಯೋಚಿಸಬೇಕಾಗಿದೆ.

ಆಳುವ ಪಕ್ಷದ ಸಂಘಟನೆಗಳ ಹಿಡಿತದಿಂದ ಸ್ವತಂತ್ರರಾಗಿ ಈ ಪ್ರಕರಣವನ್ನು ಉಡುಪಿಯ ಪೊಲೀಸರೇ ನಿರ್ವಹಿಸುವಂತಾಗಿದ್ದರೆ ಇದು ಇಂತಹ ಒಂದು ವಿಕಟ ಪ್ರಹಸನವಾಗುತ್ತಿರಲಿಲ್ಲ. ಆದಿ ಉಡುಪಿ ಬೆತ್ತಲೆ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಕಾನೂನಿನ ಆಳ್ವಿಕೆಯನ್ನು ಮರೆತ ಸ್ವಾಮಿನಿಷ್ಠೆ ಜವಾಬ್ದಾರಿ ಸ್ಥಾನಗಳಲ್ಲಿ ಇರುವ ಎಲ್ಲರನ್ನೂ ದಾರಿ ತಪ್ಪಿಸಿದೆ. ಹಾಗಾಗಿ ಸರ್ಕಾರ, ಉಡುಪಿ ತ್ವರಿತ ನ್ಯಾಯಾಲಯದ ಈ ತೀರ್ಪಿನ ವಿರುದ್ಧ ಉಚ್ಚತಮ ನ್ಯಾಯಾಲಯದಲ್ಲಿ ಮೇಲು ಮನವಿ ಸಲ್ಲಿಸಲಿ ಎಂಬ ಬೇಡಿಕೆ ಕೂಡ ಒಂದು ವ್ಯರ್ಥ ಪ್ರಯತ್ನವಷ್ಟೇ ಆದೀತು.

ಕಂಬಾಲಪಲ್ಲಿ ಪ್ರಕರಣದಲ್ಲಿ ಏನು ನಡೆಯಿತು ಎಂದು ನೆನಪಿಸಿಕೊಳ್ಳಿ. ಪೊಲೀಸು ಇಲಾಖೆ ಮತ್ತು ಪ್ರಾಸಿಕ್ಯೂಷನ್‌ನವರು ಆ ಕೇಸನ್ನು ಸೋಲಲೆಂದೇ ನ್ಯಾಯಾಲಯದ ಮುಂದೆ ಅದರ ಪರವಾಗಿ ವಾದಿಸಿದರು. ದಸಂಸ ಮತ್ತಿತರ ಪ್ರಗತಿಪರ ಸಂಘಟನೆಗಳ ಒತ್ತಾಯ ದಿಂದಾಗಿ ಸರ್ಕಾರ ಆಗ ಆ ತೀರ್ಪಿನ ವಿರುದ್ಧ ಮೇಲು ಮನವಿ ಸಲ್ಲಿಸಿತು. ... ಉಚ್ಚತಮ ನ್ಯಾಯಾಲಯದಲ್ಲಿ ಈ ತೀರ್ಪಿನ ವಿರುದ್ಧ ಅಪೀಲು ... ಸಲ್ಲಿಸಿದೆ. ಆದರೆ ಈ ಪ್ರಕರಣದಲ್ಲಿ ... ಶಾಶ್ವತವಾಗಿ ನ್ಯಾಯವನ್ನು ನಿರಾಕರಿಸಲಾಗಿದೆ: ಈ ಅಪೀಲು, ಮೇಲ್ಮನವಿ ಮುಂತಾದವುಗಳಿಂದ ಏನೂ ಪ್ರಯೋಜನವಿಲ್ಲ ಎಂಬ ಅರಿವಿನಲ್ಲೇ ನಾವು ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ. ಉಡುಪಿಗೆ ಸದಾ ಕಳಂಕಪ್ರಾಯವಾಗಿರುವ ಈ ಘಟನೆಯ ಬಗ್ಗೆ ನಮ್ಮ ಸರ್ಕಾರ ಮತ್ತು ನ್ಯಾಯ ವ್ಯವಸ್ಥೆ ನಡೆದುಕೊಂಡ ರೀತಿಯನ್ನು ಪ್ರಜಾ ಸತ್ತಾತ್ಮಕವಾಗಿ ಪ್ರತಿಭಟಿಸಲು ನಮಗೆ ಏಕೈಕ ವಿಧಾನ ಇದು.

ಉಡುಪಿ ತ್ವರಿತ ನ್ಯಾಯಾಲಯದ ತೀರ್ಪು, ಇಂಡಿಯಾ ಪಾಕಿಸ್ತಾನಗಳ ನಡುವಿನ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ನಮ್ಮ ವಿಜಯವೋ ಎಂಬಂತೆ ಆಳುವ ಪಕ್ಷದ ಪರವಾಗಿರುವ ಕೆಲ ಸಂಘಟನೆಗಳು ವಿಜಯೋತ್ಸವ ಆಚರಿಸಿವೆ. ಆದರೆ ಇನ್ನೊಂದು ಸಮುದಾ ಯವನ್ನು ಈ ಪರಿ ಅವಮಾನಿಸಿ, ನ್ಯಾಯವನ್ನೂ ನಿರಾಕರಿಸುವುದನ್ನು ಆ ಸಮುದಾಯ ಹೇಗೆ ಸ್ವೀಕರಿಸಬೇಕು? ಮನುಷ್ಯ ಮಾತ್ರನಾದವನಿಗೆ ಸಲ್ಲಬೇಕಾದ ಗೌರವವನ್ನು ಹಾಜಬ್ಬ ಹಸನಬ್ಬರಿಗೆ ನಿರಾಕರಿಸಿ ನಾವು ನಮ್ಮ ಅಸ್ಮಿತೆಯನ್ನು ರಕ್ಷಿಸಿಕೊಳ್ಳುತ್ತೇವೆ ಎನ್ನುವುದು ಕೂಡ ಭ್ರಮೆಯಲ್ಲವೆ?

– ಜಿ.ರಾಜಶೇಖರ್

ಕೋರ್ಟ್‌ನಲ್ಲಿ ವಿಜಯೋತ್ಸವ

ತೀರ್ಪು ತಮ್ಮ ಪರವಾಗಿ ಬರುವುದು ಆರೋಪಿಗಳಿಗೆ ಮೊದಲೇ ತಿಳಿದಿತ್ತು. ಹಾಗಾಗಿ ಅವರೆಲ್ಲ ತೀರ್ಪು ಆಲಿಸಲು ಕೋರ್ಟಿಗೆ ಬರುವಾಗಲೇ ತಮ್ಮ ಜತೆಗೆ ಕೇಸರಿ ಬಾವುಟಗಳನ್ನು ತಂದಿದ್ದರು. ಸಾವಿರಾರು ರೂ. ಬೆಲೆಯ ಪಟಾಕಿಗಳನ್ನು ಖರೀದಿಸಿ ಇಟ್ಟುಕೊಂಡಿದ್ದರು. ಸುಮಾರು 50 ರಷ್ಟು ಜನರಿಗೆ ಮದ್ಯ ಕುಡಿಸಿ ಕರೆದುಕೊಂಡು ಬಂದಿದ್ದರು.

ತೀರ್ಪು ಆಲಿಸಲು ಕೋರ್ಟ್‌ಗೆ ಬಂದಿದ್ದ ನಾಡಿನ ಖ್ಯಾತ ಚಿಂತಕರಾದ ಜಿ. ರಾಜಶೇಖರ್ ಅವರು ಕೋಮುವಾದಿ ಭಯೋತ್ಪಾದಕರ ಕೆಂಗಣ್ಣಿಗೆ ಗುರಿಯಾದರು. ಮಾನವೀಯ ಮೌಲ್ಯದ ಅಪ್ಪಟ ಪ್ರತಿಪಾದಕ ರಾದ; ಯಾವತ್ತೂ ಜನರ ಪರ ವಾಗಿಯೇ ತುಡಿಯುವ, ಮಿಡಿಯುವ ಹಿರಿಯರಾದ ರಾಜ ಶೇಖರ್ ಅವರನ್ನು ಅವಮಾನಿ ಸಲು ಸಹ ಬೆತ್ತಲೆ ಪ್ರಕರಣದ ಆರೋಪಿಗಳು ಹಿಂಜರಿಯಲಿಲ್ಲ.



ರಾಜಶೇಖರ್‌ರವರ ಹಿಂದೆ ಮುಂದೆ ಸುಳಿದಾಡುತ್ತಾ, ಅವರ ಮೈ ಮುಟ್ಟುತ್ತಾ, ತಟ್ಟುತ್ತಾ ಅಶ್ಲೀಲ, ಅಸಹ್ಯ ಅಸಭ್ಯವಾಗಿ ನಡೆದುಕೊಳ್ಳುವ ಮೂಲಕ ತಮ್ಮ ಸಂಸ್ಕೃತಿ ಎಂತಹದು ಎನ್ನುವುದನ್ನು ಪ್ರದರ್ಶಿಸಿದರು ಬೆತ್ತಲೆ ವೀರರು.

"ಏ ರಾಜಶೇಖರ... ಬಾಂಬ್ ಬ್ಲಾಸ್ಟ್ ಆಗುವಲ್ಲಿಗೆ ಹೋಗಿ ನೀನ್ಯಾಕೆ ಧರಣಿ ಕುಳಿತುಕೊಳ್ಳುವುದಿಲ್ಲ?" ಎಂದು ಪದೇಪದೇ ಪ್ರಶ್ನಿಸಿದ ಕೋಮುವಾದಿ ಪುಂಡರು, ರಾಜಶೇಖರ್‌ರವರ ಪತ್ನಿಯ ಮೇಲೆಯೂ ಮಾತಿನ ದಾಳಿ ನಡೆಸಿ, ಮಾತೆಯರ ಬಗ್ಗೆ ನಿಜವಾಗಿಯೂ ತಮ್ಮ ಮನಸ್ಸಿನಲ್ಲಿ ಎಷ್ಟೊಂದು ಕೀಳು ಭಾವನೆ ಇದೆ ಎನ್ನುವುದನ್ನು ಹೊರಗೆಡಹಿದರು.

ಆರೋಪಿಗಳ ದುರ್ವರ್ತನೆ ಎಷ್ಟಿತ್ತೆಂದರೆ, ಆರೋಪಿಗಳ ಪೈಕಿ ಒಬ್ಬ ಪತ್ರಕರ್ತರೊಬ್ಬರ ಬಳಿ ಎಂದು "ನಿಮಗವರು ಏನಾಗಬೇಕು? ಅವರನ್ನು ಬೇಗ ಮನೆಗೆ ಕಳಿಸಿ, ಇಲ್ಲೇ ಇದ್ರೆ ಪರಿಸ್ಥಿತಿ ನೆಟ್ಟಗಿರದು" ಎಂದು ಬೆದರಿಕೆಯನ್ನೂ ಹಾಕಿದ.

ಈ ನಡುವೆ, ಪತ್ರಕರ್ತರೊಬ್ಬರು ನ್ಯಾಯಾಲಯದ ಆವರಣದಲ್ಲಿದ್ದ ಉಡುಪಿ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪ್ರಕಾಶ್ ಬಿ.ಎಸ್. ಅವರಲ್ಲಿ ಜಿ. ರಾಜಶೇಖರ್ ಅವರಿಗೆ ರಕ್ಷಣೆ ನೀಡುವಂತೆ ವಿನಂತಿಸಿಕೊಂಡರು. ಪತ್ರಕರ್ತರ ವಿನಂತಿಗೆ ಸಬ್‌ಇನ್ಸ್‌ಪೆಕ್ಟರ್‌ವರ ಪ್ರತಿಕ್ರಿಯೆ : "ಇರ್‍ಲಿ ಬಿಡಿ ಅವರು ಭಾರೀ ಹಾರಾಡ್ತಾ ಇರ್‍ತಾರೆ!"

ಅಕ್ರಮ ರ್‍ಯಾಲಿಗೆ ರಕ್ಷಣೆ

ತೀರ್ಪು ಹೊರಬೀಳುತ್ತಲೇ ನ್ಯಾಯಾಲಯದ ಎದುರು ಪಟಾಕಿ ಸಿಡಿಸಿ, ಘೋಷಣೆ ಕೂಗಿ ವಿಜಯೋತ್ಸವದ ಸಂಭ್ರಮಾಚರಣೆಯನ್ನು ಆರಂಭಿಸಿದರು ಫ್ಯಾಸಿಸ್ಟರು.

ಕೋರ್ಟ್ ಎದುರುಗಡೆಯಿಂದ ಹೊರಟ ಸಂಘ ಪರಿವಾರದ ಅಕ್ರಮ ಮೆರವಣಿಗೆ ಡಯಾನಾ ಸರ್ಕಲ್, ಚರ್ಚ್ ಮುಂಭಾಗದ ಕವಿ ಮುದ್ದಣ ಮಾರ್ಗವಾಗಿ ಸಾಗಿ ಸರ್ವೀಸ್ ಬಸ್ ನಿಲ್ದಾಣದ ಎದುರು ರಸ್ತೆಯ ನಡುವೆಯೇ ಬಹಿರಂಗ ಸಭೆಯೊಂದಿಗೆ ಮುಕ್ತಾಯವಾಯಿತು. ನಗರಸಭೆಯಿಂದಾಗಲಿ, ಪೊಲೀಸ್ ಠಾಣೆಯಿಂದಾಗಲಿ ಪರವಾನಗಿ ಪಡೆಯದೆ ಕಾನೂನುಬಾಹಿರವಾಗಿ ನಡೆದ ರ್‍ಯಾಲಿ ಮತ್ತು ಸಭೆಗೆ ನಗರ ಠಾಣೆಯ ಪಿಎಸ್‌ಐ ರಕ್ಷಣೆಯನ್ನು ನೀಡಿದರು.

ಸಾರ್ವಜನಿಕ ಸಭೆಯಲ್ಲಿ ಬೆತ್ತಲೆ ಮಾಡುವ ಪ್ರಕ್ರಿಯೆಗಳನ್ನು ಮುಂದಿನ ದಿನಗಳಲ್ಲಿ ಗಲ್ಲಿಗಲ್ಲಿಗಳಲ್ಲಿ ಮುಂದುವರಿಸುವುದಾಗಿ ಘೋಷಿಸಿದ ಕೋಮುವಾದಿ ಭಯೋತ್ಪಾದಕರು, ಜಿ. ರಾಜಶೇಖರ್ ಹಾಗೂ ಶ್ರೀರಾಮ ದಿವಾಣರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಬೆತ್ತಲೆ ಪ್ರಕರಣದ ತನಿಖೆ ನಡೆಸಿದ ಅಧಿಕಾರಿಗಳಿವರು

- ಪಿ.ಎಸ್. ಅಸಿಲ್, ಡಿವೈಎಸ್ಪಿ ವಿಶೇಷ ತನಿಖಾ ತಂಡ, ಸಿಓಡಿ ಬೆಂಗಳೂರು.
- ಪ್ರತಾಪ್‌ಸಿಂಗ್, ಡಿವೈಎಸ್ಪಿ ವಿಶೇಷ ತನಿಖಾ ತಂಡ, ಸಿಓಡಿ ಬೆಂಗಳೂರು
- ಕೆ.ವೆಂಕಟೇಶ್ ಶೆಟ್ಟಿ, ಇನ್ಸ್‌ಪೆಕ್ಟರ್, ವಿಶೇಷ ತನಿಖಾ ತಂಡ, ಸಿಓಡಿ, ಬೆಂಗಳೂರು.
- ಎಸ್ಪಿ ಧರಣೇಶ್, ಇನ್ಸ್‌ಪೆಕ್ಟರ್, ವಿಶೇಷ ತನಿಖಾ ತಂಡ, ಸಿಓಡಿ, ಬೆಂಗಳೂರು.
- ಎಂ.ಗಿರಿಜಾಪತಿ, ಡಿವೈಎಸ್ಪಿ, ಪಶ್ಚಿಮ ವಲಯ ಐಜಿಪಿ ಕಚೇರಿ, ಮಂಗಳೂರು
- ಪ್ರವೀಣ್ ಹೆಚ್. ನಾಯಕ್, ಸರ್ಕಲ್ ಇನ್ಸ್‌ಪೆಕ್ಟರ್, ಉಡುಪಿ ಸರ್ಕಲ್
- ಸಿ.ಡಿ.ನಾಗರಾಜ್, ಸಬ್‌ಇನ್ಸ್‌ಪೆಕ್ಟರ್, ಮಲ್ಪೆ ಪೊಲೀಸ್ ಠಾಣೆ
- ಹೆಚ್.ಎಸ್. ರೇಣುಕಾರಾಧ್ಯ, ಸಬ್‌ಇನ್ಸ್‌ಪೆಕ್ಟರ್, ಉಡುಪಿನಗರ, ಪೊಲೀಸ್‌ಠಾಣೆ
- ಗೋಪಾಲಕೃಷ್ಣರಾವ್, ಎಎಸ್‌ಐ, ಮಲ್ಪೆ
- ಭಾಸ್ಕರ್, ಎಎಸ್‌ಐ, ಮಲ್ಪೆ
- ಶಶಿ ಪೋಲಿಸ್, ಹೆಚ್‌ಸಿ ಮಲ್ಪೆ

ಉತ್ತರ ಸಿಗದ ಪ್ರಶ್ನೆಗಳು

- ಹಾಜಬ್ಬರು ರಾತ್ರಿ ಮಲ್ಪೆ ಪೊಲೀಸ್ ಠಾಣೆಗೆ ಬಂದಾಗ ಬೆತ್ತಲಾಗಿರಲಿಲ್ಲವಂತೆ ... ಪ್ರಕರಣ ನಡೆದಿಲ್ಲವಂತೆ. ಹಾಗಾದರೆ ಹಾಜಬ್ಬರದೆಂದು ಸಿಓಡಿ ... ಹಾಜರುಪಡಿಸಿದ ಗುಲಾಬಿ ಬಣ್ಣದ ಶರ್ಟ್ ಯಾರದು? ಬೆತ್ತಲಾಗಿದ್ದ ಹಾಜಬ್ಬರನ್ನು ... "ಗರುಡ" ವಾಹನಕ್ಕೆ ಹತ್ತಿಸಿದ ಗರುಡ ಪೊಲೀಸರು ಮಲ್ಪೆ ಠಾಣೆ ... ಮೊದಲು ಹಾಜಬ್ಬರಿಗೆ ಉಡಲು ಬಟ್ಟೆ ಕೊಟ್ಟಿರಬೇಕಲ್ಲ?
- ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿಯವರು ಹಸ್ತರ ದೇಹದಲ್ಲಾದ ಗಾಯಗಳ ಬಗ್ಗೆ ನೀಡಿದ ಪ್ರಮಾಣಪತ್ರ ಸಕಲಿಯೇ?
- ಬೆತ್ತಲೆ ಪ್ರಕರಣ ನಡೆದ ... ಯಾಕೆ?

ಯಾರ್‍ಯಾರು ಏನೇನು ಹೇಳಿದರು ನೋಡಿ.....

- ಆ ಸಮಯ ಅಲ್ಲಿದ್ದ ಅಂಗಡಿಯ ವಿಠಲರವರು "ಅಂಚ ಮಾಲ್ಪೊಡ್ಚಿ ಕುಂಟು ಬಿಚ್ಚಾದ್ ಬೆತ್ತಲೆ ಮಾಲ್ತ್‌ಂಡ ಎಲ್ಲೆ ಊರುಡು ಹಿಂದೂ-ಮುಸ್ಲಿಂ ಗಲಾಟೆ ಆವು" ಎಂದು ಸಮಾಧಾನಮಾಡಲು ಪ್ರಯತ್ನಿಸಿದರು. ಅದಕ್ಕೆ ಅವರು (ಯಶಪಾಲ್ ಹಾಗೂ ಇತರರು) "ಈ ವಿಚಾರೊಡು ಎಲ್ಲೆ ಊರೊಡು ಗಲಾಟೆ ಆವೊಡು, ಊರುಗು ಥೂ ಬೂರೊಡು, ಅವ್ವೇ ಎಂಕ್ಲೆನ ಉದ್ದೇಶ" (ಊರಿನಲ್ಲಿ ಗಲಾಟೆ ಆಗ್ಬೇಕು. ಊರಿಗೆ ಬೆಂಕಿ ಬೀಳಬೇಕು ಎಂಬುದೇ ನಮ್ಮ ಉದ್ದೇಶ) ಎಂಬುದಾಗಿ ಹೇಳುತ್ತಾ "ಜೈ ಭಜರಂಗದಳ", "ಜೈಹಿಂದೂ ಯುವಸೇನೆ" ಎಂದು ಘೋಷಣೆಯನ್ನು ಕೂಗುತ್ತಾ ನನ್ನನ್ನು ಮತ್ತು ನನ್ನ ತಂದೆಯವರನ್ನು ಬಲವಂತವಾಗಿ ಬಟ್ಟೆ ಕಿತ್ತು ಬೆತ್ತಲೆಗೊಳಿಸಿದರು

  -ಹಸನಬ್ಬ (29)

- ಮಾರ್ಚ್ 14, 2005ರಂದು ಬೆಳಗಿನ ಜಾವ ಮತ್ತೆ ಮಲ್ಪೆ ಕಡೆ ನಾನು ನನ್ನ ತಮ್ಮನ ಮಗ ಎ.ಕೆ.ಹಾಜಬ್ಬ ಮತ್ತು ಸಂಬಂಧಿಯಾದ ಅಬ್ದುಲ್ ರೆಹಮಾನ್‌ರವರುಗಳು ಕಾರಿನಲ್ಲಿ ಹುಡುಕಿಕೊಡು ಹೋಗುವಾಗ ಹೆಲಿಕಾಪ್ಟರ್ ಇಳಿಯುವ ಮೈದಾನದ ಎದುರುಗಡೆ ರಸ್ತೆಯಿಂದ ಒಂದು ಹಳೆ ಬಟ್ಟೆಯನ್ನು ತನ್ನ ಮರ್ಮಾಂಗಕ್ಕೆ ಮುಚ್ಚಿಕೊಂಡು ಬರುತ್ತಿದ್ದ, ಆಗ ಇನ್ನು ಪೂರ್ತಿ ಬೆಳಕಾಗಿರಲಿಲ್ಲ, ಅಲ್ಪಸ್ವಲ್ಪ ಕತ್ತಲಿದ್ದು ನಾವುಗಳು ಅವನನ್ನು ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದೆವು. ಅವನು ಹಿಂದಿನ ದಿನ ರಾತ್ರಿ ಊಟ ಮಾಡದೆ ಇದ್ದುದರಿಂದ ಆಹಾರ ಕೊಟ್ಟು ಬೇರೆ ಬಟ್ಟೆ ಹಾಕಿಸಿದೆವು

  -ಹಾಜಬ್ಬ (65)

- ಆ ಯುವಕರೆಲ್ಲಾ ಸೇರಿ ಆ ಇಬ್ಬರಿಗೆ ಥಳಿಸಿ ಬಟ್ಟೆಯನ್ನೆಲ್ಲ ಹರಿದು ಬೆತ್ತಲೆ ಮಾಡಿಬಿಟ್ಟಿದ್ದರು. ನಾನು ಅವರುಗಳ ಫೋಟೋಗಳನ್ನು ತೆಗೆದೆನು. ನಾನು ಕ್ಯಾಮರಾ ತೆಗೆಯುತ್ತಿದ್ದಂತೆಯೇ ಗಲಾಟೆ ಮಾಡುತ್ತಿದ್ದವರು ಪಕ್ಕಕ್ಕೆ ಸರಿದರು.

  -ಉಮೇಶ್ ಮಾರ್ಪಳ್ಳಿ (24), ಪತ್ರಿಕಾ ಛಾಯಾಗ್ರಾಹಕರು

- ನಾನು ಹಾಗೂ ಲತೀಫ್‌ರವರು ಅಲ್ಲಿಯೇ ಹುಡುಕಾಡಿ ಧೋತಿ ಮತ್ತು ಅಂಗಿಯನ್ನು ಕೊಟ್ಟೆವು. ಸ್ವಲ್ಪ ಹೊತ್ತಿನಲ್ಲಿಯೇ ಗರುಡ ವಾಹನ ಹಾಗೂ ಪೊಲೀಸರು ಸ್ಥಳಕ್ಕೆ ಬಂದಿದ್ದು ಪೊಲೀಸರು ಬಂದುದ್ದನ್ನು ಕಂಡು ಅಲ್ಲಿ ಸೇರಿದ್ದ ಜನರು ಚದುರಿಹೋದರು.

  -ವಿಠಲ ಪೂಜಾರಿ(38), ದಿನಸು ಅಂಗಡಿ ವ್ಯಾಪಾರಿ

- ಕಾಂತು ಪೂಜಾರಿ ಹಾಗೂ ಅವರ ಅಣ್ಣ ದೋಗ್ರ ಪೂಜಾರಿ ಎಂಬುವವರು ಕೂಡಾ ದನದ ವ್ಯಾಪಾರದ ದಲ್ಲಾಳಿ ಕೆಲಸವನ್ನು ಮಾಡುತ್ತಿದ್ದಾರೆ. ನಾವಿಬ್ಬರೂ ಕರುವನ್ನು ... ಎಂದು ಮಾತನಾಡಿಕೊಂಡೆವು. 13ರಂದು ಕರುವನ್ನು ಕಾಂತು ಪೂಜಾರಿ ... ಹಾಜಬ್ಬರಿಗೆ ಬಂದಾಗ ಕ್ರಯದ ಬಗ್ಗೆ ಚೌಕಾಸಿ ... 2500, ...

  ... ಯಾನೆ ಬೋಗ್ರು ಶೆಟ್ಟಿ (50), ದನದ ವ್ಯಾಪಾರಿ

ಬೆಳಗಾವಿ: ತು(ಡ)ಗಶೆಟ್ಟಿಯ ಕರ್ಮಕಾಂಡ!



ಇವನ ಹೆಸರು ತುಡಗಶೆಟ್ಟಿ. ಕ್ಷಮಿಸಿ ಶ್ರೀಶೈಲ್ ತುಗಶೆಟ್ಟಿ. ಬೆಳಗಾವಿಯ ಜಿಲ್ಲಾ ಪಂಚಾಯ್ತಿ ಸದಸ್ಯ ಎಂಬ ಬೋರ್ಡ್‌ನ್ನ ಕೊರಳಿಗೆ ತಗಲು ಹಾಕಿಕೊಂಡು ಕೆಟ್ಟ ಹಲಕಾ ದಂಧೆಗಳಲ್ಲಿ ನಿರತನಾಗಿದ್ದಾನೆ. ಇನ್ನೊಂದು ದುರಂತ ಎಂದರೆ ಈತನ ಈ ಎಲ್ಲ ಪುಣ್ಯ ಕಾಯಕಗಳಿಗೆ ಬೆಂಬಲವಾಗಿ ನಿಂತಿರುವವನು ಎಂ.ಎಲ್.ಸಿ. ವೀರಕುಮಾರ ಪಾಟೀಲ!

ಮೂಲತಃ ಅಥಣಿ ತಾಲೂಕಿನ ಮೋಳೆ ಗ್ರಾಮದವನಾದರೂ ಮಹಾರಾಷ್ಟ್ರದ ಸಾಂಗ್ಲಿ ತನ್ನ ಮೂಲ ಸ್ಥಳ ಎಂಬ ಇನ್ನೊಂದು ದಾಖಲೆಯನ್ನೂ ಈತ ಇಟ್ಟುಕೊಂಡಿದ್ದಾನೆ. ಅಂದರೆ ಈತ ಒಂದೇ ಸಮಯಕ್ಕೆ ಮೋಳೆ ಹಾಗೂ ಸಾಂಗ್ಲಿಯಲ್ಲಿ ಹುಟ್ಟಿದನಾ ಎಂಬುದನ್ನು ಅವನೇ ವಿವರಿಸಬೇಕಷ್ಟೆ.

ತುಡಗಶೆಟ್ಟಿಯ ಕಚ್ಚೆಪುರಾಣ!

ತುಗಶೆಟ್ಟಿಯ ಕಚ್ಚೆಪುರಾಣವನ್ನು ಕೆದಕುತ್ತಾ ಹೋದರೆ ಅದೇ ಒಂದು ಉದ್ಗ್ರಂಥವಾದೀತು. ಈತನ ಕಾಮಪಾಶತನ ಎಷ್ಟರಮಟ್ಟಿಗಿದೆಯೆಂದರೆ ಇತ್ತೀಚೆಗೆ ಕೆಲ ಮಹಿಳಾ ಶಿಕ್ಷಕಿಯರನ್ನು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಸಂದಿಗ್ಧ ಪರಿಸ್ಥಿತಿಗೆ ದೂಡಿದ್ದ ಈತ ಜಿಲ್ಲಾ ಪಂಚಾಯ್ತಿಯ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿದ್ದಾಗ ಮಾಡಿದ ಕಚ್ಚೆಹರುಕ ದಂಧೆಗಳಿಗೆ ಲೆಕ್ಕವಿಲ್ಲ. ಯಾವ ಯಾವ ಶಾಲೆಯಲ್ಲಿ ಸುಂದರ ಶಿಕ್ಷಕಿಯರಿದ್ದಾರೆ ಎಂಬುದನ್ನು ನೋಡಿಕೊಂಡು ಯಾವುದಾದರೂ ನೆಪವೊಡ್ಡಿ ಅಲ್ಲಿಗೆ ಹೋಗುವುದು, ಅವರ ಫೋನ್ ನಂಬರ್, ಅಡ್ರೆಸ್ ಪಡೆದುಕೊಳ್ಳುವುದು, ನಿಧಾನಕ್ಕೆ ಅವರನ್ನು ಬುಟ್ಟಿಗೆ ಹಾಕಿಕೊಂಡು 'ಯೂಸ್ ಅಂಡ್ ಥ್ರೋ' ಮಾಡುವುದು ಇವನ ಹಳೆಯ ಖಯಾಲಿ. ಒಂದು ವೇಳೆ ಈತನಿಗೆ ಯಾವುದಾದರೂ ಶಿಕ್ಷಕಿ ಸೊಪ್ಪುಹಾಕದಿದ್ದರೆ ಅವರನ್ನು ವರ್ಗಾವಣೆ ಮಾಡಿಸುವುದಾಗಿ, ಅಮಾನತು ಮಾಡಿಸುವುದಾಗಿ ಬೆದರಿಕೆ ಒಡ್ಡುತ್ತಾನೆ. ಇದೇರೀತಿ ಸ್ಥಾಯಿ ಸಮಿತಿ ಅಧ್ಯಕ್ಷನಾಗಿದ್ದಾಗ ಅದೆಷ್ಟೋ ವೈದ್ಯೆಯರನ್ನು ಸಹ ತುಂಬಾ ಕಾಡಿದ್ದಾನೆ.

ಈತನ ಕಾಮಪಾಶಕ್ಕೆ ಬಲಿಯಾದ ಅದೆಷ್ಟೊ ಹೆಂಗಳೆಯರು ಮಾನಮರ್ಯಾದೆಗಂಜಿ ಬಾಯ್ಮುಚ್ಚಿಕೊಂಡಿದ್ದರು. ಈಗ ಅವನ ಒಂದೊಂದೇ ಹಗರಣಗಳು ಬಯಲಿಗೆ ಬರುತ್ತಿದ್ದಂತೆ ಈ ಬಲಿಪಶುಗಳೂ ಕೂಡ ನಿಧಾನವಾಗಿ ಬಾಯ್ಬಿಡುತ್ತಿದ್ದಾರೆ. ಇದೆಲ್ಲಾ ಗೊತ್ತಿದ್ದರೂ ಸಹ ಎಸ್ಪಿಯಾದ ಸೋನಿಯಾ ನಾರಂಗ ಕಂಡೂ ಕಾಣದಂತೆ ಬಾಯ್ಮುಚ್ಚಿಕೊಂಡು ಕುಳಿತಿದ್ದಾರೆ. ಅವರೂ ಒಬ್ಬ ಮಹಿಳೆ ಎಂಬ ಕಾರಣಕ್ಕಾದರೂ ಅವರ ಹೃದಯ ಕಲಕಬೇಕಿತ್ತು. ಸೋನಿಯಾ ನಾರಂಗ್ ಅವರ ಮೌನಕ್ಕೆ ಅವರ ನಿರ್ಲಕ್ಷ್ಯ ಮಾತ್ರ ಕಾರಣವಾ ಅಥವಾ ತುಡಗಶೆಟ್ಟಿಯ ಪ್ರಸಾದದ ಫಲಿತಾಂಶವಾ ಅನ್ನೋದು ಹೊರಬರಬೇಕಷ್ಟೆ.

ನಂಬರ್ ಒನ್ ಗೂಂಡಾ!

ಸದ್ಯಕ್ಕೆ ತುಗಶೆಟ್ಟಿ ಪ್ರೊಫೆಷನಲ್ ಗೂಂಡಾ ಥರ ಬೆಳೆದಿಲ್ಲ. ಆದರೆ, ಆ ನಿಟ್ಟಿನಲ್ಲಿ ವೇಗವಾಗಿ ಸಾಗುತ್ತಿದ್ದಾನೆ. ಬೆಳಗಾವಿಯಲ್ಲಿ ಪ್ರವೀಣ್ ಶಿಂತ್ರೆ ಎಂಬ ನಟೋರಿಯಸ್ ಸುಫಾರಿ ಕಿಲ್ಲರ್ ಎನ್‌ಕೌಂಟರ್‌ನಲ್ಲಿ ಸತ್ತಮೇಲೆ ಆ ಸ್ಥಾನಕ್ಕೆ ಭೂಗತ ಜಗತ್ತಿನಲ್ಲಿ ಸಣ್ಣದೊಂದು ಪೈಪೋಟಿ ನಡೆದಿದೆ. ಅದರಲ್ಲಿ ಇವನೂ ಕೂಡ ಇರಬಹುದು ಎಂಬ ಅನುಮಾನ ಜನರಲ್ಲಿ ಇದ್ದೇ ಇದೆ.

ಟಿಳಕವಾಡಿಯ ಕವಿತಾ ಮಾವರಕರ ಎಂಬ ಮಹಿಳೆಗೆ ಪಕ್ಕದ ಮನೆಯವರು ಏನಿಲ್ಲದ ಕಿರುಕುಳ ಕೊಡುತ್ತಿದ್ದರು. ಈ ಭೂಪರು ಈ ತುಗಶೆಟ್ಟಿಗೆ ತುಂಬಾ ಹತ್ತಿರದವರಂತೆ. ಅದಕ್ಕಾಗಿಯೇ ಆ ಮಹಿಳೆಯ ಮನೆಗೆ ನುಗ್ಗಿದ ಈ ತುಗಶೆಟ್ಟಿ ಅವಳನ್ನು ಕೊಲೆ ಮಾಡುವ ಬೆದರಿಕೆ ಹಾಕಿ ಬಂದಿದ್ದಾನೆ. ಈ ಬಗ್ಗೆ ಮಾವರಕರ ಅವರು ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದರಾದರೂ ಫಲಿತಾಂಶ ಮಾತ್ರ ಶೂನ್ಯ. ತುಗಶೆಟ್ಟಿಯನ್ನು ವಿಚಾರಣೆ ಮಾಡುವುದಿರಲಿ. ಬರೆದಿಟ್ಟ ಎಫ್‌ಐಆರ್ ಅನ್ನು ತೆಗೆದುನೋಡುವ ಗೋಜಿಗೂ ಟಿಳಕವಾಡಿ ಪೊಲೀಸರು ಹೋಗಲಿಲ್ಲ. ಪೊಲೀಸರು ಈ ತುಗಶೆಟ್ಟಿಯ ಎಂಜಲು ತಿಂದಿದ್ದಕ್ಕೆ ಹಾಗೆ ವರ್ತಿಸುತ್ತಿದ್ದಾರಾ ಅಥವ ಅವನ ಗೂಂಡಾಗಿರಿಗೆ ಹೆದರಿದ್ದಾರಾ? ಗೊತ್ತಿಲ್ಲ. ಅಂತೂ ತುಗಶೆಟ್ಟಿಯ ಬಾಡಿಗಾರ್ಡ್‌ಗಳಂತೆ ವರ್ತಿಸುತ್ತಿರುವುದಂತೂ ಸತ್ಯ. ಈ ಮಾವರಕರ ಅವರು ಈಗ ಜಿಲ್ಲಾ ಪೊಲೀಸ್ ಇಲಾಖೆಯ. ಮಹಿಳಾ ಕುಂದುಕೊರತೆ ವಿಭಾಗದ ಮೊರೆ ಹೋಗಿದ್ದಾರೆ.

ಮೂಲತಃ ಅಥಣಿ ತಾಲೂಕಿನ ಮೋಳೆ ಗ್ರಾಮದವನಾದರೂ ಮಹಾರಾಷ್ಟ್ರದ ಸಾಂಗ್ಲಿಯ ರಹವಾಸಿ ಎಂಬ ದಾಖಲೆಯನ್ನೂ ಸಹ ಇಟ್ಟುಕೊಂಡಿದ್ದಾನೆ. ಈತ ಸಾಂಗ್ಲಿಯಲ್ಲಿರುವ ಆಟೋವೊಂದರ ನೋಂದಣಿ ಸಂಖ್ಯೆಯನ್ನೇ ತನ್ನ ವಾಹನಕ್ಕೂ ಫೋರ್ಜರಿ ಮಾಡಿಕೊಂಡು ಬಳಸಿಕೊಂಡಿದ್ದಾನೆ. ಇದರ ಬಗ್ಗೆ ಮಾಧ್ಯಮಗಳು ವರದಿ ಮಾಡಿದಾಗ ಎಚ್ಚೆತ್ತುಕೊಂಡ ಮಾರ್ಕೆಟ್ ಪೊಲೀಸರು ಕೇವಲ ವಾಹನವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆಯೇ ವಿನಃ ಈ ವಾಹನವನ್ನು ಎಲ್ಲಿಂದ ಕದ್ದುಕೊಂಡುಬಂದಿದ್ದಾನೆ ಎಂಬುದನ್ನು ವಿಚಾರಿಸುವ ಗೊಡವೆಗೆ ಹೋಗಿಲ್ಲ.

ಇಂತಿಪ್ಪ ತುಗಶೆಟ್ಟಿ ಪುರಾಣ ಇಷ್ಟಕ್ಕೆ ಅಂತ್ಯವಾಗದು. ಮೂವರು ಹೆಂಡಿರ ಮುದ್ದಿನ ಗಂಡನಾಗಿರುವ ಈತ ಆಸ್ತಿಗಾಗಿ ಅತ್ತೆ ಮಗಳನ್ನು, ಮಜಾ ಮಾಡಲು ಬೆಂಗಳೂರಿನ ಬೆಡಗಿಯೊಬ್ಬಳನ್ನು ಹಾಗೂ ಇನ್ನೊಂದೆಡೆ ಹೊಟ್ಟೆ ಬರಿಸಿ ಮತ್ತೊಬ್ಬಳನ್ನು ಹೀಗೆ ಮೂವರಿಗೆ ತಲಾ ಮೂರು ಮೂರು ಗಂಟು ಹಾಕಿದ್ದಾನೆ. ಇದಲ್ಲದೇ, ಈತನ ಕೃಷ್ಣಲೀಲೆಯ ಗೋಪಿಕೆಯರಿಗಂತೂ ಲೆಕ್ಕವೇ ಇಲ್ಲ ಬಿಡಿ.

ಒಬ್ಬ ಜನಪ್ರತಿನಿಧಿಯಾಗಿರುವ ಈತನಿಗೆ ತನ್ನೂರಿನಲ್ಲೇ ಒಳ್ಳೆಯ ಹೆಸರಿಲ್ಲ, ಇನ್ನು ಕ್ಷೇತ್ರದ ಉದ್ಧಾರ ಮಾಡುವುದು ದೂರವೇ ಉಳಿಯುತ್ತದೆ. ಈ ಹಿಂದೆ ಈತ ತನ್ನ ಮನೆ ಪಕ್ಕದ ದಾಬಾವೊಂದಕ್ಕೆ ನುಗ್ಗಿ, ಕ್ಯಾತೆ ತೆಗೆದು ಅಲ್ಲಿನ ಹುಡುಗರನ್ನು ಹಿಗ್ಗಾಮುಗ್ಗಾ ಥಳಿಸಿದ್ದ. ಆದರೆ ಈ ಕೇಸು ಕಾಗವಾಡ ಪೊಲೀಸ್ ಠಾಣೆಯಲ್ಲಿ ಮಕಾಡೆ ಮಲಗಿದೆ. ಈತ ಮೋಳೆ ಗ್ರಾ.ಪಂ. ಅಧ್ಯಕ್ಷನಾಗಿದ್ದಾಗ ಇಡೀ ಪಂಚಾಯ್ತಿಯನ್ನೇ ಗುಡಿಸಿ ಗುಂಡಾರ ಮಾಡಿದ್ದ. ಶೌಚಾಲಯಕ್ಕಾಗಿ ಹಲವಾರು ಜನರ ಹೆಸರಿನಲ್ಲಿ ತಾನೇ ಹಣ ಪಡೆದು ನುಂಗಿಹಾಕಿದ್ದಾನೆ.. ಹೇಳುತ್ತಾಹೋದರೆ ಇವನ ವಂಚನೆಗಳ ಪಟ್ಟಿ ಮುಗಿಯುವುದೇ ಇಲ್ಲ.

ತುಗಶೆಟ್ಟಿ ಈಗ ಮತ್ತೊಂದು ಕ್ಯಾತೆ ತೆಗೆದು ಸುದ್ದಿ ಮಾಡುತ್ತಿದ್ದಾನೆ. ಬಿಎಸ್‌ಎನ್‌ಎಲ್‌ನವರು ಮೋಳೆಯಲ್ಲಿ ಟವರ್ ನಿರ್ಮಿಸಲು ಗ್ರಾ.ಪಂ. ಅನುಮತಿ ಪಡೆದಿದ್ದಾರೆ. ಆದರೆ ತಾನೂ ಜಿ.ಪಂ. ಸದಸ್ಯ ಮುಂದೆ ಅಧ್ಯಕ್ಷನೂ ಆಗುವವನಿದ್ದೇನೆ, ತನ್ನ ಅನುಮತಿಯಿಲ್ಲದೇ ಇಲ್ಲಿ ಟವರ್ ಹಾಕುವಂತಿಲ್ಲ ಎಂದು ಬಿಎಸ್‌ಎನ್‌ಎಲ್ ಅಧಿಕಾರಿಗಳಿಗೆ ಧಮಕಿ ಹಾಕಿದ್ದಾನೆ. ಈ ಧಮಕಿಯ ಹಿಂದೆ ತನ್ನನ್ನು ಕೇಳಲಿಲ್ಲವಲ್ಲ ಎಂಬ ಜಂಭ ಮಾತ್ರವಲ್ಲ ತನಗೆ ಹೊಟ್ಟೆ ತುಂಬ ದುಡ್ಡು ತಿನಿಸಲಿಲ್ಲವೆಂಬ ಹೊಟ್ಟೆಉರಿ ಕೂಡ ಇದೆ. ಈ ಕುರಿತು ಬಿಎಸ್‌ಎನ್‌ಎಲ್ ಅಧಿಕಾರಿಗಳು ಕಾಗವಾಡ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ. ಆದರೆ ಇಲ್ಲಿರುವ ಪಿಎಸ್‌ಐ ಈತನ ಎಂಜಲು ತಿಂದೇ ಬದುಕುವವ. ಇನ್ನೇನು ಕ್ರಮಕೈಗೊಳ್ಳುತ್ತಾನೆ?

ಎಂಎಲ್‌ಸಿ ವೀರಕುಮಾರ ಪಾಟೀಲನನ್ನು ಬೆನ್ನಿಗಿಟ್ಟುಕೊಂಡು ಇಂಥ ಪುಣ್ಯ ಕಾರ್ಯಗಳಲ್ಲಿ ತೊಡಗಿರುವ ಈತ ಈಗ ಜಿ.ಪಂ. ಅಧ್ಯಕ್ಷನಾಗಲು ಹೊರಟಿದ್ದಾನೆ. ಅದಕ್ಕಾಗಿಯೇ ಅಧ್ಯಕ್ಷನಾಗಿರುವ ನಜೀರ ನದಾಫ್ ಅವರನ್ನು ಕೆಳಗಿಳಿಸಲು ಹಲವಾರು ತಂತ್ರಗಳನ್ನು ರೂಪಿಸುತ್ತಿದ್ದಾನೆ. ಊರು ಹಾಳುಮಾಡಿದ್ದಾಯಿತು. ಈಗ ಇಡೀ ಜಿಲ್ಲೆಗೆ ಅಮರಿಕೊಳ್ಳುವವನಿದ್ದಾನೆ. ಬೆಳಗಾವಿಯನ್ನು ಆ ಭಗವಂತನೇ ಕಾಪಾಡಬೇಕು. ಇಲ್ಲ ಜನ ಕೆರ ಹಿಡಿದುಕೊಂಡು ಮೇಲೇಳಬೇಕು.

■ ಮಧುಬಾಲಾ

ಹುಬ್ಬಳ್ಳಿ: ಆಹಾರ ಇಲಾಖೆಯ ಹೆಗ್ಗಣಗಳು!

ಹುಬ್ಬಳ್ಳಿಯ ಆಹಾರ ಇಲಾಖೆಯು ಹೆಗ್ಗಣಗಳ ಗೂಡಾಗಿ ಹೋಗಿದೆ. ಬಡಬಗ್ಗರಿಗೆ ಸಲ್ಲಬೇಕಿದ್ದ ಆಹಾರ ಧಾನ್ಯಗಳನ್ನು ಇಲಾಖೆಯಲ್ಲಿ ತುಂಬಿಕೊಂಡಿರುವ ಹೆಗ್ಗಣಗಳೇ ಮೇಯುತ್ತಿವೆ. ಬಡವರು ಬಡಕಲಾಗುತ್ತಿದ್ದರೆ ಈ ಹೆಗ್ಗಣಗಳು ಕೊಬ್ಬುತ್ತಿವೆ.

ಹುಬ್ಬಳ್ಳಿಯೊಂದರಲ್ಲೇ ಬಿಪಿಎಲ್ ಕಾರ್ಡುಗಳನ್ನು ಹೊಂದಿರುವವರ ಸಂಖ್ಯೆ ಸುಮಾರು 36 ಸಾವಿರಕ್ಕೂ ಹೆಚ್ಚು. ಸರ್ವೇ ಮಾಡಿದ ಅನೇಕ ಅರ್ಹರಿಗೆ ಇನ್ನೂ ಕಾರ್ಡುಗಳು ಸಿಕ್ಕಿಲ್ಲ. ಅವೂ ಸೇರಿದರೆ ಈ ಸಂಖ್ಯೆ 55 ಸಾವಿರ ದಾಟುತ್ತದೆ. ಆಹಾರ ಇಲಾಖೆಯಲ್ಲಿ ಮುತಾಲಿಕ ದೇಸಾಯಿ, ಅಕ್ಕಿ, ಮಠದ ಹಾಗೂ ಪಾಟೀಲ್ ಎಂಬ ನಾಲ್ಕು ಹೆಗ್ಗಣಗಳು ಫುಡ್ ಇನ್ಸ್‌ಪೆಕ್ಟರ್ ಎಂಬ ಬೋರ್ಡು ತಗುಲಿ ಹಾಕಿಕೊಂಡು ಪುಷ್ಕಳವಾಗಿ ಮೇಯುತ್ತಿವೆ. ಅದರಲ್ಲೂ ಅಕ್ಕಿ ಮತ್ತು ಪಾಟೀಲ ಎಂಬ ಹೆಗ್ಗಣಗಳಂತೂ ಮಹಾ ಹರಾಮಿ. ಈ ಹೆಗ್ಗಣಗಳಿಗಿಂತ ಮೊದಲು ಇಲ್ಲಿ ನಾಗರಾಜ ಬನವಾಸಿ ಎಂಬ ಫುಡ್ ಇನ್ಸ್‌ಪೆಕ್ಟರ್ ಲೇವಾದೇವಿ ಮಾಡುತ್ತಾ ಇಡೀ ಇಲಾಖೆಯನ್ನೇ ಕಂಟ್ರೋಲ್ ಮಾಡುತ್ತಿದ್ದ. ಈ ಎಲ್ಲಾ ಹೆಗ್ಗಣಗಳು ಕಳೆದ ಹತ್ತು ವರ್ಷಗಳಿಂದ ಆಹಾರ ಇಲಾಖೆಯೆಂಬ ಈ ಗೋಡೋನ್‌ನಲ್ಲಿ ವ್ಯವಸ್ಥಿತವಾಗಿ ಮೇಯುತ್ತಿವೆ ಎಂದರೆ ಇಲಾಖೆಯ ಗತಿ, ಬಡಬಗ್ಗರ ಗತಿ ಏನಾಗಿಬೇಡ?



ಹಾಲಹರವಿ

ಹೆಸರಿಗೆ ಮಾತ್ರ ನಿರ್ದೇಶಕಿಯಾಗಿರುವ ಟಿ.ಎಂ.ಅನ್ನಪೂರ್ಣಮ್ಮ ಎಲ್ಲರಿಗೂ ಸಲ್ಲುವಾಕೆ. ಇನ್ನೊಂದರ್ಥದಲ್ಲಿ ಹೇಳಬೇಕೆಂದರೆ ಮೂರು ಬಿಟ್ಟು ಕುಳಿತಿರುವ ಅಕ್ಕಿ ಮತ್ತು ಪಾಟೀಲ್ ಎಂಬ ಹೆಗ್ಗಣಗಳು ಪುಷ್ಕಳವಾಗಿ ಮೇಯುವುದಕ್ಕೆ ಅವಕಾಶ ಮಾಡಿಕೊಟ್ಟಿರುವ ಅನ್ನದಾತೆ. ಈ ಇಬ್ಬರು ಮಹಾಶಯರು ಹುಬ್ಬಳ್ಳಿಯ 170 ನ್ಯಾಯಬೆಲೆ ಅಂಗಡಿಗಳಿಂದ ತಲಾ ಎರಡೆರಡು ಸಾವಿರದಂತೆ ಮಂತ್ಲಿ ಎರಡು ಲಕ್ಷ ವಸೂಲಿ ಮಾಡಿ ತಿನ್ನುತ್ತಿದ್ದರೂ ನೋಡಿಕೊಂಡು ಬಾಯಿಗೆ ಬೀಗ ಹಾಕಿಕೊಂಡಿರುವ ಮೌನ-ಮಹಾತ್ಮೆ.

ಪ್ರತಿಯೊಬ್ಬ ಬಿಪಿಎಲ್ ಕಾರ್ಡುದಾರರಿಗೆ 20 ಕೆ.ಜಿ. ಅಕ್ಕಿ ಕೊಡಬೇಕೆಂದು ಸರ್ಕಾರವೇ ಹೇಳಿದೆ. ಅಂದರೆ 7,20,00 ಕೆ.ಜಿ. ಅಕ್ಕಿ ವಿತರಣೆಯಾಗಬೇಕು. ಇದನ್ನು ಆಗು ಮಾಡುವುದಕ್ಕಾಗಿಯೇ 170 ನ್ಯಾಯಬೆಲೆ ಅಂಗಡಿಗಳಿಗೆ ಅನುಮತಿ ನೀಡಿದೆ. ಆದರೆ ಅದೆಲ್ಲಾ ಕಾಗದದಲ್ಲಿ ಮಾತ್ರ. ಹುಬ್ಬಳ್ಳಿಯ ನ್ಯಾಯಬೆಲೆ ಅಂಗಡಿಗಳು ಆಹಾರ ಇಲಾಖೆಯಲ್ಲಿರುವ ಹೆಗ್ಗಣಗಳ ಬೆಂಬಲದಿಂದ ತಮ್ಮದೇ ಆದ ನಿಯಮವನ್ನು ರೂಪಿಸಿಕೊಂಡಿವೆ. ಒಬ್ಬರಿಗೆ ನಾಲ್ಕು ಕೆ.ಜಿ. ಅಕ್ಕಿ ಕೊಡುತ್ತೇವೆ, ಹೆಚ್ಚು ಜನ ಇದ್ದರೆ 20 ಕೆ.ಜಿ. ಕೊಡುತ್ತೇವೆ ಎಂದು ಅಲಿಖಿತ ನಿಯಮವನ್ನು ಮಾಡಿಕೊಂಡಿದ್ದಾರೆ. ಇದರರ್ಥ ಸ್ಪಷ್ಟ: ಏನಿಲ್ಲವೆಂದರೂ ಪ್ರತೀ ಕಾರ್ಡಿಗೆ ಸಲ್ಲಬೇಕಿದ್ದ ಧಾನ್ಯದಲ್ಲಿ ಅರ್ಧದಷ್ಟು ಕಾಳಸಂತೆಯ ಗೋಡನ್‌ಗೆ ಸೇರುತ್ತದೆ!

ನ್ಯಾಯಬೆಲೆ ಅಂಗಡಿಗಳ ದವಸವನ್ನು ಕಾಳಸಂತೆಯಲ್ಲಿ ಮಾರುವುದಕ್ಕಾಗಿಯೇ ಹುಬ್ಬಳ್ಳಿಯಲ್ಲಿ ವ್ಯವಸ್ಥಿತ ಜಾಲವೊಂದು ನಿರ್ಮಾಣಗೊಂಡಿದೆ. ಆಹಾರ ಇಲಾಖೆಯಲ್ಲಿರುವ ಹೆಗ್ಗಣಗಳ ಸಹಾಯದಿಂದ ಈ ಅಕ್ಕಿಯನ್ನು ಇಜಾರಿ ಮತ್ತು ಸೋಳಂಕಿ ಎಂಬ ಖದೀಮರು ಪ್ರತೀ ಕ್ವಿಂಟಾಲ್‌ಗೆ 600 ರೂ.ಗಳಂತೆ ಖರೀದಿಸುತ್ತಾರೆ. ಅದನ್ನವರು ರಮೇಶ ಭಾಪಣ ಎಂಬ ಮಾರ್ವಾಡಿಗೆ ಪ್ರತೀ ಕ್ವಿಂಟಾಲ್ ಒಂದಕ್ಕೆ 1000 ರೂ.ಗಳಂತೆ ಮಾರಿಕೊಳ್ಳುತ್ತಾರೆ. ಈ ಮಾರ್ವಾಡಿ ಅಕ್ಕಿಯನ್ನು ಮತ್ತೆ ಪಾಲಿಶ್ ಮಾಡಿ ದೊಡ್ಡ ದೊಡ್ಡ ಅಕ್ಕಿ ಮಿಲ್ಲುಗಳ ಚೀಲಗಳ ನಡುವೆ ತೂರಿಸಿ ಪ್ರತಿ ಕೆ.ಜಿಗೆ ಕನಿಷ್ಠವೆಂದರೂ 20 ರೂ.ಗಳಂತೆ ಮಾರಿಕೊಳ್ಳುತ್ತಾನೆ. ಬಡಬಗ್ಗರ ಹೊಟ್ಟೆ ತುಂಬಬೇಕಿದ್ದ ಈ ಅಕ್ಕಿ ಹೀಗೆ ಕಾಳಸಂತೆಕೋರರ ತಿಜೋರಿ ತುಂಬುತ್ತಿದೆ!




ಅನ್ನಪೂರ್ಣಮ್ಮ

ಈ ಹಿಂದೆ ಗಗನ್‌ದೀಪ್ ಅವರು ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಪೊಲೀಸ್ ಕಮೀಷನರ್ ಆಗಿದ್ದಾಗ ಮಾರ್ವಾಡಿ ಗೋಡೋನ್‌ಗಳ ಮೇಲೆ ದಾಳಿ ಮಾಡಿ ನ್ಯಾಯಬೆಲೆ ಅಂಗಡಿಗಳ ಅಕ್ರಮ ದಾಸ್ತಾನುಗಳನ್ನು ಸೀಜ್ ಮಾಡಿದ್ದರು. ಆಗ ಇದೇ ರಮೇಶ್ ಭಾಪಣಾ ಎಂಬ ಅಕ್ಕಿ ಕಳ್ಳ ದೊಡ್ಡದಾಗಿ ಪ್ರತಿಭಟನೆ ಮಾಡಿದ್ದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಹುಬ್ಬಳ್ಳಿ ಶಹರವನ್ನು ಐದು ವಿಭಾಗಗಳಾಗಿ ವಿಂಗಡಿಸಲಾಗಿದೆ: ಹೊಸೂರ್‌ನಿಂದ ನವನಗರದವರೆಗಿನ ಪ್ರದೇಶ ಮೊದಲನೇ ವಲಯ, ಕ್ಲಬ್ ರೋಡ್‌ನಿಂದ ಕುಸುಗಲ್ಲವರೆಗಿನದ್ದು ಎರಡನೇ ವಲಯ, ಸಿಬಿಟ್ಟಿಯಿಂದ ಮುಲ್ಲಾ ಓಣಿಯವರೆಗಿನ ಪ್ರದೇಶ ಮೂರನೇ ವಲಯ, ವೀರಾಪೂರ ಓಣಿಯಿಂದ ಗಾರ್ಡನ್ ಪೇಟೆಯವರೆಗಿನ ಪ್ರದೇಶ ನಾಲ್ಕನೇ ವಲಯ ಹಾಗೂ ಹಳೇ ಹುಬ್ಬಳ್ಳಿಯಿಂದ ಆನಂದ ನಗರದವರೆಗಿನದ್ದು ಐದನೇ ವಲಯ. ಇದರಲ್ಲಿ ಅತ್ಯಂತ ಜಾಸ್ತಿ ಮೇಯಲು ಅವಕಾಶವಿರುವ ಎರಡು ಮತ್ತು ಐದನೇ ವಲಯಗಳನ್ನು ನೋಡಿಕೊಳ್ಳುತ್ತಿರುವವನೇ ಅಕ್ಕಿ ಎಂಬ ಫುಡ್ ಇನ್ಸ್‌ಪೆಕ್ಟರ್.

ಆಹಾರ ಇಲಾಖೆಯ ಹೆಗ್ಗಣಗಳು ಮೇಯುವುದಕ್ಕೆ ಕಂಡುಕೊಂಡ ಇನ್ನೊಂದು ಮಾರ್ಗವೆಂದರೆ ಬಿಪಿಎಲ್ ಕಾರ್ಡುಗಳ ಕಳ್ಳ ಮಾರಾಟ. ಬಡ ಜನರಿಗೆ ವಿತರಿಸುವುದಕ್ಕಾಗಿ ಈಗಾಗಲೇ ಹೊಸ ಬಿಪಿಎಲ್ ಕಾರ್ಡುಗಳು ಪ್ರಿಂಟಾಗಿವೆ. ಆದರೆ ಅವು ಅರ್ಹರಿಗೆ ತಲುಪುವ ಮೊದಲೇ ಅವುಗಳನ್ನು ಮಾರಿಕೊಳ್ಳುವುದಕ್ಕೆ ಅಕ್ಕಿ ಮತ್ತು ಪಾಟೀಲ್ ರೆಡಿಯಾಗುತ್ತಿದ್ದಾರೆ. ಐದು ಸಾವಿರ ಕೊಟ್ಟರೆ ಸಾಕು ಐವತ್ತು ಬಿಪಿಎಲ್ ಕಾರ್ಡುಗಳು ಬಲ್ಕ್ ಆಗಿ ನಿಮ್ಮ ಕೈಸೇರುತ್ತವೆ.

ಇದಲ್ಲದೇ ಹುಬ್ಬಳ್ಳಿಯಲ್ಲಿ ಪ್ರತೀ ತಿಂಗಳು ವಿತರಣೆಗಾಗಿ ಐದು ಲಕ್ಷ ಲೀಟರ್ ಸೀಮೆಎಣ್ಣೆ ಬಿಡುಗಡೆಯಾಗುತ್ತದೆ. ಇದನ್ನು ಜಿ.ವಿ.ಸವಣೂರ ಹಾಗೂ ಜೆ.ಎಸ್.ಸವಣೂರ ಎಂಬ ಸಹೋದರರು ರಾಯಕರ ಸಿ.ವಿ. ಬಾಗಲಕೋಟೆ ಮಹಾದೇವ ಆಯಿಲ್ ಕಂಪನಿಯ ಹೆಸರಿನಲ್ಲಿ ಐದು ಡಿಸ್ಟ್ರಿಬ್ಯೂಟರ್‌ಗಳು, ನಾನೂರು ಜನ ಹಾಕರ್ಸ್‌ಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಾರೆ. ಸರಬರಾಜಾಗುವ ಐದು ಲಕ್ಷ ಲೀಟರ್ ಸೀಮೆಎಣ್ಣೆಯಲ್ಲಿ ಏನಿಲ್ಲವೆಂದರೂ ಅರ್ಧದಷ್ಟು ಕಾಳಸಂತೆ ಸೇರುತ್ತದೆ. ಅಂದರೆ ಪ್ರತೀ ತಿಂಗಳು ಏನಿಲ್ಲವೆಂದರೂ ಬರೋಬ್ಬರಿ ಮೂವತ್ತೈದು ಲಕ್ಷ ಈ ಖದೀಮರ ತಿಜೋರಿ ಸೇರುತ್ತದೆ!



ಮಾರಣ್ಣ ಬಸ್ರಿ


ಇದೇನು ಆಹಾರ ಇಲಾಖೆಯ ಅಧಿಕಾರಿ ಮಾರನಬಸರಿ ಮತ್ತು ನಿರ್ದೇಶಕಿ ಅನ್ನಪೂರ್ಣಮ್ಮಗೆ ಗೊತ್ತಿಲ್ಲವೆಂದೇನಲ್ಲ. ಅವರಿಬ್ಬರಿಗೂ ಪ್ರತೀ ಹಾಕರ್ ತಿಂಗಳೊಂದಕ್ಕೆ ನೀಡುವ ಗಿಂಬಳವೇ ತಲಾ ಒಂದೊಂದು ಸಾವಿರ. ಅಂದರೆ ಅವರಿಬ್ಬರಿಗೂ ಪ್ರತೀ ತಿಂಗಳು ಹಾಕರ್‌ಗಳಿಂದಲೇ ತಲಾ ಎರಡೆರಡು ಲಕ್ಷ ಸುಮ್ಮನೇ ಬಂದು ಬೀಳುತ್ತದೆಯೆಂದರೆ ಅವರಾದರೂ ಯಾಕೆ ಈ ದಂಧೆಯ ವಿರುದ್ಧ ದನಿ ಎತ್ತುತ್ತಾರೆ ಹೇಳಿ?

ಹಾಲಹರವಿಯ ದಿಟ್ಟತನ!

ಈ ಒಂದು ವಿಚಾರದಲ್ಲಿ ಮಾತ್ರ ಶಾಸಕ ವೀರಭದ್ರಪ್ಪ ಹಾಲಹರವಿಯನ್ನು ಪ್ರಶಂಸಿಸಲೇಬೇಕು. ಮೊನ್ನೆ ಬುಧವಾರ ಹುಬ್ಬಳ್ಳಿಯ ಸ್ಟೇಶನ್ ರೋಡ್‌ನಲ್ಲಿರುವ ಪ್ರಕಾಶ್ ರೆಸ್ಟೋರೆಂಟ್‌ನಲ್ಲಿ ಹುಬ್ಬಳ್ಳಿಯ ಎಲ್ಲಾ ರೇಶನ್ ಮತ್ತು ಸೀಮೆಎಣ್ಣೆ ವಿತರಕರ ಹಾಗೂ ಆಹಾರ ಇಲಾಖೆ ಮತ್ತು ತೂಕ ಮತ್ತು ಅಳತೆ ಮಾಪನ ಇಲಾಖೆಯ ಅಧಿಕಾರಿಗಳ ಸಭೆ ಕರೆದಿದ್ದರು. ಹುಬ್ಬಳ್ಳಿಯ ಇತಿಹಾಸದಲ್ಲೆ ಇಂತಹದ್ದೊಂದು ಸಭೆಯನ್ನು ಕರೆದಿದ್ದು ಹಾಲಹರವಿ ಮಾತ್ರ ಇರಬೇಕು. ಈ ಹಿಂದಿನ ಶಾಸಕರೆಲ್ಲರೂ ಅಧಿಕಾರಿಗಳಿಂದ, ವಿತರಕರಿಂದ ಗಿಂಬಳ ತಿಂದು ಸುಮ್ಮನಿದ್ದರು. ಹಾಲಹರವಿ ಸಭೆ ಕರೆದಾಗ ಹೊಸ ಕಮೀಷನ್ ರೇಟು ಫಿಕ್ಸ್ ಮಾಡುವುದಕ್ಕೆ ಕರೆದಿದ್ದಾರೆ ಎಂದೇ ಅವರೆಲ್ಲ ಅಂದುಕೊಂಡಿದ್ದರು. ಆದರೆ ನಡೆದದ್ದೇ ಬೇರೆ. ಅಧಿಕಾರಿಗಳನ್ನು, ವಿತರಕರನ್ನು ಯದ್ವಾತದ್ವಾ ಬೈದು ನೀರಿಳಿಸಿದ ಹಾಲಹರವಿ ಎಲ್ಲಿಯೂ ಅರ್ಹರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ತಾಕೀತು ಮಾಡಿದರು.

ಹಾಲಹರವಿ ಕೂಡ ಸ್ಲಮ್‌ನಲ್ಲಿ ಹುಟ್ಟಿ ಬೆಳೆದವರು. ಸೀಮೆಎಣ್ಣೆಗಾಗಿ, ಹಿಡಿ ಕಾಳಿಗಾಗಿ ನ್ಯಾಯಬೆಲೆ ಅಂಗಡಿಗಳ ಎದುರು ಸಾಲುಗಟ್ಟಿ ನಿಂತ ಅನುಭವ ಅವರಿಗೂ ಇದೆ. ಆ ಕಾರಣಕ್ಕಾಗಿಯೇ ಈ ಸಭೆ ಕರೆದಿದ್ದಾರೆ. ಆದರೆ ಮೀಟಿಂಗ್ ಮಾಡಿದ ತಕ್ಷಣ ಸಮಸ್ಯೆ ಬಗೆಹರಿಯುತ್ತೆ ಎಂದೇನಾದರೂ ಅವರು ಅಂದುಕೊಂಡಿದ್ದರೆ ಅದು ಅವರ ಭ್ರಮೆ ಮಾತ್ರ. ಏಕೆಂದರೆ ಈ ಹೆಗ್ಗಣಗಳು ಕಳೆದ ಎಂಟು-ಹತ್ತು ವರ್ಷಗಳಿಂದ ಇಲಾಖೆಯಲ್ಲಿ ಗೂಟ ಹೊಡೆದುಕೊಂಡು ಕುಂತಿವೆ. ಅವುಗಳನ್ನು ಯಾವ ಮುಲಾಜು ಇಲ್ಲದೇ ಕಿತ್ತೊಗೆಯದಿದ್ದರೆ ನಾಳೆಯಿಂದ ಮತ್ತದೇ ಸಮಸ್ಯೆ ಮುಂದುವರೆಯುತ್ತದೆ. ಅಂತಹದ್ದೊಂದು ದಿಟ್ಟ ತೀರ್ಮಾನ ತೆಗೆದುಕೊಳ್ಳುವ ಗಡಸುತನವನ್ನು ಹಾಲರವಿ ತೋರುತ್ತಾರೆಯೇ ಎಂಬುದೇ ಉಳಿದಿರುವ ಪ್ರಶ್ನೆ!

■ ಹುಬ್ಬಳ್ಳಿಯಾಂವ


ಬಿ.ಆರ್. ರವಿ

ಚಿತ್ರದುರ್ಗ

ವಂಚಕ ಟ್ರ್ಯಾಕ್ಟರ್ ಡೀಲರ್

ಬಿ.ಆರ್. ರವಿ ಚಿತ್ರದುರ್ಗದ ಎಸ್‌ಬಿಐ ಅಧಿಕಾರಿಗಳ ಜೊತೆ ಕೈಜೋಡಿಸಿ ಹಿರಿಯೂರು ತಾಲ್ಲೂಕಿನ ಟಿ.ಬಿ. ಗೊಲ್ಲರಹಟ್ಟಿಯ ರೈತ ನಿಂಗಪ್ಪನಿಗೆ ತಾನು ಪಡೆಯದ ಟ್ರ್ಯಾಕ್ಟರ್‌ಗೆ ಲಕ್ಷಾಂತರ ರೂ. ಸಾಲ ಕಟ್ಟಬೇಕಾದ ಪರಿಸ್ಥಿತಿಯನ್ನು ತಂದೊಡ್ಡಿದ್ದಾನೆ. ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳಲ್ಲಿಯೂ ಇಂಥದ್ದೇ ವಂಚನೆಯ ವ್ಯವಹಾರವೆಸಗಿ ರೈತರು ಲಕ್ಷಾಂತರ ರೂ. ಸಾಲದ ಸುಳಿಯಲ್ಲಿ ಸಿಲುಕಿ ಎದುಸಿರು ಬಿಡುವ ಹಾಗೆ ಮಾಡಿದ್ದಾನೆ.

"ಇದು ವಂಚಕ ಟ್ರ್ಯಾಕ್ಟರ್ ಡೀಲರನೊಬ್ಬ ಹತ್ತಾರು ರೈತರನ್ನು ಯಾಮಾರಿಸಿದ ಕತೆ. ಚಿತ್ರದುರ್ಗದ ಮಾರುತಿ ಟ್ರ್ಯಾಕ್ಟರ್ ಏಜೆನ್ಸಿಯ ಡೀಲರ್ ಬಿ.ಆರ್. ರವಿಯೇ ಈ ವಂಚಕ. ಪ್ರೀತ್ ಟ್ರ್ಯಾಕ್ಟರ್‌ನ ಏಜೆನ್ಸಿ ಪಡೆದುಕೊಂಡಿದ್ದ ಈತ ರೈತರನ್ನು ಮೋಸಗೊಳಿಸಿರುವ ರೀತಿ ಅಚ್ಚರಿ ಮೂಡಿಸುತ್ತದೆ.

ಹೊಳಲ್ಕೆರೆ ತಾಲ್ಲೂಕಿನ ಶಿವಗಂಗಾ ಗ್ರಾಮದವನಾದ ವಂಚಕ ಬಿ.ಆರ್. ರವಿ ಚಿತ್ರದುರ್ಗದ ಎಸ್‌ಬಿಐ ಅಧಿಕಾರಿಗಳ ಜೊತೆ ಕೈಜೋಡಿಸಿ ಹಿರಿಯೂರು ತಾಲ್ಲೂಕಿನ ಟಿ.ಬಿ. ಗೊಲ್ಲರಹಟ್ಟಿಯ ರೈತ ನಿಂಗಪ್ಪನಿಗೆ ತಾನು ಪಡೆಯದ ಟ್ರ್ಯಾಕ್ಟರ್‌ಗೆ ಲಕ್ಷಾಂತರ ರೂ. ಸಾಲ ಕಟ್ಟಬೇಕಾದ ಪರಿಸ್ಥಿತಿಯನ್ನು ತಂದೊಡ್ಡಿದ್ದಾನೆ. ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳಲ್ಲಿಯೂ ಇಂಥದ್ದೇ ವಂಚನೆಯ ವ್ಯವಹಾರವೆಸಗಿ ರೈತರು ಲಕ್ಷಾಂತರ ರೂ. ಸಾಲದ ಸುಳಿಯಲ್ಲಿ ಸಿಲುಕಿ ಎದುಸಿರು ಬಿಡುವ ಹಾಗೆ ಮಾಡಿದ್ದಾನೆ.

ವಂಚನೆಯ ಮಾದರಿ

ಹಿರಿಯೂರು ತಾಲ್ಲೂಕಿನ ಮಸ್ಕಲ್ ಬಳಿ ಟಿ.ಬಿ. ಗೊಲ್ಲರಹಟ್ಟಿಯ ನಿಜಲಿಂಗಪ್ಪ ಮತ್ತು ನಿಂಗಪ್ಪ ಎಂಬ ರೈತ ಸಹೋದರರಿಬ್ಬರು ಟ್ರ್ಯಾಕ್ಟರ್ ಕೊಳ್ಳಬೇಕೆಂಬ ಉತ್ಸುಕತೆಯಲ್ಲಿದ್ದಾರೆಂಬ ಮಾಹಿತಿ ತನ್ನ ಬ್ರೋಕರ್ ನೆಟ್‌ವರ್ಕ್‌ನಿಂದ ಪಡೆದ ಬಿ.ಆರ್. ರವಿ ಇದ್ದಕ್ಕಿದ್ದಂತೆ ಒಂದು ದಿನ ಸಂಜೆ ಮೂರು ಟ್ರ್ಯಾಕ್ಟರ್ ಎಂಜಿನ್‌ಗಳನ್ನು ತೆಗೆದುಕೊಂಡು ಟಿ.ಬಿ. ಗೊಲ್ಲರಹಟ್ಟಿಗೆ ತಳಾಯಿಸಿದ್ದಾನೆ. ಅಲ್ಲಿ ನಿಜಲಿಂಗಪ್ಪ-ನಿಂಗಪ್ಪ ಸಹೋದರರ ಮನೆ ವಿಚಾರಿಸಿ ಸೀದಾ ಎಂಜಿನ್‌ಗಳನ್ನು ಅವರ ಮನೆ ಮುಂಭಾಗದಲ್ಲೇ ನಿಲ್ಲಿಸಿದ್ದಾನೆ.

"ನೀವು ಟ್ರ್ಯಾಕ್ಟರ್ ಖರೀದಿಸುವ ಪ್ರಯತ್ನದಲ್ಲಿದ್ದೀರೆಂಬ ವಿಷಯ ತಿಳಿಯಿತು. ನಾನು ಪ್ರೀತ್ ಟ್ರ್ಯಾಕ್ಟರ್ ಏಜೆನ್ಸಿಯ ಡೀಲರು. ಇವು ಪಂಜಾಬ್‌ನ ಟ್ರ್ಯಾಕ್ಟರುಗಳು. ಉತ್ತಮ ಗುಣಮಟ್ಟ ಹಾಗೂ ಮೈಲೇಜ್ ಕೊಡ್ತವೆ. ನಮ್ಮ ಟ್ರ್ಯಾಕ್ಟರ್‌ನ್ನೇ ಕೊಂಡುಕೊಳ್ಳಿ" ಎಂದಿದ್ದಾನೆ. ನಿಜಲಿಂಗಪ್ಪ ನಿಂಗಪ್ಪ ಇಬ್ಬರೂ ಅವಾಕ್ಕಾಗಿದ್ದಾರೆ. "ನಮಗೆ ಟ್ರ್ಯಾಕ್ಟರ್ ಬೇಕಿದ್ದುದು ನಿಜ. ನಾವು ಮಹೇಂದ್ರ ಟ್ರ್ಯಾಕ್ಟರ್ ಖರೀದಿಸಬೇಕೆಂಬ ಆಲೋಚನೆಯಲ್ಲಿದ್ವಿ. ಸ್ಥಳೀಯ ಬ್ಯಾಂಕ್ ಅಧಿಕಾರಿಗಳ ಜೊತೆ ಮಾತನಾಡುವ ಉದ್ದೇಶವಿತ್ತು"ಎಂದು ಹೇಳಿದ್ದಾರೆ.

"ಟ್ರ್ಯಾಕ್ಟರ್ ಗುಣಮಟ್ಟದ ಬಗ್ಗೆ ಅನುಮಾನವಿದ್ದರೆ ಒಂದಷ್ಟು ದಿನ ಎಂಜಿನ್‌ಗಳನ್ನು ನಿಮ್ಮ ಬಳಿಯೇ ಬಿಡುತ್ತೇನೆ. ನೀವು ನಿಮ್ಮ ಕೆಲಸಗಳಿಗೆ ಉಪಯೋಗಿಸಿ, ನಂತರ ನಿಮಗಿಷ್ಟವಾದರೆ ಖರೀದಿಸಿ" ಎಂದು ಹೇಳಿ ನಿಜಲಿಂಗಪ್ಪ, ನಿಂಗಪ್ಪ ಹಾಗೂ ಅದೇ ಊರಿನ ಮತ್ತೊಬ್ಬ ರೈತನಿಗೆ ಒಟ್ಟು ಮೂರು ಎಂಜಿನ್‌ಗಳನ್ನು ಕೊಟ್ಟು ಬಂದಿದ್ದಾನೆ.

ಹದಿನೈದಿಪ್ಪತ್ತು ದಿನಗಳ ನಂತರ ಮತ್ತೆ ಪ್ರತ್ಯಕ್ಷನಾದ ರವಿ, ನಿಜಲಿಂಗಪ್ಪ ಮತ್ತು ನಿಂಗಪ್ಪನವರನ್ನು ತನ್ನ ಟ್ರ್ಯಾಕ್ಟರ್ ಗುಣಮಟ್ಟದ ಬಗ್ಗೆ ವಿಚಾರಿಸಿದ್ದಾನೆ. ಅಷ್ಟೊತ್ತಿಗೆ ಟ್ರ್ಯಾಕ್ಟರ್ ಉಪಯೋಗಿಸಿ, ಪರವಾಗಿಲ್ಲ ಅಂತಾ ಅನಿಸಿದ್ದರಿಂದ ಟ್ರ್ಯಾಕ್ಟರ್ ಕೊಳ್ಳಲು ಒಪ್ಪಿದ್ದಾರೆ. ಅದೇ ಸಂದರ್ಭದಲ್ಲಿ ಸ್ಥಳೀಯ ಬ್ಯಾಂಕ್‌ನಲ್ಲಿ ಸಾಲ ಪಡೆಯುವ ವಿಷಯ ಪ್ರಸ್ತಾಪಿಸಿದ್ದಾರೆ. ತನ್ನ ವಂಚನೆಗೆ ವೇದಿಕೆ ಸಿದ್ಧಮಾಡಿಕೊಂಡಿದ್ದ ರವಿ "ಚಿತ್ರದುರ್ಗದ ಎಸ್‌ಬಿಐನಲ್ಲಿ ನಾನು ಬಲ್ಲ ಅಧಿಕಾರಿಗಳಿದ್ದಾರೆ. ಲೋನಿಗೆ ಬೇಕಾದ ಡಾಕ್ಯೂಮೆಂಟ್‌ಗಳನ್ನು ನಾನೇ ರೆಡಿ ಮಾಡಿಸ್ತೀನಿ" ಅಂತ ಹೇಳಿದ್ದಾನೆ.

ಮತ್ತೆ ಒಂದು ವಾರದೊಳಗೆ ಡೀಲರ್ ರವಿ ತನ್ನ ಶೋರೂಂ ಫೀಲ್ಡ್ ಆಫೀಸರ್‌ಗಳಾದ ಮಂಜುನಾಥ, ಮಹೇಶ ಹಾಗೂ ಚಿತ್ರದುರ್ಗ ಎಸ್‌ಬಿಐನ ಫೀಲ್ಡ್ ಆಫೀಸರುಗಳಾದ ಗಾಡ್ವಿ, ಬಸವರಾಜ್‌ರವರುಗಳನ್ನು ಕಾರಿನಲ್ಲಿ ಟಿ.ಬಿ. ಗೊಲ್ಲರಹಟ್ಟಿಗೆ ಕರೆದೊಯ್ದು ನಿಜಲಿಂಗಪ್ಪ ಮತ್ತು ನಿಂಗಪ್ಪನವರ ಜಮೀನು ತೋಟ ಪರಿಶೀಲಿಸಿ ಟ್ರ್ಯಾಕ್ಟರ್ ಸಾಲದ ಜೊತೆ ತೋಟಗಾರಿಕಾ ಅಭಿವೃದ್ಧಿಗೆ, ತೋಟದ ಮನೆ ನಿರ್ಮಾಣಕ್ಕೂ ಸಹ ಸಾಲ ಕೊಡುವುದಾಗಿ ಬ್ಯಾಂಕ್ ಅಧಿಕಾರಿಗಳು ಭರವಸೆ ಕೊಟ್ಟಿದ್ದಾರೆ.

ನಂತರದ ಪ್ರಕ್ರಿಯೆಗಳೆಲ್ಲಾ ಶರವೇಗದಲ್ಲೇ ನಡೆದಿದೆ. ಅಣ್ಣತಮ್ಮಂದಿರಿಗೆ ಸಾಲಕ್ಕೆ ಬೇಕಾದ ಎಲ್ಲಾ ರೆವಿನ್ಯೂ ದಾಖಲೆಗಳನ್ನು ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ತಹಸೀಲ್ದಾರ್‌ರವರೆಗೆ ಎಲ್ಲಾ ಹಂತದಲ್ಲೂ ವಂಚಕ ರವಿಯೇ ಮುಂದೆ ನಿಂತು ತನ್ನ ಸ್ವಂತ ಹಣದಲ್ಲೇ ಭರಿಸಿ ಸಿದ್ಧಪಡಿಸಿಕೊಂಡಿದ್ದಾನೆ.

ದಾಖಲೆಗಳ ಸಿದ್ಧತೆ ಮುಗಿದನಂತರ ನಿಜಲಿಂಗಪ್ಪ, ನಿಂಗಪ್ಪ ಇಬ್ಬರನ್ನೂ ಚಿತ್ರದುರ್ಗಕ್ಕೆ ಕರೆಸಿಕೊಂಡು ಎಸ್‌ಬಿಐ ಮ್ಯಾನೇಜರ್ ಹಾಗೂ ಫೀಲ್ಡ್ ಆಫೀಸರುಗಳೊಂದಿಗೆ ಔಪಚಾರಿಕ ಮಾತುಕತೆ ನಡೆಸಿದ್ದಾನೆ. ಸಾಲ ಮಂಜೂರು ಮಾಡುವುದಾಗಿ ಬ್ಯಾಂಕ್ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಈ ಮಧ್ಯೆ ನಿಂಗಪ್ಪನವರ ಅಣ್ಣ ನಿಜಲಿಂಗಪ್ಪನಿಗೆ ಬೆಳೆಸಾಲ ಹಾಗೂ ಟ್ರ್ಯಾಕ್ಟರ್ ಸಾಲಗಳೆರಡೂ ಮಂಜೂರಾಗಿವೆ. ನಿಜಲಿಂಗಪ್ಪ ಅಧಿಕೃತವಾಗಿ ಟ್ರ್ಯಾಕ್ಟರ್ ಮಾಲೀಕನಾಗಿದ್ದಾನೆ. ಆದರೆ ನಿಂಗಪ್ಪನಿಗೆ ಸಾಲ ನೀಡಲು ಕ್ರಯಪತ್ರವೊಂದರ ಅಗತ್ಯವಿದೆ ಎಂಬ ಕಾರಣ ನೀಡಿ ಮುಂದೂಡಲಾಗಿದೆ. ಮತ್ತೆ ಇದಾದ ಸ್ವಲ್ಪ ದಿನಗಳಲ್ಲೇ ನಿಂಗಪ್ಪನನ್ನು ಕರೆಸಿಕೊಂಡ ಬ್ಯಾಂಕ್ ಅಧಿಕಾರಿಗಳು ಬೆಳೆ ಸಾಲ ಮಂಜೂರು ಮಾಡಿದ್ದಾರೆ. ಬೆಳೆಸಾಲದ ಹಣ ಪಡೆದ ನಿಂಗಪ್ಪ ಟ್ರ್ಯಾಕ್ಟರ್ ಸಾಲದ ಬಗ್ಗೆ ವಿಚಾರಿಸಿದ್ದಾನೆ. ಟ್ರ್ಯಾಕ್ಟರ್ ಸಾಲ ದೊಡ್ಡ ಮೊತ್ತವಾಗಿರುವುದರಿಂದ ನಮ್ಮ ಹೆಡ್‌ಆಫೀಸ್ ಅಧಿಕಾರಿಗಳ ಜೊತೆ ಮಾತನಾಡಿ ಲೋನ್ ಸ್ಯಾಂಕ್ಷನ್ ಮಾಡಿಸುತ್ತೇವೆಂದು ಹೇಳುತ್ತಾ ಮುಂದೂಡಿದ್ದಾರೆ.

ಬ್ಯಾಂಕಿಗೆ ನಿಂಗಪ್ಪ ಸಾಲಕ್ಕಾಗಿ ಬಂದುಹೋಗುವಾಗಲೇ ಪ್ರೀತ್ ಟ್ರ್ಯಾಕ್ಟರ್ ಡೀಲರ್ ವಂಚಕ ರವಿ ಟ್ರ್ಯಾಕ್ಟರ್‌ಗೆ ಸಂಬಂಧಿಸಿದ ಎಲ್ಲಾ ದಾಖಲೆಗಳಿಗೆ ನಿಂಗಪ್ಪನಿಂದ ಸಹಿ ಮಾಡಿಸಿಕೊಂಡಿದ್ದಾನೆ. ಸಹಿಯಾದ ನಂತರ **difference amount** ನ್ನು ಡೀಲರ್ ರವಿಯೇ ನಿಂಗಪ್ಪನ ಹೆಸರಲ್ಲಿ ಬ್ಯಾಂಕಿಗೆ ಪಾವತಿಸಿ **5,96,500.00** ರೂಪಾಯಿ ಡಿಡಿಯನ್ನು ತನ್ನ ಮೆಸರ್ಸ್ ಮಾರುತಿ ಟ್ರ್ಯಾಕ್ಟರ್ಸ್ ಹೆಸರಿನಲ್ಲಿ ಪಡೆದುಕೊಂಡಿದ್ದಾನೆ. ಇದೇ ಸಂದರ್ಭದಲ್ಲಿ ವಂಚಕ ರವಿ ಮತ್ತು ಬ್ಯಾಂಕ್ ಅಧಿಕಾರಿಗಳು ನಿಂಗಪ್ಪನಿಗೆ ಟ್ರ್ಯಾಕ್ಟರ್-ಟ್ರೈಲರ್ ಕೊಟ್ಟ ಹಾಗೆ **delivery challan** ಗೆ ಸಹಿಯನ್ನೂ ಮಾಡಿಸಿಕೊಂಡಿದ್ದಾರೆ.

ಈ ನಡುವೆ ನಿಂಗಪ್ಪನಿಗೆ ಅದೇಗೋ ತನ್ನ ಹೆಸರಲ್ಲಿ ಟ್ರ್ಯಾಕ್ಟರ್ ಲೋನ್ ಪಡೆಯಲಾಗಿದೆ ಎಂಬ ಸತ್ಯ ತಿಳಿದಿದೆ. ಆಗ ಡೀಲರ್ ರವಿ ಹತ್ತಿರ ವಿಚಾರಿಸಿದಾಗ "ಟ್ರ್ಯಾಕ್ಟರ್ ನನ್ನ ಬಳಿಯೇ ಇದೆ. ಇಷ್ಟರಲ್ಲೇ ಕೊಡುತ್ತೇನೆ" ಎಂದು ದಿನ ದೂಡುತ್ತಾ ಬಂದಿದ್ದಾನೆ. ನಿಂಗಪ್ಪನ ಒತ್ತಡ ಜಾಸ್ತಿಯಾದಾಗ ವಂಚಕ ರವಿ ತಾನು ಬ್ಯಾಂಕಿನಲ್ಲಿ ಸಾಲ ಪಡೆದು ತಂದಿದ್ದ **cruiser** ಗಾಡಿಯನ್ನು ನಿಮ್ಮ ಬಳಿ ಇಟ್ಟುಕೊಳ್ಳಿ ಎಂದು ಹೇಳಿದ್ದಾನೆ. ನಿಂಗಪ್ಪ **cruiser** ಗಾಡಿ ತಂದು ಇರಿಸಿಕೊಂಡು **3** ತಿಂಗಳಲ್ಲಿ ಸಾಲ ನೀಡಿದ ಬ್ಯಾಂಕ್ ಸಿಬ್ಬಂದಿ ಬಂದು ಸೀಜ್ ಮಾಡಿಕೊಂಡು ಹೋಗಿದ್ದಾರೆ.

ಕಂಗಾಲಾದ ನಿಂಗಪ್ಪ ಆಗ ಕೋಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ದೂರು ದಾಖಲಿಸಿಕೊಳ್ಳದ ಪೊಲೀಸರು ಡೀಲರ್ ರವಿಯ ಸಹೋದರರನ್ನು ಕರೆಸಿಕೊಂಡು ರಾಜಿ ಪಂಚಾಯ್ತಿ ಮಾಡಿ ತಾವೇ ಸಾಲ ಪಾವತಿಸುವುದಾಗಿ ಭರವಸೆ ನೀಡಿದ್ದಾರೆ. ಅಷ್ಟೊತ್ತಿಗಾಗಲೇ ವಂಚಕ ರವಿ ಬ್ಯಾಂಕ್‌ನಲ್ಲಿ ಒಂದು ಕಂತು ಸಾಲವನ್ನು ತಾನೇ ಪಾವತಿಸಿದ್ದಾನೆ. ಜೊತೆಗೆ ಮೈಲೇಜ್ ಬರದ ಕಾರಣ ಟ್ರ್ಯಾಕ್ಟರ್‌ನ್ನು ಡೀಲರ್‌ಗೆ ವಾಪಸು ಮಾಡಿರುವುದಾಗಿ ಪತ್ರ ಬರೆದು ಅದಕ್ಕೆ ನಿಂಗಪ್ಪನಿಂದ ಸಹಿ ಮಾಡಿಸಿಕೊಟ್ಟಿದ್ದಾನೆ.

ನಿಂಗಪ್ಪನ ಮನೆಯಲ್ಲಿ ಟ್ರ್ಯಾಕ್ಟರ್ ಸಾಲ ಪಡೆದು ಟ್ರ್ಯಾಕ್ಟರ್ ಮನೆಗೆ ತಂದಿಲ್ಲ ಎಂದು ರಂಪಾಟ ಶುರುವಾಗಿದೆ. ನಿಂಗಪ್ಪ ಮನೆಯವರ ಒತ್ತಡ ತಡೆಯಲಾರದೇ ಊರನ್ನೇ ತೊರೆದು ಚಿತ್ರದುರ್ಗದ ಹೊರವಲಯದ ಹಳ್ಳಿಯೊಂದರಲ್ಲಿ ಸ್ನೇಹಿತರ ಜೊತೆ ಮನೆ ಮಾಡಿ ಈ ಸಾಲದಿಂದ ಹೇಗೆ ಪಾರಾಗುವುದು ಎಂಬ ಚಿಂತೆಯಲ್ಲಿ ಮುಳುಗಿದ್ದಾರೆ. ಇದೇ ಹೊತ್ತಿಗೆ ಎಸ್‌ಬಿಐನಿಂದ ಟ್ರ್ಯಾಕ್ಟರ್ ಹಾಗೂ ಬೆಳೆ ಸಾಲದ ಬಾಬ್ತು ಸುಮಾರು **1.50** ಲಕ್ಷ ರೂ.ಗಳನ್ನು ಪಾವತಿಸಬೇಕೆಂದು ನೋಟಿಸ್ ಬಂದಿದೆ.

ನಿಂಗಪ್ಪ ಬೇರೆ ದಾರಿ ಕಾಣದೇ ವಕೀಲ ಶಿವುಯಾದವ್‌ರವರ ಬಳಿ ಹೋಗಿ "ನನಗೆ ಟ್ರ್ಯಾಕ್ಟರನ್ನೇ ಕೊಟ್ಟಿಲ್ಲ, ಆದರೆ ಟ್ರ್ಯಾಕ್ಟರ್ ಸಾಲ ಕಟ್ಟುವಂತೆ ನೋಟಿಸ್ ಕೊಟ್ಟಿದ್ದಾರೆ" ಎಂದು ತಿಳಿಸಿದ್ದಾನೆ. ಅದನ್ನು ನೋಡಿದ ನಂತರ ನೋಟಿಸ್‌ನಲ್ಲಿ ಟ್ರ್ಯಾಕ್ಟರ್ ನಂಬರ್ ಇಲ್ಲದಿರುವುದನ್ನು ಗಮನಿಸಿದ್ದಾರೆ. ರೈತ ನಿಂಗಪ್ಪನನ್ನು ಬ್ಯಾಂಕ್‌ಗೆ ಕರೆದುಕೊಂಡು ಹೋಗಿ "ನಿಂಗಪ್ಪ ಕಂತು ಪಾವತಿಸುತ್ತಾನೆ. ಆದರೆ ಆತ ಪಡೆದಿರುವ ಟ್ರ್ಯಾಕ್ಟರ್ ನಂಬರ್ ದಾಖಲಿಸಿರುವ ನೋಟಿಸ್ ಕೊಡಿ" ಎಂದು ಕೇಳಿದ್ದಾರೆ.

ಆಗ ಬ್ಯಾಂಕ್ ಅಧಿಕಾರಿಗಳು **KA 1647** ನಂಬರ್ ನಮೂದಿಸಿ ನೋಟಿಸ್ ಕೊಟ್ಟಿದ್ದಾರೆ. ಆರ್.ಟಿ.ಓ. ಕಚೇರಿಗೆ ಹೋಗಿ ಈ ನಂಬರನ್ನು ಪರಿಶೀಲಿಸಿದಾಗ ಇದು ಹೊಳಲ್ಕೆರೆ ತಾಲ್ಲೂಕಿನ ಬಿ.ಬಿ. ಹಳ್ಳಿ ರೈತ ಬಸಪ್ಪನ ಟ್ರ್ಯಾಕ್ಟರ್ ಎಂದು ಮತ್ತು ಅದರ ಮೇಲೆ ವಿಜಯಾ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದಾರೆ ಎಂದು ತಿಳಿದಿದೆ. ಏನೋ ಗೋಲ್‌ಮಾಲ್ ನಡೆದಿದೆ ಎಂದು ವಕೀಲ ಶಿವುಯಾದವ್ ಮತ್ತು ರೈತ ನಿಂಗಪ್ಪ ಬಿ.ಬಿ. ಹಳ್ಳಿಗೆ ಹೋಗಿ ಟ್ರ್ಯಾಕ್ಟರ್ ಪರಿಶೀಲಿಸಿದಾಗ

ಅದು ಬಸಪ್ಪ ವಿಜಯಾ ಬ್ಯಾಂಕ್‌ನಲ್ಲಿ ಅಧಿಕೃತವಾಗಿ ಸಾಲ ಪಡೆದು ಖರೀದಿಸಿದ ಟ್ರ್ಯಾಕ್ಟರ್ ಆಗಿತ್ತು. ಆದರೆ ನಿಂಗಪ್ಪನಿಗೂ ಟ್ರ್ಯಾಕ್ಟರ್ ಕೊಡಿಸಿದ್ದು ಇದೇ ವಂಚಕ ಡೀಲರ್ ರವಿ. ಬಸಪ್ಪನಿಗೆ ಎಂಜಿನ್ ಕೊಡಿಸಿ, ಟ್ರೈಲರ್ ಕೊಡಿಸದೇ ಸತಾಯಿಸಿದ್ದನೆಂಬ ಅಂಶ ಬಯಲಾಗಿದೆ. ಮಾತ್ರವಲ್ಲ ಈ ಡೀಲರ್ ರವಿ ಶಿವಗಂಗಾ ಸುತ್ತಮುತ್ತ ಹತ್ತಾರು ರೈತರಿಗೆ ಟ್ರ್ಯಾಕ್ಟರ್ ಕೊಡಿಸುವ ನೆಪದಲ್ಲಿ ವಂಚಿಸಿರುವ ಪ್ರಕರಣಗಳ ಬಗ್ಗೆ ಮಾಹಿತಿ ದೊರೆತಿದೆ. ಯಾರದೋ ಹೆಸರಲ್ಲಿ ಸಾಲ, ಮತ್ಯಾರಿಗೋ ಟ್ರ್ಯಾಕ್ಟರ್, ಇನ್ನೊಬ್ಬರ್‍ಯಾರಿಗೋ ಟ್ರೈಲರ್, ಕೆಲವರಿಂದ ಮೈಲೇಜ್ ಕೊಡುವುದಿಲ್ಲ ಎಂದು ಹೇಳಿ ಇಂಜಿನ್‌ಗಳನ್ನೇ ವಾಪಸು ಪಡೆದು ವಂಚಿಸಿರುವುದು, ಹೀಗೆ ತರಹೇವಾರಿ ಮೋಸ ಎಸಗಿದ್ದಾನೆ.

ವಂಚಕ ರವಿ ಇದೇ ಮಾದರಿಯಲ್ಲಿ ಖಾಸಗಿ ಫೈನಾನ್ಸುಗಳಲ್ಲೂ ರೈತರ ಹೆಸರಲ್ಲಿ ಸಾಲ ಪಡೆದು ವಂಚಿಸಿದ್ದಾನೆ. ಏನಿಲ್ಲವೆಂದರೂ ಈ ವಂಚನೆಯ ಪ್ರಮಾಣ ಕೋಟಿ ದಾಟುತ್ತದೆ.


ರೈತ ನಿಂಗಪ್ಪ ನ್ಯಾಯಾಲಯದಲ್ಲಿ ಬ್ಯಾಂಕ್ ಅಧಿಕಾರಿಗಳಾದ ಶಾಂತ ವೀರಯ್ಯ, ಗಾಡ್ವಿ, ಬಸವರಾಜ್ ಹಾಗೂ ಡೀಲರ್ ರವಿ, ಮಂಜುನಾಥ, ಮಹೇಶ್ ಆರೂ ಜನರ ಮೇಲೆ ಮೋಸ, ವಂಚನೆ ಹಾಗೂ ಫೋರ್ಜರಿ ಮಾಡಿದ ಆರೋಪದ ಖಾಸಗಿ ದೂರನ್ನು ದಾಖಲಿಸಿದ್ದಾರೆ. ದೂರು ದಾಖಲಿಸಿ ತಿಂಗಳಾದರೂ ಆರೋಪಿಗಳನ್ನು ಪತ್ತೆಹಚ್ಚುವ ಕೆಲಸ ಪೊಲೀಸರಿಂದ ಆಗಿಲ್ಲ. ಈಗ ಮನೆಯವರ ಕಾಟ ತಡೆಯಲಾರದೇ ಊರು ಬಿಟ್ಟಿರುವ ನಿಂಗಪ್ಪ ಬಹಳ ನೊಂದಿದ್ದಾನೆ.

ಇಡೀ ಪ್ರಕರಣ ನಡೆದಿರುವ ಮಾದರಿ ಪರಿಶೀಲಿಸಿದರೆ ಜಿಲ್ಲೆಯಲ್ಲಿ ಇಂತಹ ನೂರಾರು ಪ್ರಕರಣಗಳು ನಡೆದಿರುವ ಸಾಧ್ಯತೆ ತಳ್ಳಿ ಹಾಕಲಾಗದು. ವಂಚಕ ರವಿಯೊಬ್ಬನೇ ಹತ್ತಾರು ರೈತರನ್ನು ವಂಚಿಸಿದ್ದಾನೆಂದ ಮೇಲೆ ಅದಿನ್ನೆಷ್ಟು ರೈತರು ಟ್ರ್ಯಾಕ್ಟರ್ ಸಾಲದ ಹೆಸರಲ್ಲಿ ಮೋಸ ಹೋಗಿರಬೇಕು.

ಉನ್ನತಮಟ್ಟದ ತನಿಖೆಗೆ ಯೋಗ್ಯವಾದ ಈ ಹಗರಣದ ಬಗ್ಗೆ ಪೊಲೀಸರು ವಹಿಸಿರುವ ನಿರ್ಲಕ್ಷ್ಯ ಮಾತ್ರ ಅಚ್ಚರಿ ಹುಟ್ಟಿಸುತ್ತದೆ. ಈಗ ಈ ವಂಚಕ ರವಿ ಅವಿವಾಹಿತ ಯುವತಿಯೋರ್ವಳನ್ನು ಕರೆದುಕೊಂಡು ಬೆಂಗಳೂರಿನಲ್ಲಿ ಠಿಕಾಣಿ ಹೂಡಿದ್ದಾನಂತೆ. ಈಗಲೂ ಊರಿನ ಸ್ನೇಹಿತರ ಜೊತೆ ಸಂಪರ್ಕದಲ್ಲಿರುವ ರವಿಯನ್ನು ಪೊಲೀಸರೇಕೆ ಬಂಧಿಸುತ್ತಿಲ್ಲ? ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಬಹುಶಃ ವಂಚನೆಗೊಳಪಟ್ಟ ರೈತರು ವಿಷ ಕುಡಿದ ನಂತರವೋ? ನೇಣಿಗೆ ಕೊರಳೊಡ್ಡಿದ ನಂತರವೋ?

■ ವರದಿಗಾರ

ಎಸ್‌ಬಿಐನಲ್ಲೊಬ್ಬ ಖದೀಮ



ಈ ಪ್ರಕರಣದಲ್ಲಿ ವಂಚಕ ರವಿಯಷ್ಟೇ ಸಂಶಯಕ್ಕೆ ಗುರಿಯಾಗಿರುವವರು ಚಿತ್ರದುರ್ಗ ಎಸ್‌ಬಿಐನ ಅಧಿಕಾರಿಗಳು. ಸಾಮಾನ್ಯವಾಗಿ ಟ್ರ್ಯಾಕ್ಟರ್ ಸೇರಿದಂತೆ ಯಾವುದೇ ವಾಹನ ಸಾಲದ ಮೊತ್ತ ಸಂಬಂಧಪಟ್ಟ ಏಜೆನ್ಸಿ ಅಥವಾ ಡೀಲರ್‌ಗೆ ನೀಡುವಾಗ ವಾಹನದ ಫಲಾನುಭವಿ, ಬ್ಯಾಂಕ್ ಅಧಿಕಾರಿಗಳು ಹಾಗೂ ನೋಂದಾಯಿತ ವಾಹನದ ಫೋಟೋ ತೆಗೆಯಬೇಕು. ಜೊತೆಗೆ ಸಾಲ ನೀಡುವ ವಾಹನಕ್ಕೆ ಸಂಬಂಧಿಸಿದ ಎಲ್ಲಾ ದೃಢೀಕೃತ ಮೂಲ ದಾಖಲೆಗಳನ್ನು ಬ್ಯಾಂಕ್ ಮ್ಯಾನೇಜರ್ ಪಡೆದುಕೊಳ್ಳಬೇಕು. ಫಿಟ್‌ನೆಸ್ ಸರ್ಟಿಫಿಕೆಟ್, ಇನ್ಶೂರೆನ್ಸ್, ವಾಹನದ ಕೀ ಒಂದನ್ನು ತಮ್ಮ ವಶದಲ್ಲಿಟ್ಟುಕೊಳ್ಳಬೇಕು.

ವಿಚಿತ್ರವೆಂದರೆ ನಿಂಗಪ್ಪನ ಹೆಸರಲ್ಲಿ ಸಾಲ ಮಂಜೂರು ಮಾಡಲು ಅಗತ್ಯವಿರುವ ಎಲ್ಲಾ ಅಧಿಕೃತ ದಾಖಲೆಗಳನ್ನು ಪಡೆದುಕೊಂಡಿರುವ ಬ್ಯಾಂಕ್ ಅಧಿಕಾರಿಗಳು ಟ್ರ್ಯಾಕ್ಟರ್ ಮತ್ತು ಟ್ರೈಲರ್‌ಗೆ ಸಂಬಂಧಿಸಿದ ದೃಢೀಕೃತ ಮೂಲ ದಾಖಲೆಗಳನ್ನು ಇಟ್ಟುಕೊಂಡಿಲ್ಲ. ಡೀಲರ್ ರವಿ ಫಲಾನುಭವಿ ನಿಂಗಪ್ಪನಿಗೆ ಟ್ರ್ಯಾಕ್ಟರನ್ನೇ ಕೊಟ್ಟಿಲ್ಲವೆಂದ ಮೇಲೆ ಅಧಿಕೃತ ದಾಖಲೆಗಳು ಎಲ್ಲಿಂದ ಬರುತ್ತವೆ?



ಈಗ ನಿಂಗಪ್ಪ ಪಡೆದಿರುವ ಟ್ರ್ಯಾಕ್ಟರ್ ಸಾಲಕ್ಕೆ ಸಂಬಂಧಿಸಿದಂತೆ ಎಸ್‌ಬಿಐನವರ ಬಳಿ ಇರುವ ಟ್ರ್ಯಾಕ್ಟರ್ ದಾಖಲೆಗಳು ಬಿ.ಬಿ. ಹಳ್ಳಿಯ ಬಸಪ್ಪನದು ಮತ್ತು ಇನ್ಶೂರೆನ್ಸ್ ಸರ್ಟಿಫಿಕೆಟ್ ಸ್ವತಃ ನಿಂಗಪ್ಪನ ಅಣ್ಣ ನಿಜಲಿಂಗಪ್ಪನ ಟ್ರ್ಯಾಕ್ಟರ್‌ಗೆ ಸಂಬಂಧಿಸಿದ್ದು. ಆರ್‌ಟಿಓ ಕಚೇರಿಯಿಂದ ನೀಡಲಾಗುವ **TPR** ಕೂಡಾ ವಂಚಕ ರವಿಯೇ ಸಹಿ-ಸೀಲು ಹಾಕಿ ತಿದ್ದಿರುವಂತದ್ದು. ಇದು ಬ್ಯಾಂಕ್ ಅಧಿಕಾರಿಗಳು ಮತ್ತು ವಂಚಕ ರವಿ ಸೇರಿ ಮಾಡಿರುವ ಅನಾಹುತ ಎಂದು ಹೇಳಲಿಕ್ಕೆ ಸಾಕ್ಷಿಗಳನ್ನು ಹುಡುಕಬೇಕಾ?

SBI- pure banking 'nothing' else ಎಂದರೆ ನಂಬುವುದಾದರೂ ಹೇಗೆ?

ಸಾಬರೆಂಗುಸ್ರು ದೇವರಿದ್ದಂಗೆ ಕಣಕ್ಕ!

ಒಂದು ಹದಮಳೆ ಬಿದ್ದ ಕೂಡಲೇ ಎಲ್ಲಾ ಬೀಜ ಗೊಬ್ಬರದೊಂದಿಗೆ ಬಿತ್ತನೆ ಕಾರ್ಯಕ್ಕೆ ಓಡಿದ್ದರು. ಕಾಳಮಾವ ಈಗ ಬಿತ್ತುವ ಸ್ಥಿತಿಯಲ್ಲಿರಲಿಲ್ಲ, ಬದಲಿಗೆ ಬಿತ್ತುವವರಿಗೆ ವಿವರಣೆ ಕೊಡುವವನಾಗಿದ್ದ ಅಂತಹ ಘನಕಾರ್ಯ ಮುಗಿಸಿ ನಿರಾಳವಾಗಿರಬೇಕಾದರೆ ಸಾಬರು ಬೆಂಗಳೂರಿಗೇ ಬಾಂಬ್ ಹಾಕಿರುವ ಬಗ್ಗೆ ಸುದ್ದಿ ಬಂತು.

"ಏನೀ ಹಾಳು ಸಾಬ್ರು ಹಿಂಗಾಗಿಬುಟ್ರಲ್ಲಾ" ಎಂದು ಚಿಂತಾಕ್ರಾಂತನಾದ. ಕೂಡಲೇ ಸೀರ,

ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಸುಮ್ಮನಿರು, ವಳ್ಳೆದೆ ಆಯ್ತು" ಎಂದ.

"ಇದೇನೂ ಮಾವ ಹಿಂಗಂತೀ? ಪಾಪ ಯಾರೊ ನನ್ನಂಥೋಳು ಸತ್ತೆ ಹೋಗಿದ್ದಳಂತೆ. ಅಂತೆದ್ರಲಿ ನೀನು ಹಿಂಗಂತಿ?" ಎಂದಳು ಜುಮ್ಮಿ.

"ಅಲ್ಲ ಕಂಡ್ಯ, ಯಾರು ನೋಡು ಬೆಂಗಳೂರಿ ಗೋಗರೆಯ. ನಮ್ಮ ಕಾಲ್ದಲ್ಲಿ ಯಾರು ಬೆಂಗಳೂರಲ್ಲಿದ್ರೂ? ನಮ್ಮ ಇಡೀ ಊರೆ ಬೆಂಗಳೂರು ಕಡಿಕೆ ತಿರುಗಿ ನೋಡ್ತಿರಲಿಲ್ಲ, ಅದೆ ಇವತ್ತು ನೋಡು, ಏನು ಜನವುರೆ? ಮನಿಗ್ವಬ್ರು ಹೋಗಿ ಬೆಂಗಳೂರು ಸೇರಿಕಂಡವುರೆ."

"ನಮ್ಮೂರದಿರ್ಲಿ, ನಾಗ್ತಳ್ಳಿಯೋರೆ ಸುಮಾರು ಮೂರು ಸವುರ ಜನಸಂಖ್ಯೆ ಬೆಂಗಳೂರಲ್ಲಿ ಅಡಗಿದ್ದರಂತೆ" ಎಂದ ಉಗ್ರಿ.

"ಊ ಕಂಡ್ಯ ಉಗ್ರಿ. ನಾನು ಸಣ್ಣುಡುಗಿಲಿ ನನ್ನ ಜ್ವತೆ ಇದ್ದೋರ್ಕಲ್ಲ ಈಗ ಬೆಂಗಳೂರಲ್ಲವುರೆ" ಎಂದಳು ಜುಮ್ಮಿ.

"ಅದ್ಯಾಕಾಟ ಜನ ಬೆಂಗಳೂರಿಗೋದ್ರು ಗೊತ್ತೆನ್ಲೆ?" ಎಂದ ಕಾಳಮಾವ.

"ಇನ್ನಾತಕೆ? ವಟ್ಟೆಪಾಡಿಗೆ."

"ವಟ್ಟೆಪಾಡು ನಮಗಿರಲಿಲ್ವೆ? ಅದಲ್ಲ, ನಾಗ್ತಳ್ಳಿ ಜನ ಓದಿಕಂಡೋರು.. ಅಂಗಾಗಿ ಕ್ಯಲಸ ಹುಡಿಕ್ಕಂಡು ಬೆಂಗಳೂರಿಗೋದ್ರು" ಎಂದ ಕಾಳಮಾವ.

"ಅದಕ್ಕಿಂತ ಇನ್ನು ಒಂದು ಕಾರಣದೆ ಕಣಮಾವ. ನಾಗ್ತಳ್ಳಿ ಸುತ್ತ ಊರುಗಳು ಅತ್ತತ್ರಕೆ ಇರದ್ರಿಂದ ಆ ಊರಿಗೆ ಜಮೀನು ಕಡಮೆ. ಅತ್ತಗೋದಿಯಾ ಆಳಿಸಂದ್ರ, ಇತ್ತಗೆ ಬಂದ್ರೆ ಹ್ಯರಗನಳ್ಳಿ, ಕದಬಳ್ಳಿ, ಅಪ್ಪಾರಳ್ಳಿ, ಒಮ್ಮೆನಳ್ಳಿ ಅಂತವ. ಊರು ಸುತ್ತ ಊರಿದ್ರೆ ಜನಸಂಖ್ಯೆ ಎಲ್ಲಿಗೋಗಬೇಕು? ಅದ್ಕೆ ಯಲ್ಲ ಬೆಂಗಳೂರು ಸೇರಿಕಂಡ್ರು" ಎಂದ ಉಗ್ರಿ.

"ಅಂಗೆ ಸೇರಿಕಳೋರ್ಕಲ್ಲ ಹೆದರಬೇಕಾದ್ರೆ ಹಿಂಗೆ ಸಾಬ್ರು ಬಾಂಬಾಕ್ತಯಿರಬೇಕು ಕಂಡ್ಯ ಉಗ್ರಿ" ಎಂದು ಸೀರ ಸಾಬರ ಕೃತ್ಯವನ್ನು ಮೆಚ್ಚಿದ.

"ನಿನ್ನ ಮಾತು ನೋಡಿದ್ರೆ ನೀನು ಯಾಕೊ ಸಾಬರ ಜ್ವತೆ ಸೇರಿಕಳಂಗೆ ಕಾಣ್ತಾಯಿದ್ದಿ ಕಣೊ. ಅಲ್ಲಾ ಬೆಂಗಳೂರು ಕಂಟ್ರೋಲ್ ಮಾಡಕ್ಕೆ ಸಾಬ್ರೆ ಸರಿ ಅಂತಿಯಲ್ಲಾ, ಇನ್ನಂಥಾ ಮನುಸ್ನೊ ನೀನು?"

"ಅಂತೂ ಗುಜರಾತು, ಬಂಬಾಯಿ, ದಿಲ್ಲಿ ಸಾಬ್ರು ಬೆಂಗಳೂರಿಗೂ ಬಂದ್ರು ಅಂದಂಗಾಯ್ತು" ಎಂದ ಕಾಳಮಾವ.

"ಅಲ್ಲಿಂದ ಯಾರೂ ಬಂದಿಲ್ಲ ಇಲ್ಲಿನ ಸಾಬರೇ ಕಣಮಾವ. ಆ ಚನ್ನಪಟ್ಟಣದಲ್ಲೂ ಬಾಂಬು ಸಿಕ್ಕತಾಯಿದ್ದವಂತೆ. ಅಲ್ಲಿಗೇನು ದೇಸದಿಂದ ಬಂದಿದ್ರೆ? ಇಲ್ಲಿನ ಸಾಬರದೆ ಕ್ಯಲಸ."

"ಚನ್ನಪಟ್ಣದ ಸಾಬ್ರು ಮದ್ಲಿಂದ ಡೇಂಜರು ಕಂಡ್ಯ" ಎಂದ ಸೀರ.

"ಮದ್ಲಿಂದ ಅಂದ್ರೆ ಯಾವಾಗ್ಲೊ?"

"ಆಗೊಂದು ಸತಿಯ ಮಾರಾಜರ ಕಾಲ್ದಲ್ಲಿ ಇಸುಗೂಲ ಯಡ್ಡಮೇಷ್ಟ್ರನೆ ಕ್ವಲೆ ಮಾಡಿ ಹೆಣ್ಣುಮಕ್ಕಳ ಹಾಳುಮಾಡಿದ್ರಂತೆ."

"ಯಾರ್ ಮಾವ ಹೇಳಿದೋರು?"

"ಬ್ರಾಂಬ್ರು ಸೇಸಾದ್ರಿ ಅಂಗಂತ ಹೇಳನು ಕಂಡ್ಯ. ಯಡ್ಡಮೇಷ್ಟ್ರ ತಲೆ ಕಡುದು ಟೇಬಲ್ ಮ್ಯಾಲೆ ಮಡಗಿ, ಅವುನತ್ರ ಇದ್ದ ಬೀಗದೆಸಳ ತಗಂಡೋಗಿ, ಬಾಗ್ಲು ತಗದು ಹೆಣ್ಣುಮಕ್ಕಳ ಹಾಳು ಮಾಡಿದ್ರಂತೆ. ಅದ ಕೇಳಿದಾಗ್ಯಲ್ಲ ನನಿಗೆ ಸಾಬರ ಕೇರಿಕಡಿಕೆ ಕಲ್ಲುವಡಿಯಂಗಾಗದು" ಎಂದ ಸೀರ.

"ಈಗಾಗಿರೊ ಸಮಸ್ಯೆ ಅದೆ ಕಣೊ ಸೀರ ಮಾವ. ಶೇಷಾದ್ರಿ ಅಂಥೋನು ಹೇಳಿಕಂಡು ತಿರಗದ್ಕೂ, ಮುನೀರ, ನಜೀರ ಅನ್ನೊರು ಬಾಂಬು ತಯಾರಿಸಿಕಂಡು ತಿರಗದ್ಕೂ ಚನ್ನಾಗ್ಯದೆ. ಇವುರ ಜಗಳದಲ್ಲಿ ಪಾಪ ಯಾರ್ಯಾರೊ ಸಾಯ್ತರಲ್ಲ ಹೇಳು" ಎಂದ ಉಗ್ರಿ.

"ಆ ಸಾಬಿ ನನ್ನ ಮಗನವು ಅವುರಿಗ್ಯಾರಾರು ತ್ವಂದ್ರೆ ಮಾಡ್ಯವುರೆ ಅವುರಮ್ಯಾಲೆ ಬೀಳ್ಳಿ. ಅದುಬುಟ್ಟು ಹಾದಿಬೀದಿ ಜನ ಸಾಯಿಸ್ತರೆ ಅಂದ್ರೆ ಆ ನನ ಮಕ್ಕಳ ತಲಿಕೆಟ್ಟದೆ ಕಂಡ್ಯ" ಎಂದ ಕಾಳಮಾವ.



"ಅಂಥಾ ವಿವೇಕ ಆ ನನಮಕ್ಕಳಿಗಿಲ್ಲ ಕಣಮಾವ. ಹಿಂದೂಗಳ್ಯಲ್ಲ ನಮ್ಮ ವಿರೋಧಿಗಳು, ಅವುರಿಗೆ ಬುದ್ಧಿ ಕಲುಸಬೇಕು ಅನ್ನಕಂಡವುರೆ" ಎಂದ ಉಗ್ರಿ.

"ಹಿಡಿಯಕ್ಕಾಗದಿಲ್ಲವೇನ್ಲ ಅವುರ್ನ?" ಎಂದಳು ಜುಮ್ಮಿ.

"ಹಿಡಿಯದಷ್ಟು ಸುಲಭವಲ್ಲ ಕಣೆ. ಈ ಸಾಬ್ರು ಆ ಸಾಬ್ರು ಮನೆವಳಗೊ ಮಸೀದಿವಳಗೊ ಇಟ್ಗಂಡ್ರೆ ಯಂಗಿಡದೀ? ಅಗೋ ನೋಡು ಆ ಪಾಕಿಸ್ತಾನದ ಸಾಬ್ರು ನಮ್ಮ ದೇಸದ ಸಿಟಿಲ್ಯಲ್ಲ ಬಾಂಬಾಕ್ಸೊ ದಾವೂದ್ ಇಬ್ರಾಹಿಂ ಅನ್ನೋನ, ಆಮ್ಯಾಲೆ ಬಿನ್‌ಲ್ಯಾಡೆನ್ ಅನ್ನೋನ ದೇಸದಲ್ಲೇ ಮಡಿಕಂಡು 'ನಾವು ಹುಡುಕ್ತಾಯಿದ್ದಿವಿ. ಇನ್ನೂ ಸಿಕ್ಕಿಲ್ಲ' ಅಂತ ಅಮೆರಿಕದೋರಿಗೆ ಸುಳ್ಳು ಹೇಳತ ಬತ್ತಾ ಅವುರೆ. ಇದಕೇನೇಳ್ತೀ?" ಎಂದ ಉಗ್ರಿ.

"ಅಂಗೆ ಮಾಡಿದ್ರೆ ಯಂಗಪ್ಪ ಹಿಡಿಯದು?" ಎಂದ ಕಾಳಮಾವ.

"ಆದಿರ್ಲಿ, ಮದ್ಲಿಗೆ ಇಲ್ಲೊಂದು ಸಾಬರೆಂಗುಸು ಬಂದ್ರೆ ಈತರ ಇದ್ಲು ಅಂತಿದ್ಯೊ, ಈಗ್ಯಂಗೇಳದು? ಯಲ್ಲಾವಳು ಬುರ್ಕಾ ಹಾಕಿರಳೆಯಾ" ಎಂದ ಸೀರ.

"ಬುರುಕ ಹಾಕಿರೊ ಸಾಬರೆಂಗುಸರ ಬಗ್ಗೆ ಕಾಮೆಂಟ್ ಮಾಡಬ್ಯಾಡ ಚಿಗಪ್ಪ ನಾನು ಹಿಂದೆ ಹೇಳಿದಂಗೆ ಅವುರ್ಯಲ್ಲ ದೇವರಿದ್ದಂಗೆ" ಎಂದುಕೊಂಡು ವಾಟಿಸ್ಸೆ ಬಂದ.

"ಸಾಬರೆಂಗುಸುರು .ದೇವರೆ? ಅದ್ಯಂಗಪ್ಪಾ?"

"ಸಾಬರೆಂಗಸರ್ಯಲ್ಲ ದೇವರಲ್ಲ, ಬುರುಖಾ ಹಾಕಿರೊ ಹೆಂಗುಸ್ರು ದೇವ್ರು. ಯಾಕಪ್ಪ ಅಂದ್ರೆ ಅವುರು ಪೂರಾ ಬುರುಖಾ ಆಯ್ಕಂಡು ಬರೀ ಯರುಡು ಕಣ್ಣು ಬುಟ್ಟಿರದ್ರಿಂದ ಅವುರಿಗೆ ನಾವು ಕಾಣ್ತೆವಿ, ನಮಿಗೆ ಅವುರು ಕಾಣದಿಲ್ಲ, ಅದ್ಕೆ ಅವುರ್ಯಲ್ಲ ದೇವರು!"

"ಆಹಹ, ಇಂತವೇಳು ಅನ್ನು. ದೇವರಂತೆ ದೇವರು. ಆ ರಯಿಮಾನೆಡ್ತಿ ನೋಡಿದ್ರೆ ಮಾರಿ ಇದ್ದಂಗವಳೆ. ಅವುಳ್ಯಂಗೆ ದೇವ್ರಲ?" ಎಂದಳು ಜುಮ್ಮಿ.

"ಅಂತ ಮಾರಿ, ಮಸಣಿ, ಹಿಡಿಂಬೆ ಅಂಥೋರನ್ಯಲ್ಲ ಸಾಬ್ರು ಮುಚ್ಚುವುರಲ್ಲ ಅದನ್ನ ಮೆಚ್ಚಕ್ಕ ನೀನು. ಅದೇ ನಿಮ್ಮಂಗೆ ಸೀರೆ ಉಟ್ಟದ್ರೆ ನೋಡಕ್ಕಾಯಿತ್ತೆ?"

"ಪಾಪ, ಅವ್ಯಲ್ಲ ವಳ್ಳೆ ಜನ ಕಂಡ್ಯ" ಎಂದ ಕಾಳಮಾವ.

"ವಳ್ಳೆ ಜನ ಸರಿ ದ್ವಡಪ್ಪ, ಈ ಬಾಂಬಾಕೊ ಸಾಬರಿಂದ ಅಂಥೋರಿಗ್ಯಲ್ಲ ಬಾಳ ಕಷ್ಟ. ಆ ದರ್ಟಿ ಫೆಲೋಗಳೇನೋ ಬೆಂಗಳೂರಂತ ಊರಲ್ಲಿ ಬಾಂಬಾಕಿಬುಡ್ತರೆ. ಅದ್ರೆ ಹಳ್ಳಿಕಡೆ ಇರೋ ಸಾಬರಿಗೆ ಬಾಳ ಕಷ್ಟ ಕಾಲ ದೂಡದು. ಯಾಕೆ ಅಂದ್ರೆ ಸಿಟಿಲಿದ್ದ ಬಿಜೆಪಿ ಹಳ್ಳಿಕಡಿಕೂ ಹಬ್ಬತಾ ಅದೆ. ಹಳ್ಳಿಕಡಿಕೆ ಬಂದ ಬಿಜೆಪಿಗಳು ಸುಮ್ಮನಿರದಿಲ್ಲ, ಏನಾರ ಪ್ರೊಗ್ರಾಂ ಹಾಯ್ಕಳ್ತಾಯಿರತರೆ. ಅವ್ಯಲ್ಲ ಮುಸ್ಲಿಮರ ಕೆರಳಸಂಗೇ ಇರತದೆ. ಹಿಂಗಾದ್ರೆ ಮುಂದೆ ಬಾಳ ಕಷ್ಟ ದ್ವಡಪ್ಪ."

"ಕಷ್ಟ ಅಂದ್ರೆ ಅದೇನು ನಾವು ಮಾಡಿಕಂಡಿದ್ದೇನ್ಲ? ಇಲ್ಲಿ ನೆಮ್ಮದಿಯಾಗಿ ಸಾಬ್ರು ಇರಬೇಕಾದ್ರೆ ವಳ್ಳೆರಾಗಿರಬೇಕಪ್ಪ."

"ಅವುರಂಗೆ ಇರಕ್ಕೆ ಬಿಜೆಪಿಗಳು ಬುಡಬೇಕಲ್ಲ ದ್ವಡಪ್ಪ ಇದ್ದಕ್ಕಿದ್ದಂಗೆ ಹೋಗಿ ಆ ಮಸೀದಿ ಕೆಡವಿಬುಟ್ರು. ಅವತ್ತಿಂದ ಸುರುವಾದೊ ನೋಡು ಸಾಬರ ಕೇರಿ ಬಾಂಬು, ಇನ್ನೂ


ತಿರುಪತಿ ತಿಮ್ಮಪ್ಪನಿಗೂ ಗ್ರಹಣದ ಕಾಟ

ಈ ಸಲದ ಸೂರ್ಯಗ್ರಹಣ ಭೀಮನ ಅಮಾವಾಸ್ಯೆಯಂದು ಆಗಲಿದೆ. ಆದರೆ ಆಗಲಿ ಎಂದು ನೆಮ್ಮದಿಯಿಂದ ಇರುವಂತಿಲ್ಲ, ಕೇಡು ಕಾದಿದೆ! ಈ ಅಶುಭ ಎನ್ನುವುದು ಸಂಜೆ ನಾಲ್ಕರ ವೇಳೆಗೆ ಉತ್ತುಂಗಕ್ಕೆ ಏರುತ್ತದೆ. ಈ ಗ್ರಹಣದ ವೇಳೆಯಲ್ಲಿ ಭೂಕಂಪ, ನೆರೆ, ಅಪಘಾತಗಳು ಸಂಭವಿಸಬಹುದು-ಹೀಗೆ ಭವಿಷ್ಯ ನುಡಿದವರು ಅಬ್ಬೇಪಾರಿಗಳಲ್ಲ-ಪ್ರಸಿದ್ಧ ಜ್ಯೋತಿಷಿಗಳು! ಸಂಭವಿಸಬಹುದು ಎಂದಾಗ ಸಂಭವಿಸದೇ ಇರಲೂಬಹುದಲ್ಲವೆ ಎನ್ನುವ ಉಡಾಫೆ ಉತ್ತರ ನೀಡಿದರೆ ಸಂಭವಿಸೇಬಿಟ್ಟರೆ ಏನು ಮಾಡುತ್ತೀರಿ ಎಂದು ಪ್ರಶ್ನಿಸಬೇಕಾಗುತ್ತದೆ. ಜನರ ಹಿತವನ್ನೇ ಕಾಯುವ ಸುದ್ದಿ ಮಾಧ್ಯಮಗಳು ಇದನ್ನು ಪ್ರಕಟಿಸಿದವು. ಅವರಿಗೆ ಪ್ರಚಾರ, ಇವರಿಗೆ ಪ್ರಸಾರ ಎಂದು ಕೊಂಕು ನುಡಿಯಬೇಡಿ. ಯಾಕೆಂದರೆ ಲಕ್ಷಾಂತರ ಜನರಿಗೆ ದರ್ಶನ ನೀಡಿ ಕೋಟ್ಯಂತರ ರೂಪಾಯಿ ಸಂಪಾದಿಸಿ, ಪಾಪ ಪರಿಹಾರ ಮಾಡುವ ಆ ತಿರುಪತಿ ತಿಮ್ಮಪ್ಪನೇ ಗ್ರಹಣದಿಂದ ನಡುಗಿ ಹೋಗಿದ್ದಾನೆ. ಗರ್ಭಗುಡಿಯಲ್ಲಿ ಯಾವುದೋ ಮೂಲೆಯಲ್ಲಿ ಅವಿತು ಬೀಗ ಜಡಿಸಿಕೊಂಡಿದ್ದಾನೆ. ಬೆಳಿಗ್ಗೆ ಹತ್ತರಿಂದ ಸಂಜೆ ಆರರವರೆವಿಗೆ ಅವನು ಯಾರ ಕಣ್ಣಿಗೂ ಬೀಳುವುದಿಲ್ಲ! ಸಿಓಡಿ ಮಾತು ಹಾಗಿರಲಿ. ರಾಜ್ಯ ಸರ್ಕಾರ ಬಗ್ಗು ಅಂದರೆ ದೈ ಹೊಡೆಯುವ ಜಾಯಮಾನದವ್ರು. ಸಿಬಿಐ ಬಂದರೂ ಆ ಸ್ವಾಮಿಯ ಪತ್ತೆಹಚ್ಚಲು ಸಾಧ್ಯ ಇಲ್ಲ!

ವಿಷಯ ಇಷ್ಟೊಂದು ಅಪಾಯಕಾರಿ ಆದುದರಿಂದ ಜ್ಯೋತಿಷಿಗಳು ಹೇಳಿರುವುದನ್ನು ಕಿವಿಗೊಟ್ಟು ಕೇಳಿ, ಕಣ್ಣುಬಿಟ್ಟು ನೋಡಿ. ಅದರಂತೆ ನಡೆಯಿರಿ.

ನೀವು ಯಾವುದೋ ಕಾಯಿಲೆಯಿಂದ ನರಳುತ್ತಿರಬಹುದು. ವೇಳೆಗೆ ಸರಿಯಾಗಿ ಊಟ ಮಾಡುವಂತೆ ವೈದ್ಯರು ಸೂಚಿಸಿರಬಹುದು. ಆದರೂ ಬೆಳಗಿನ ಒಂಭತ್ತು ಗಂಟೆಯ ವೇಳೆಗೆ ನಿಮ್ಮ ತಿಂಡಿ, ತೀರ್ಥ, ಊಟ ಉಪಚಾರ- ಎಲ್ಲವೂ ನಡೆದು ಹೋಗಬೇಕು. ಅನಂತರ ಬಾಯಿಗೆ ಒಂದು ತೊಟ್ಟು ನೀರನ್ನೂ ಬಿಡಕೂಡದು. ಔಷಧಿಯನ್ನೂ ಸೇವಿಸಬಾರದು. ಸಂಜೆ ಏಳರನಂತರ ಸ್ನಾನ ಮಾಡಿ ಯಥಾರೀತಿ ಮಾನವರಂತೆ ಬಾಳಿ ಬದುಕಬಹುದು. ಉದಾಸೀನ ಮಾಡಿದರೋ ನಿಮಗೆ ಮರಣವೇ ಸಂಭವಿಸಬಹುದು! ಇದನ್ನು ಓದುವುದರೊಳಗೆ ಗ್ರಹಣ ಬಂದುಹೋಗಿದ್ದರೆ, ನೀವು ಜ್ಯೋತಿಷಿಗಳ ಮಾತನ್ನು ಮೀರಿದ್ದರೆ, ಹಾಗೆ ನಡೆದುಕೊಳ್ಳದೇ ಇನ್ನು ಜೀವಂತವಾಗಿದ್ದರೆ.... ನಿಮಗೆ ಮುಂದೆ ಸಾವು ನಿಶ್ಚಯ!

ತಿರುಪತಿ ತಿಮ್ಮಪ್ಪನೂ ಗ್ರಹಣದಿಂದ ಬೆದರಿ 'ಕಾಣದಂತೆ ಮಾಯವಾದ.' ಆದರೆ ಯಾವ ಭಕ್ತನೂ ಕಾಣೆಯಾಗಿರುವ ಏಳುಮಲೆ ಒಡೆಯನನ್ನು ಹುಡುಕಿ ಕೊಡಿ ಅಂತ ಪೊಲೀಸರಿಗೆ ದೂರು ನೀಡಿದಂತಿಲ್ಲ ಅಥವಾ ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದಂತಿಲ್ಲ, ಭಕ್ತರಿಗೂ ಪ್ರಾಯಶಃ ಧೀರ ಪೊಲೀಸರ ತನಿಖಾ ವೈಖರಿ ಪರಿಚಯ ಇರಬೇಕು. ದೂರು ನೀಡಿದವನನ್ನೇ 'ನೀನೇ ಯಾಕೆ ದೂರು ನೀಡಿದೆ? ಲಕ್ಷಾಂತರ ಭಕ್ತರಲ್ಲಿ ಯಾರೂ ನೀಡಿಲ್ಲವಲ್ಲ? ನೀನೇ ಏನೋ



ಮಾಡಿದ್ದೀಯ' ಎಂಬುದಾಗಿ ಅಪೂರ್ವ ತನಿಖಾ ಖಾವಿಧಾನವನ್ನು ಬಳಸಿ ಒಳಕ್ಕಾಕಬಹುದು! ಇನ್ನು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದರೆ ನ್ಯಾಯಾಲಯ ಏನು ಮಾಡುತ್ತೆ, ಪೊಲೀಸರಿಗೆ 'ತಿರುಪತಿ ತಿಮ್ಮಪ್ಪನನ್ನು ಕೋರ್ಟಿಗೆ ಇಷ್ಟು ದಿನಗಳಲ್ಲಿ ಹಾಜರು ಪಡಿಸಿ' ಅನ್ನುತ್ತೆ, ಮತ್ತೆ ಅದೇ ಕತೆ. ಅದಕ್ಕೇ ಯಾರೂ ದೂರು ನೀಡಲು ಮುಂದೆ ಬಂದಿಲ್ಲವೇನೋ. ಇದಕ್ಕೆ ಇನ್ನೂ ಒಂದು ಕಾರಣ ಇರಬಹುದು. 'ದೇವರನ್ನು ಹಾಜರುಪಡಿಸಿ' ಅಂತಾನೋರು 'ದೇವರು ಕಾಣೆಯಾಗಿದ್ದಾನೆ' ಅಂತಾನೋ ದೂರು ನೀಡಿದರೆ 'ಬಹುಸಂಖ್ಯಾತ ಮನಸ್ಸುಗಳಿಗೆ ನೋವುಂಟುಮಾಡಿದೆ' ಎಂಬ ಕಾರಣ ಮುಂದೊಡ್ಡಿ ಕೆಲವು ಸಂಘಟನೆಗಳು ರಂಗುರಂಗಿನ ಆಟ ತೋರಿ, ಕೆಂಪುದ್ರವ ಹರಿಸಿಯಾರು ಎಂಬ ಭಯ ಇದ್ದರೂ ಇರಬಹುದೇನೋ.

ಇತ್ತೀಚೆಗೆ ದೇವಸ್ಥಾನಗಳಲ್ಲಿ ಕಳವು ಹೆಚ್ಚಿದೆ. ಕೆಲವು ದೇವಸ್ಥಾನಗಳ ಮುಖಂಡರು ಇದನ್ನು ಪೊಲೀಸರಿಗೆ ತಿಳಿಸುವುದೇ ಇಲ್ಲವಂತೆ. ಮೇಲೆ ತಿಳಿಸಿದ ಕಾರಣಗಳಿಗಲ್ಲ,

ಹಾಗಾದರೆ ಆ ಕಾರಣ ಯಾವುದು?

ಒಂದು ಹಳ್ಳಿಯ ದೇವಸ್ಥಾನ. ಒಂದು ವರ್ಷದಷ್ಟೇ ಈಚೆಗೆ 'ಹಾಳುಬಿದ್ದ ಗುಡಿ' ಅನ್ನಿಸಿಕೊಂಡದ್ದು ದೇವಸ್ಥಾನ ಅನ್ನುವ ಮಟ್ಟಕ್ಕೆ ಬಂದಿತ್ತು. ಭ್ರಷ್ಟಾಚಾರಿಗಳ ಪಾಪ ಪರಿಹಾರಾರ್ಥ ನಡೆದಿದ್ದ ಪುಣ್ಯ ಕಾರ್ಯ ಅದು! ಈ ಸೇವಾ ಕಾರ್ಯದ ಫಲವಾಗಿ ದೇವರ ಹುಂಡಿ ಬಂದಿತ್ತು, ಭಕ್ತರ ಕಾಣಿಕೆಯೂ ಸಾಕಷ್ಟು ಸಂಗ್ರಹವಾಗುತ್ತಿತ್ತು, ಅದರಲ್ಲಿ ಬೀಳುತ್ತಿದ್ದ ತರಾವರಿ ರೂಪಾಯಿಗಳೇ ಕೆಲವರ ಮನಸ್ಸನ್ನು ಚಂಚಲಗೊಳಿಸಿರಬೇಕು. ಇದರ ಪರಿಣಾಮ ಒಂದು ರಾತ್ರಿ ಹುಂಡಿ ಒಡೆದು ಬಿದ್ದಿತ್ತು,

ದೇವರ ಹುಂಡಿಯಿಂದಲೇ ಕದ್ದರೆಂದರೆ! ಜನ ಸೇರಿದರು.

'ಪೊಲೀಸರಿಗೆ ದೂರು ನೀಡಿ' ಕೆಲವರ ಆಕ್ರೋಶ.

ಊರ ಮುಖಂಡರು ಅಳೆದರು. ಸುರಿದರು. ಕೊನೆಗೆ ತೀರ್ಮಾನ ಹೇಳಿದರು.

'ಯಾರಿಗೂ ದೂರು ನೀಡುವುದು ಬೇಡ'

'ಯಾಕೆ ಬೇಡ' ಕೆಲವರ ಪ್ರಶ್ನೆ.

'ದೇವರಿಗೆ ನೋವಾಗುತ್ತೆ' ಮುಖಂಡರ ಉತ್ತರ!

ತನ್ನನ್ನು ತಾನೇ ಕಾಪಾಡಿಕೊಳ್ಳದಿರುವನೆಂತಹ ದೇವರು ಅನ್ನುವುದಿಲ್ಲವೆ ಭಕ್ತರು? ದೇವರ ಪ್ರತಿಷ್ಠೆಗೆ ಕುಂದು!

ಆ ದೇವರು ಯಾಕೆ ಕಳ್ಳರನ್ನು ಹಿಡಿಯಲಿಲ್ಲ ಹಿಡಿಯುತ್ತಿದ್ದ ಆದರೆ...

ಕಳ್ಳತನದ ಹಿಂದಿನ ದಿವಸ ಭಕ್ತರು ಮಾತೆಯ ದರ್ಶನಕ್ಕೆ ಬಂದಿದ್ದರು. ಶ್ರದ್ಧೆಭಕ್ತಿಗಳಿಂದ ಆ ತಾಯಿಯನ್ನು ಪೂಜಿಸಿ ಹರಕೆ ಹೊತ್ತರು. ಅವರ ಬೇಡಿಕೆ ಇಷ್ಟೆ- 'ತಾಯಿ ನಮ್ಮವ್ವ ಹಣಕಾಸು ತೊಂದರೆ ಅದೆ. ಹುಂಡೀಲಿರೋದ ತಗಳ್ತೀವಿ. ನೀನು ನಮ್ಮ ಕಾಪಾಡಿದರೆ ಮುಂದ್ಲ ಮಂಗ್ಳಾರ ಎರಡು ಕಾಲಿನ ಬಲಿ ಕೊಡ್ತೀವಿ ಕನವ್ವ!'

ಪಾಪ ಆ ತಾಯಿ ಭಕ್ತರ ಕೋರಿಕೆಗೆ ಮಣಿದಳು!

* * * * * *

ಅಣಕ

ಎಚ್.ಎಲ್. ಕೇಶವಮೂರ್ತಿ

ರೋಗ ಕಾಡದಿರಲಿ!

'ಮೈಸೂರು ದಸರಾ ಎಷ್ಟೊಂದು ಸುಂದರಾ'

ಇನ್ನೂ ಸುಂದರ, ಮತ್ತಷ್ಟು ಸುಂದರ ಮಾಡಬೇಕೆಂಬುದು ಶೋಭಾ ಕರಂದ್ಲಾಜೆ ಯಡ್ಯೂರಪ್ಪ ಅವರ ಇಂಗಿತ. (ಪ್ರಿಂಟಿಂಗ್ ಮಿಸ್ಟೇಕು. ಕರಂದ್ಲಾಜೆ ಪಕ್ಕದಲ್ಲಿ 'ಕಾಮ' ಇರಬೇಕು)

ವಿಜೃಂಭಣೆಯಿಂದ ಮಾಡಬೇಕು ಸರಿ. ಎಷ್ಟೇ ಆಗಲಿ ಸಾಂಸ್ಕೃತಿಕ ಹಬ್ಬವಲ್ಲವ ಅದು!

ಆದರೆ ಹಣ? 'ಹತ್ತು ಕೋಟಿ ಬಿಡುಗಡೆ ಮಾಡ್ತೀನಿ' ಅಂತ ಘೋಷಿಸಿದರು ಯಡ್ಯೂರಪ್ಪ.

ಹೌದು ವಿಜೃಂಭಣೆ ಎಂದರೆ ಹೇಗೆ?

ರಾಜಮನೆತನದವರಿಗೆ ಸನ್ಮಾನ ಮಾಡಿ!

ಮಹಿಷೂರ ಅರಮನೆಗೆ ಮಾತ್ರ ಸೀಮಿತವೆ ಅದು?

ಹಾಗೆ ಮಾಡಿದರೆ ಮರು ಕಳಿಸುವುದೆ ವೈಭವ? ಅದಕ್ಕೇ ದೇಶದ ವಿವಿಧ ರಾಜ್ಯಗಳಲ್ಲಿನ ರಾಜಮನೆತನದ ಸಂಬಂಧಿಕರಿಗೂ ಸನ್ಮಾನ!

ರಾಜಮನೆತನದಲ್ಲಿ ಹುಟ್ಟಿದ್ದೇ ಸಾಧನೆಯೇ? ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಮನಾರ್ಹ ಕೊಡುಗೆ ಬೇಡವೆ?

ಬೇಕಿಲ್ಲ, ರಾಜಾ ಪ್ರತ್ಯಕ್ಷ ದೇವತಾ!

ಇದು ಮೊದಲ ಹಂತ. ಮುಂದೆ ನೋಡುತ್ತಿರಿ. ಮೆರವಣಿಗೆಯಲ್ಲಿ ತಾಯಿ ಚಾಮುಂಡೇಶ್ವರಿ ಬದಲು ರಾಜರು ಕುಳಿತು ದರ್ಶನ ನೀಡುತ್ತಾರೆ!

ಹೂಸು ನಿಂತರೂ ಹೂಸಿನ ನಾಥ ನಿಂತಿಲ್ಲ,

ಪ್ರಜಾಪ್ರಭುತ್ವ ಕಾಲಕಸ. ಸಂವಿಧಾನ ಕುರಿತು ಗೌರವ

ಎಟಿಟ್ಟು ಈ ನಮ್ಮ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬತ್ತು ನೋಡು. ಅದ್ಕೆ ನಲ್ಲು ಬಾಂಬಾಕಕ್ಕೆ ಸುರುಮಾಡ್ದವ್ರರೆ."

"ಅದ್ಕೆ ಆಲವೇನ್ಲ ನಾನೇಳ್ತಯಿರದು? ನೀವು ಹಾಕೊ ಬಾಂಬು ನನಗೆ ಆಗ್ವೆ ಜನ ಸುಮ್ಮನೆ ಬುಟ್ಟರೆ ಅಂತವ?"

"ನೀನೇನೊ ಏಡದ್ ಪರಸನ್ನು ದ್ವಡಪ್ಪ ನಿನಿಗಾಗ್ಲೆ ದೇವೇಗೌಡರಪ್ಪು ವಯಸ್ಸಾಗ್ಯದೆ. ಇನ್ನು ಯಂಗ್ ಪರಸನ್ನಗಳಿಗೆ ಬಾಂಬು ತಗಲಿದ್ರೆ?"

"ರಜನಿಕಾಂತ ಹೇಳಿದ್ದು ಅದೆ ಆಲವೇನೊ ವಾಟಿಸ್ಸೆ? ಅವ್ರುನಂದಿರೊ ದ್ಕೆ ಮಾತ್ನೆ ಓದಕಂದು ಕರನಾಟಗ ರಕ್ಷಣಾ ವೇದಿಕೆ ಜನ ಹಾರಾಡಿ ಕಡಿಗೆ ತಣ್ಣಗಾದವಪ್ಪ" ಎಂದ ಉಗ್ರಿ.

"ಅವ್ರುನೇನಂದಿದ್ನ?" ಎಂದಳು ಬುಮ್ಮಿ.

"ವಗನೇಕಲ್ಲಲಿ ಆ ತಮುಳ್ರು ಏನೋ ಮಾಡಕ್ಕೆ ಬಂದಿದ್ರು. ಅದ ಹೋಗಿ ತದಿಯದು ಬುಟ್ಟು ಇನ್ನೆಲ್ಲೊ ಬಸ್ಸಿಗೆ ಕಲ್ಲುವದಿಯದೇನು. ಪಾಪ ಯಾವುದೊ ಊರುದುಗಿ ಬಸ್ಸಲ್ಲೋಯ್ತಾಯಿತ್ತು, ಆ ಹುಡುಗಿಗೆ ಏಟು ಬಿತ್ತು. ಮಕದಲ್ಲಿ ಗುರುತಾಯ್ತು. ಮದ್ಲೆ ಒಂದು ಲಕ್ಷ ವರದಕ್ಷಿಣೆ ಕೇಳೋರು ಈಗ ಯರಡು ಲಕ್ಷ ಕೇಳಂಗಾಗ್ಯದಂತೆ. ಇದಕೇನೇಳ್ತಿ?"

"ಅಯ್ಯೋ. ಅವ್ರುರ ಕೈ ಸೇದ ಹೋಗು."

"ನೋಡಿದೇ ಮಾತ ರಜನೀಕಾಂತ ಹೇಳಿದ್ದು. ಯಾರು ಬಸ್ಸಿಗೆ ಕಲ್ಲು ವಡದು ಬೆಂಕಿ ಹಚ್ಚುತರೊ, ಅವ್ರುರ ವದಿಬೇಕು ಅಂದನಂತೆ."

"ಸರಿಯಾಗೆ ಅಂದವ್ರುನೆ."

"ಅಂಗಂತ ರಕ್ಷಣಾ ವೇದಿಕೆಯವರ ಎದ್ರಿಗೇಳಿ ಬದುಕಿ ಬತ್ತಿಯಾ?"

"ಮಿಸ್ಟರ್ ಉಗ್ರಿ, ನಿಮ್ಮ ರಕ್ಷಣಾ ವೇದಿಕೆಯವರ್ನ ನನ್ನತ್ರ ಕಳುಸು, ಹೇಳ್ತೀನಿ" ಎಂದ ವಾಟಿಸ್ಸೆ.

"ಏನೇಳ್ತಿಯಪ್ಪ?"

"ಒಂದು ಬಸ್ಸು ಇಪ್ಪತ್ತು ಲಕ್ಷ ಬ್ಯಲೆ ಬಾಳ್ತದೆ. ಅದರಲ್ಲೂ ಓಲವೊ ಬಸ್ಸು ಮುಂಟತ್ತು ಲಕ್ಷಾಯ್ತದೆ."

"ವವುಲ ಬಸ್ಸು ಅಂದ್ರೆ ಅದ್ಯಾವುದ್ನ?"

"ಓಲವೊ ಅಂದ್ರೆ ಇಂಗ್ಲಿಸಲ್ಲಿ ಗೂಬೆ ಅಂತ ದ್ವಡಪ್ಪ. ಗೂಬೆ ಯಂಗೆ ಹಗಲೊತ್ತು ನಿದ್ದೆ ಮಾಡ್ತದೊ, ಅದೇತರ ಈ ಓಲವೊ ಬಸ್ಸಿಗೆ ಕುಂತಗಂಡ್ರೆ ಹಗಲೊತ್ತೆ ನಿದ್ದೆ ಬತ್ತದೆ. ಅದ್ಕೆ ಈ ಬಸ್ಸಿಗೆ ಓಲವೊ ಬಸ್ಸು ಅಂತಿವಿ ನಾವು. ಇಂತ ಬಸ್ಸಿಗೆ ಕಲ್ಲು ವಡುದ್ರೆ, ಬೆಂಕಿ ಹಚ್ಚಿದ್ರೆ ಅದು ಯಾರ ಪ್ರಾಪರ್ಟಿ? ಆ ಬಸ್ಸಲ್ಲಿದ್ದೋರು ಯಾರು? ಅಂತ ಥಿಂಕ್ ಮಾಡಿದ್ದವೇ ಇವ್ರು?"

"ಮಾಡಿದ್ಯಾಕೆ ಕಲ್ಲು ವಡದವ್ರುಲ?"

"ಇಲ್ಲ ಆ ಬಸ್ಸಿಗೆ ನೀನು ಬ್ಯಲೆ ಕಟ್ಟುತಿ. ಸರಿ. ಅದರ್ರಳಗಿರೊ ಜನಗಳ ಪ್ರಾಣ, ಕಣ್ಣು, ತಲೆ ಇದಕೆ ಬ್ಯಲೆ ಕಟ್ಟಕ್ಕಾದತೇ? ಅದ್ಕೆ ಇಂಥೋರಿಗೆ ವದಿಬೇಕು ಅಂದ ರಜನಿ. ಅದ್ಕೆ ಹೋರಾಟಗಾರು ಅವ್ರುನ ಸಿನುಮಾ ರಿಲೀಸ್ ಆಗದಂಗೆ ತಡದ್ರು. ಕಡಿಗೆ ಸಿನುಮ ತಂದು ರಿಲೀಸ್ ಮಾಡೋ ಜನ ಫೋನ್ ಮಾಡಿದ ಮ್ಯಾಲೆ ಸುಮ್ಮನಾದ್ರು. ಆಗೊ ಅಂಗವೆ ನಮ್ಮ ಹೋರಾಟಗಳು."

"ಚನ್ನಗ್ಯವೆ ಬುಡಂಗರೆ."

"ಸ್ವಾಂಗಾಗ್ಯವೆ!" ■

ಇಲ್ಲ, ಮನುಧರ್ಮ ಶಾಸ್ತ್ರವೇ ಇವರ ಶಾಸನ.

ಇದೇ ಭಾರತೀಯ ಜನತಾ ಪಕ್ಷದ ಮೌಲ್ಯ!

ಸನ್ಮಾನಕ್ಕೆ ಆಯ್ಕೆ ಆಯಿತು. ಉದ್ಘಾಟನೆಗೆ ಯಾರು?

ಸಿದ್ಧಗಂಗಾಮಠದ ಶ್ರೀ ಶಿವಕುಮಾರ ಸ್ವಾಮಿಗಳು!

ಕಳೆದ ವರ್ಷ ಶ್ರೀಯವರನ್ನು ಉದ್ಘಾಟನೆಗೆ ಆಹ್ವಾನಿಸಲಾಗಿತ್ತು. ಶ್ರೀಯವರೂ ಸಮ್ಮತಿಸಿದ್ದರು. ನಡುವೆ ಯಡವಟ್ಟಾಯಿತು. ಕುಮಾರಸ್ವಾಮಿ ಯಡ್ಯೂರಪ್ಪಗೆ ಅಧಿಕಾರ ಹಸ್ತಾಂತರ ಮಾಡಲಿಲ್ಲ. ಶ್ರೀಗಳಿಗೆ ಉದ್ಘಾಟನೆಗೆ ಅದೆಷ್ಟೋ ದಿವಸಗಳ ಮುನ್ನವೇ ಯಾವುದೋ ರೋಗ ತಗುಲಿತು. ಸಮಾರಂಭಕ್ಕೆ ಹಾಜರಾಗಲು ಈ ರೋಗ ಅಡ್ಡಿಯಾಯಿತು! ಆದರೆ ಏನು ದುರಂತ ಅಂತೀರಿ. ಶ್ರೀಮಠದ ಹುಂಜ ಕೂಗದೆಯೂ ದಸರಾ ಉತ್ಸವ ಉದ್ಘಾಟನೆ ಅದ್ದೂರಿಯಾಗಿ ನೆರವೇರಿತು!

ಒಮ್ಮೆ ಆಹ್ವಾನಿತರು ಸಮ್ಮತಿಸಿಯೂ ಉಪಸ್ಥಿತರಾಗದಿದ್ದಾಗ ಮತ್ತೆ ಅವರಿಗೇ ಮಣೆ ಹಾಕುವ ಸಂಪ್ರದಾಯ ಇಲ್ಲವೇ ಇಲ್ಲ ಅನ್ನಬಹುದು. ಶ್ರೀಮಠ ಜಾತ್ಯತೀತವಾಗಿ ಬಡ ವಿದ್ಯಾರ್ಥಿಗಳಿಗೆ ಉಚಿತ ಸೌಲಭ್ಯ ಕಲ್ಪಿಸಿಕೊಟ್ಟಿರುವುದರಿಂದ ಇವರನ್ನು ಮತ್ತೆ ಆಹ್ವಾನಿಸಬಹುದು. ಇದರಲ್ಲಿ ಅಪರಾಧ ಇಲ್ಲ. ಮತ್ತೆ ಕಳೆದ ವರ್ಷದ ರೋಗ ಮರು ಕಳಿಸಲಾರದು ಎಂದು ಆಶಿಸೋಣ. ಯಡ್ಯೂರಪ್ಪ ಮುಖ್ಯಮಂತ್ರಿಯಾಗಿರುವವರೆವಿಗೂ ಶ್ರೀಗಳಿಗೆ ಈ ರೋಗ ಮರುಕಳಿಸಲಾರದು!

ಆಧುನಿಕ ಕುಚೇಲನ್!

ಕುಚೇಲನ್ ಬಿಡುಗಡೆಗೆ ತಡೆ!

ಯಾಕೆ ತಡೆ ಒಡ್ಡಿದರು?

ಆ ಸಿನಿಮಾ ನಾಯಕ ರಜನೀಕಾಂತ್ ಕನ್ನಡಿಗರಿಗೆ ಅವಮಾನ ಮಾಡಿದ್ದರು. ಅದು ಎಂತಹ ಅವಮಾನ? ಹೊಗೇನಕಲ್ ವಿವಾದದಲ್ಲಿ ತಮಿಳುನಾಡಿನ ಸರ್ಕಾರದ ವಿರುದ್ಧ ಪ್ರತಿಭಟಿಸಿದವರನ್ನು 'ಚಪ್ಪಲಿಯಲ್ಲಿ ಹೊಡೆಯಿರಿ' ಅಂದಿದ್ದರು!


ಆಗಲಿಲ್ಲವೆ (ಯಡ್ಯೂರಪ್ಪನವರ ಭಾಷೆಯಲ್ಲಿ ಹೇಳುವುದಾದರೆ) ಐದೂವರೆ ಕೋಟಿ ಕನ್ನಡಿಗರಿಗೆ ಅವಮಾನ? 'ಪ್ರಾಣ ನೀಡಲು ಸಿದ್ಧ' ಎಂದು ಸಾರಿದರು ಕನ್ನಡ ಕಲಿಗಳು! (ಅದಕ್ಕೆ ರಜನಿ ಅವಕಾಶ ನೀಡಲಿಲ್ಲ ಅಷ್ಟೆ!)

ಎಲ್ಲಿಯವರೆವಿಗೆ ಈ ಹೋರಾಟ?


ರಜನೀಕಾಂತ್ ಕನ್ನಡನಾಡಿಗೆ ಬಂದು ಕ್ಷಮೆ ಕೋರುವವರೆಗೆ!

ಅವರು ಕರ್ನಾಟಕಕ್ಕೆ ಬರಲಿಲ್ಲ. ಹೈದರಾಬಾದಿನಿಂದ ಟಿವಿ ಮೂಲಕ ಕ್ಷಮೆ ಯಾಚಿಸಿದರು. ಐದೂವರೆ ಕೋಟಿ ಕನ್ನಡಿಗರಿಗೆ ಆದ ಅವಮಾನ ಅಳಿಸಿ ಹೋಯಿತು! 'ಕುಚೇಲನ್'ಗೆ ಮುಕ್ತಿ ದೊರಕಿತು!

ರೀಮೇಕ್ ಚಿತ್ರಗಳಿಗೂ ಸಬ್ಸಿಡಿ ನೀಡಿ ಸೃಜನಶೀಲತೆಯನ್ನು ಹಾಳುಗೆಡುವಲು ಯಡ್ಯೂರಪ್ಪ ಸರ್ಕಾರ ತುದಿಗಾಲಿನ ಮೇಲೆ ನಿಂತಿದೆ. ಅದು ಗೊತ್ತಿದ್ದೂ ಆಗಾಗ ಕಪ್ಪೆ ನುಂಗಿದ ಹಾವಿನ ತರಹ ಬಿದ್ದಿದ್ದ ಕನ್ನಡದ ಕಲಿಗಳು ಕನ್ನಡದ ಕೇಡಾಸಿಗಳಂತೆ ಬೀದಿಗಿಳಿಯಲು ಏನು ಕಾರಣವಿರಬಹುದು? ಕನ್ನಡ ಜನತೆಗೆ ಆದ ಅವಮಾನಕ್ಕೋ, ಬಿಡುಗಡೆಗೆ ತಡೆಒಡ್ಡಿದರೆ ವಿತರಣಕಾರರು ಬಂದು ಇವರುಗಳು ಕುಚೇಲನನ್ನು ದುಂಡುದುಂಡಾಗಿ ಪರಿವರ್ತಿಸುತ್ತಾನೆ ಎಂಬ ಕಾರಣದಿಂದಲೋ.. ಈ ಅನುಮಾನ ಬರುವುದು ಸಹಜವೇ ಅಲ್ಲವೇ?.... ■



ಕನಿಷ್ಠ ಕಾಳಜಿ



ತುಂಟಾಟದ ಫೋಟೋ ನೋಡಿದ ನಮ್ಮ ಕಟ್ಟಾ ಅಭಿಮಾನಿಯಾದ ಹುಡುಗನೊಬ್ಬ ಮೊನ್ನೆ ನನ್ನನ್ನು ಭೇಟಿಯಾದ. "ಸಾರ್, ಮಾತುಗಳಲ್ಲಿ ತುಂಟಾಟ ಇರಲಿ, ಫೋಟೋ ಬೇಡ ಸಾರ್!" ಎಂದು ಕಂಬನಿಗರೆಯತೊಡಗಿದ. ಅದಕ್ಕೆ ನಾನು, "ನಿನಗೆ ಶಾಕ್ ಆಗುವಂಥ ಫೋಟೋ ಬರುವುದಿಲ್ಲ ಮಾರಾಯ. ಖಂಡಿತ ಬೇಡವೆಂದರೆ ಬಿಟ್ಟುಬಿಡೋಣ. ಅದಕ್ಕೆ ನೀನು ಅಳೋದೇಕೆ?" ಅಂದೆ.

ಅಂಥವನೇ ಒಬ್ಬ ಕಟ್ಟಾ ಅಭಿಮಾನಿ, "ನಾನು ಬಡ ಕುಟುಂಬದಿಂದ ಬಂದವನು. ನನ್ನ ತಂದೆತಾಯಿ ನನ್ನನ್ನು ಕಷ್ಟಪಟ್ಟು ಓದಿಸಿದರು. ಅನೇಕ ಸಲ ಓದು ನಿಲ್ಲಿಸುವ ಪರಿಸ್ಥಿತಿ ಬಂದಿತ್ತು. ಓದು ಮುಗಿದ ಮೇಲೆ ಸರ್ಕಾರಿ ಕಾರ್ಖಾನೆಯಲ್ಲಿ ಕೆಲಸ ಸಿಕ್ಕಿತು. ನಿಮ್ಮ ಅಭಿಮಾನಿಯಾದ ನಾನು ಅಲ್ಲಿ ನಡೆಯುತ್ತಿರುವ ಅವ್ಯವಹಾರ ನೋಡಿ ರಾಜೀನಾಮೆ ನೀಡಿದೆ. ನಮ್ಮ ಹಳ್ಳಿಯ ಜನರ ಬಡತನ, ದುಃಸ್ಥಿತಿ ನೋಡಿ ಅಪಾರ ನೋವಾಗುತ್ತದೆ. ನೀವು ಹೇಳುವ ಕನಿಷ್ಠ ಕಾಳಜಿ ಯಾರಲ್ಲೂ ಇಲ್ಲ...." ಇತ್ಯಾದಿಯಾಗಿ ಬರೆದ.

ಈ ಅನೇಕರಿಗೆ ಕನಿಷ್ಠ ಕಾಳಜಿ, ಗರಿಷ್ಠ ಕಾಳಜಿಯ ಬಗ್ಗೆಯಾಗಲಿ ನಿಜವಾದ ನಿಷ್ಠುರತೆಯ ಅರ್ಥವಾಗಲಿ ಗೊತ್ತಿರಲಿಲ್ಲ. ಕೆಟ್ಟದ್ದು ನೋಡಿದೊಡನೆ ಆತ್ಮಹತ್ಯೆ ಮಾಡಿಕೊಳ್ಳುವುದು ಕನಿಷ್ಠ ಕಾಳಜಿಯಲ್ಲ, ಅದು ಮೂರ್ಖತನ. ಕೆಟ್ಟ ಗೊಂದಲದ ಸಮಾಜವೊಂದರಲ್ಲಿ ನಾವೆಲ್ಲ ಚಿಂತಿಸುತ್ತ, ನೆರಗೊಳಿಸುತ್ತ ಸಹಿಸುತ್ತ, ಪ್ರತಿಭಟಿಸುತ್ತಾ ಮುಂದುವರಿಯಬೇಕು. ಮನುಷ್ಯ ಸಮಾಜ ಭ್ರಷ್ಟರಿಗಾಗಿ ಹೇಗೆ ನಿರ್ಮಿತವಾಗಿಲ್ಲವೋ ಹಾಗೆಯೇ ನಿಷ್ಠುರರಿಗಾಗಿ ಕೂಡ ನಿರ್ಮಿತವಾಗಿಲ್ಲ. ಉತ್ತಮ ಜೀವನಕ್ಕೆ, ಸ್ವಾಭಿಮಾನದ, ಸ್ವಾತಂತ್ರ್ಯ ಇಲ್ಲದ ಬದುಕಿಗೆ ಸಹಾಯಕ ಎಂದು ಯೋಚಿಸಿ ಮುನ್ನಡೆಯಬೇಕಾಗುತ್ತದೆ.

ರಾಜೀನಾಮೆ ಕೊಟ್ಟ ಹುಡುಗನನ್ನು ತರಾಟೆಗೆ ತೆಗೆದುಕೊಂಡೆ.

ಭಿನ್ನಮತೀಯರು


ಅಮೆರಿಕದಲ್ಲಿ ಹೆಣ್ಣು-ಗಂಡಿನ ಸಂಬಂಧದ ಬಗ್ಗೆ ದಶಕಗಳಿಂದ ಚರ್ಚಿಸುತ್ತಲೇ ಇದ್ದಾರೆ. ಗಂಡು ಹೇಗೆ ತನ್ನ ಹೆಣ್ಣಿನ ಪ್ರೀತಿಯನ್ನು ಕಾಪಾಡಿಕೊಳ್ಳಬೇಕು, ಹೆಣ್ಣು ಹೇಗೆ ತನ್ನ ಅಂದಚೆಂದ, ಮಾತುಕತೆ, ಮೌನ, ನಡವಳಿಕೆಯಿಂದ ತನ್ನ ಗೆಳೆಯನ ಪ್ರೀತಿ ರಕ್ಷಿಸಿಕೊಳ್ಳಬೇಕು ಎಂಬ ಬಗ್ಗೆ ದೊಡ್ಡ ಗ್ರಂಥಗಳನ್ನು ಬರೆದಿದ್ದಾರೆ. ಸಾವಿರಾರು ವೃತ್ತಪತ್ರಿಕೆಗಳು, ಮ್ಯಾಗಜೀನ್‌ಗಳು ಹಣ ಮಾಡಲು, ವಿಷಯ ಶೋಧಿಸಲು ಹೇಳಿ ಲಾಭ ಗಳಿಸಲು ಪ್ರಯತ್ನಿಸಿವೆ. ಇತ್ತೀಚಿನ ಒಂದು ಪುಸ್ತಕ ಬಿಸಿ ದೋಸೆಗಳಂತೆ ಖರ್ಚಾಗುತ್ತಿದೆ.

ಡಿಬೋರಾ ಟೆನ್ನೆನ್ ಎಂಬ ಹೆಣ್ಣುಮಗಳು ಒಂದು ಪುಸ್ತಕ ಬರೆದಿದ್ದಾಳೆ. ಆ ಪುಸ್ತಕದ ಹೆಸರು "ನಿನಗೆ ಗೊತ್ತಾಗೋಲ್ಲ; ಹೆಣ್ಣು ಗಂಡುಗಳ ಸಂಭಾಷಣೆ."

ಒಬ್ಬಳು ಹುಡುಗಿ ಬಸುರಿಯಾಗಿದ್ದಾಳೆ. ಚೊಚ್ಚಲು ಬಸುರಿ. ಅವಳಿಗೆ ತನ್ನ ಪ್ರೇಮ, ಮದುವೆಯಂತೆಯೇ ತನ್ನ ಗರ್ಭಿಣಿ ಸ್ಥಿತಿ ಬಹುಮುಖ್ಯ; ಜಗತ್ತಿನ ಪವಾಡಗಳಲ್ಲಿ ಇದು ಒಂದು. ಆದರೆ ಆಕೆಯ ಗಂಡನಿಗೆ ಹಾಗಲ್ಲ, ಆತ ನೂರಾರು ಮೈಲಿ ಆಚೆ ಇರುವ ತನ್ನ ತಂದೆಗೆ ಫೋನ್ ಮಾಡಿ ಏನೇನೋ ಮಾತಾಡಿ ತನ್ನ ಪತ್ನಿ ಗರ್ಭಿಣಿಯಾಗಿರುವುದನ್ನು ಹೇಳುವುದನ್ನು ಮರೆಯಲಿದ್ದಾನೆ. ಅಪ್ಪ; "ಮತ್ತೇನು ವಿಶೇಷ? ಹೆಂಡ್ತಿ ಹೇಗಿದ್ದಾಳೆ?" ಎಂದು ಕೇಳಿದಾಗ ಕೊನೆಯ ಮಾತಾಗಿ 'ಆಕೆ ಗರ್ಭಿಣಿ' ಎಂದು ಹೇಳಿ ಫೋನ್ ಇಡುತ್ತಾನೆ.

ಗಂಡು ಮತ್ತು ಹೆಣ್ಣಿನ ವ್ಯತ್ಯಾಸ ಇಲ್ಲಿದೆ. ಗಂಡ ತುಂಬ ಬೇಸರದಲ್ಲಿದ್ದಾನೆ, ಯಾವುದೋ ಕೆಟ್ಟ ವರ್ತಮಾನ ಕೇಳಿದವನಂತೆ ಬೆವರುತ್ತಿದ್ದಾನೆ. ಅವನ ಸ್ಥಿತಿಯನ್ನು ಕಂಡ ಹೆಂಡತಿ, "ಏನಾಯ್ತು? ಯಾಕೆ ಮಂಕಾಗಿದ್ದೀರಿ? ಯಾಕೆ ಬೆವರುತ್ತಿದ್ದೀರಿ?" ಎಂದು ಕೇಳುತ್ತಾಳೆ. "ಬಾಸ್ ಫೋನ್ ಮಾಡಿದ್ದರು" ಎಂದು ಮಾತ್ರ ಹೇಳುತ್ತಾನೆ. ಆಕೆ ಕುತೂಹಲ ತಡೆಯಲಾರದೆ, "ಬಾಸ್ ಏನು ಹೇಳಿದರು? ಏನಾಯ್ತು? ಬೆವರ್ತಾನೇ ಇದ್ದೀರಿ?" ಅನ್ನುತ್ತಾಳೆ. ಅವನು ಬೆವರು ಒರೆಸಿಕೊಂಡು "ನಿನಗೆ ಗೊತ್ತಾಗೋಲ್ಲ, ಸುಮ್ಮಿರು" ಅನ್ನುತ್ತಾನೆ.

ಗಂಡು ಹೆಣ್ಣಿನ ಅನ್ನಿಸಿಕೆ ಮತ್ತು ಮಾತಿನ ಬಗ್ಗೆ ಸಂಶೋಧನೆ ನಡೆಸಿರುವ ಡಿಬೋರಾ ಟೆನ್ನೆನ್ ಅನೇಕ ವಿಚಿತ್ರ ವಿಚಾರ ಹೇಳಿದ್ದಾಳೆ. ಗಂಡಸು ಮತ್ತು ಹೆಂಗಸು ಮೂಲಭೂತವಾಗಿ ಬೇರೆಬೇರೆ ತರಹ. ಹೆಂಗಸಿನ ಭಾವನೆ ಪ್ರೀತಿ, ಅನ್ಯೋನ್ಯತೆ, ನೆಮ್ಮದಿಯ ಸುತ್ತ ಇರುತ್ತದೆ; ಗಂಡಸಿನ ಭಾವನೆ ಕೆಲಸ, ತನ್ನತನ, ಆತ್ಮಪ್ರತ್ಯಯವನ್ನು ಅವಲಂಬಿಸಿರುತ್ತದೆ. ಹೆಣ್ಣು ತಿಳಿಯಲು, ಪ್ರೀತಿಸಲು ಮಾತಾಡುತ್ತಾಳೆ; ಗಂಡು ತನ್ನ ಗಂಡುತನ ಪ್ರದರ್ಶಿಸಲು ಮಾತಾಡುತ್ತಾನೆ. ಒಮ್ಮೆ ತನ್ನ ತಂಗಿಯ ಮದುವೆಗೆಂದು ಒಬ್ಬಳು ಹುಡುಗಿ ತನ್ನ ಗಂಡನ ಜೊತೆಗೆ ಕಾರಿನಲ್ಲಿ ಹೋಗುತ್ತಿದ್ದಾಳೆ. ಆ ತಂಗಿಯ ಊರಿರುವುದು ಪೂರ್ವಕ್ಕೆ, ಕಾರು ಪಶ್ಚಿಮಕ್ಕೆ ಹೋಗುತ್ತಿರುವಂತೆ ಆಕೆಗೆ ಕಾಣುತ್ತದೆ. "ನಾವು ಹೀಗೆ ಹೋಗ್ತಿದ್ದರೆ ಮತ್ತೆ ನಮ್ಮ ಮನೆಗೇ ಹೋಗ್ತೇವೆ" ಅನ್ನುತ್ತಾಳೆ.



"ಹೇಗೆ?" ಅನ್ನುತ್ತಾನೆ.

"ನನ್ನ ತಂಗಿಯ ಊರು ಪೂರ್ವಕ್ಕಿದೆ."

"ನಾವು ಹೋಗ್ತಿರೋದು ಪಶ್ಚಿಮ ಅಂತ ಹೇಗೆ ಹೇಳ್ತಿ?"

"ನಮ್ಮ ಕಣ್ಣೆದುರೇ ಸೂರ್ಯ ಮುಳುಗ್ತಿದೆ."

"ಛೆ! ನಿನಗೆ ಏನೂ ಗೊತ್ತಾಗೋಲ್ಲ, ನಿನಗೆ ನಿಜಕ್ಕೂ ಹಾಗೆನ್ನಿಸಿದ್ದರೆ ಇಳಿದು ನಿನ್ನ ಮೂರ್ಖ ತಂಗಿಯ ಮದುವೆಗೆ ನಡೆದುಕೊಂಡು ಹೋಗು. ನಾನು ಮನೆಗೆ ಹಿಂದಿರುಗ್ತೇನೆ."

ಆಕೆಗೆ ಮದುವೆಗೆ ಹೋಗುವ ಕಾತರ; ಅವನಿಗೆ ಉತ್ತರಿಸಲು ನಿರುತ್ಸಾಹ.

ಗಂಡು ಮತ್ತು ಹೆಣ್ಣು ಎಷ್ಟೆಷ್ಟು ವಿಷಯಗಳಲ್ಲಿ ಭಿನ್ನ ಎಂದು ಯೋಚಿಸಿದರೆ ಆಶ್ಚರ್ಯವಾಗುತ್ತದೆ. ಆಕೆಗೆ ತಾನು ಕೊಳ್ಳುವ ತರಕಾರಿ, ಬಟ್ಟೆ, ದಿನಸಿ ಎಲ್ಲದರ ಬಗ್ಗೆ ಸಮಾಧಾನದ ಆಯ್ಕೆ ಇಷ್ಟ; ಅವನಿಗೆ ಅವೆಲ್ಲದರ ಬಗ್ಗೆ ಅವಸರ. ಆಕೆಗೆ ಕುತೂಹಲ. ಅವನಿಗೆ ಆ ಬಗ್ಗೆ ಅಸಹನೆ. ಆಕೆಗೆ ಖಾಸಗಿ ವಿಷಯವೇ ಇಷ್ಟ. ಅಮೂರ್ತರಲ್ಲಿ ಕೂಡ ಕುತೂಹಲ. ಇದರಿಂದಾಗಿಯೇ ಸದಾ ಛೇಡಿಸುವ, ಕಟಕುವ, nagging ಹೆಂಡತಿಯರ ಉದ್ಭವ. ಆಕೆ ರೇಗಿದಷ್ಟೂ ಅವನಿಗೆ ಅಸಹನೆ, ಪಲಾಯನಕ್ಕೆ ಆತ ಸಿದ್ಧ. ಜಗಳ ಕೂಡ ಆಕೆಗೆ ಇಷ್ಟ. ಅವನಿಗೆ ಬೇಡ.

ನಿಮಗೆ ನೆನಪಿದೆಯೇ? 'ಮೈ ಫೇರ್ ಲೇಡಿ' ನಾಟಕದ ಪ್ರೊಫೆಸರ್ ಹಿಗ್ಗಿನ್ಸ್ ತಮಾಷೆಯಾಗಿ "ಗೆಳೆಯ ಪಿಕರಿಂಗ್, ಈ ಹೆಂಗಸರು ಗಂಡಸರ ತರಹ ಯಾಕಿರೋಲ್ಲ?" ಎಂದು ಕೇಳುತ್ತಾನೆ. ಬೇಂದ್ರೆಯವರ ಸಖೀಗೀತದ ಪತ್ನಿ, "ನೀವು ನಿಮ್ಮ ಗೆಳೆಯರೊಂದಿಗೆ ಮಾತಾಡುವಷ್ಟು ಉತ್ಸಾಹದಿಂದ ನನ್ನೊಂದಿಗೆ ಯಾಕೆ ಮಾತಾಡೋಲ್ಲ?" ಎಂದು ಕೇಳುತ್ತಾಳೆ.

ಇದು ನಿರಂತರ ಘರ್ಷಣೆ, ಭಿನ್ನಮತ. ಈ ಭಿನ್ನಮತೀಯರಾದ, ಭಿನ್ನ ಪ್ರವೃತ್ತಿಯವರಾದ ಇಬ್ಬರು ಹೇಗಾದರೂ ಒಟ್ಟಿಗೆ ಬಾಳಲು ತೀರ್ಮಾನಿಸಿದರು? ಈ ಮದುವೆ, ಕೂಡಿಕೆ, ಕುಟುಂಬಗಳನ್ನು ಯಾವ ರುದ್ರಭೀಕರ ವಿಪರ್ಯಾಸಪ್ರಿಯ ರೂಪಿಸಿದ?

ಇದನ್ನು ಕೇಳುವವಳು ಆ ಪುಸ್ತಕ ಬರೆದ ಹೆಣ್ಣು ಮಗಳು: ಡಿಬೋರಾ ಟೆನ್ನೆನ್.



ತುಂತುರು ಮಳೆಯಂತೆ ಕಾಲ ಆವರಿಸುತ್ತದೆ ನಮ್ಮನ್ನು
ಕೊನೆಯಿಲ್ಲದ ದುಃಖಿ ಈ ಕಾಲ;
ನಿನ್ನ ಮುಖವನ್ನು ಉಪ್ಪು ಮೆತ್ತಿದ ಪುಕ್ಕವೊಂದು ಮೆಲ್ಲಗೆ ಸವರುತ್ತದೆ;
ಸಣ್ಣಗೆ ಜಿನುಗುವ ಝರಿ ನನ್ನ ಮೇಲಂಗಿಯ ಜಗಿಯುತ್ತದೆ.

ನನ್ನೆರಡು ಕೈಗಳ ನಡುವೆ ಕಾಲ ಭೇದ ಮಾಡುವುದಿಲ್ಲ,
ಮುಗ್ಧ ಮಕ್ಕಳ ಗುಂಪಿನಿಂದ ನೀನು ಹೇಗೆ ಬೇರೆಯಲ್ಲವೋ ಹಾಗೆ....
ಮಂಜಲ್ಲಿ ಕರಗುತ್ತ, ಚೂಪು ಕವಲುಗಳಲ್ಲಿ ಬದುಕು ಚಕ್ಕಚಕ್ಕೆಯಾಗಿ ಎಬ್ಬಿಹೋಗುತ್ತದೆ,
ನನ್ನದೇ ಆದ ನಿನ್ನ ಬದುಕಿನ ಪಾದಗಳಡಿಯಲ್ಲಿ.

ನಾನು ನಿನಗೆ ಕೊಟ್ಟ ನನ್ನ ಬದುಕು, ತುಂಬಿ ಬರುತ್ತದೆ
ವರುಷಗಳಲ್ಲಿ ಉಕ್ಕೇರುವ ಹಣ್ಣಿನ ಗೊಂಚಲಿನಂತೆ,
ಕಳಿತ ಫಲ ಮತ್ತೆ ಭೂಮಿಯೆಡೆಗೆ ಮರಳುತ್ತದೆ.

ಇನ್ನೂ ಕಳಕಳಗಿಳಿದು ನೋಡಿದರೆ ಅಲ್ಲಿ ಕಾಲ
ಧೂಳಕಣದ ಮೇಲೆ ಇಲ್ಲದ್ದನ್ನೂ
ಅಳಿಸಿಬಿಡುವ ತವಕದಲಿ
ನಡೆಯುತ್ತ, ಕಾಯುತ್ತ, ಮಳೆಗರೆಯುತ್ತದೆ.

ಮೂಲ: ಪಾಬ್ಲೊ ನೆರೂಡ
ಅನುವಾದ: ಜ.ನಾ. ತೇಜಶ್ರೀ
('ಒನ್ ಹಂಡ್ರೆಡ್ ಲವ್ ಸಾನೆಟ್ಸ್' ಕೃತಿಯಿಂದ)

ದಿನೇಶ್ ಅಮೀನ್ ಮಟ್ಟು ಎಂಬ ವಿಶಿಷ್ಟ ಪತ್ರಕರ್ತ


ಕನ್ನಡ ಪತ್ರಿಕೋದ್ಯಮದಲ್ಲಿ ಈಗ ಚೆಂದವಾಗಿ, ಸೊಗಸಾಗಿ ಬರೆಯುತ್ತಿರುವವರ ಬಗ್ಗೆ ಒಂದು ಸಾರಿ ಮಾತಾಡುತ್ತಿದ್ದಾಗ ಜೊತೆಯಲ್ಲಿದ್ದ ರಹಮತ್ ತರೀಕೆರೆ ಹೇಳಿದ ಹೆಸರು....

ದಿನೇಶ್ ಅಮೀನ್ ಮಟ್ಟು ಅವರದ್ದು.

ಈಗ ಪ್ರಜಾವಾಣಿಯ ದೆಹಲಿ ಪ್ರತಿನಿಧಿಯಾಗಿರುವ ದಿನೇಶ್ ಬಹುಶಃ ಅತೀ ಹೆಚ್ಚು ಓದುಗರನ್ನು ಪಡೆದಿರುವ ಕರ್ನಾಟಕದ ಪತ್ರಕರ್ತರಲ್ಲಿ ಒಬ್ಬರಿರಬಹುದು.

ಕರಾವಳಿ ಮೂಲದ ತುಳು ಮನೆ ಮಾತಿನ ದಿನೇಶರ ಪ್ರತಿ ಸೋಮವಾರದ 'ದೆಹಲಿಯ ನೋಟ' ಕಾಲಂ ಈಗ ಸಾಮಾನ್ಯ ಓದುಗರನ್ನೇ ಅಲ್ಲ, ರಾಜಕಾರಣಿಗಳು ಹಾಗೂ ಕನ್ನಡ ಸಾಹಿತಿ-ಬುದ್ಧಿಜೀವಿಗಳನ್ನು ಸೆಳೆದುಕೊಂಡಿದೆ.

ದಿನಪತ್ರಿಕೆಯ ವರದಿಗಾರಿಕೆಗೆ ಮೊದಲಿಂದಲೂ ಒಂದು ರೀತಿಯ ಜಡತ್ವ ಆವರಿಸಿಕೊಂಡಿದೆ. ವಿನಾಕಾರಣ


ಅಮೀನ್ ಮಟ್ಟು

ನೀರಸವಾಗಿ ಸುದ್ದಿ ಪ್ರಕಟಿಸುವುದು, ನಿರ್ಲಿಪ್ತ ನಿಲುವು ತಳೆಯಬೇಕೆಂಬ ಅತೀ ಎಚ್ಚರದಲ್ಲಿ ಬರಹ ಆಪ್ತಧ್ವನಿ ಕಳೆದುಕೊಳ್ಳುವುದೆಲ್ಲಾ ನಡೆಯುತ್ತಿರುತ್ತದೆ. ಅತೀ ಮುಖ್ಯವಾಗಿ ಸೃಜನಶೀಲತೆಯೇ ನಿರೀಕ್ಷಿಸಲಾಗದ ಕ್ಷೇತ್ರ ಅದು. ಆದರೆ ದಿನೇಶ್ ಈ ಎಲ್ಲಾ ಕೊರತೆಗಳನ್ನು ಮೀರಿ ಜನ ಕಾದು ಓದುವಂಥ ಬರವಣಿಗೆ ಮಾಡುತ್ತಿದ್ದಾರೆ. ಮೊನ್ನೆ ಪ್ರಧಾನಿ ಮನಮೋಹನ್ ಸಿಂಗ್ ವಿಶ್ವಾಸಮತ ಗೆದ್ದ ನಂತರ 'ರಾಜಕಾರಣಿಯಾಗದೆ ರಾಜಕಾರಣ ಮಾಡುವುದೆಂದರೆ ಹೀಗೆ' ಎಂದು ಮನಮೋಹನ್‌ರ ವ್ಯಕ್ತಿತ್ವ ವಿಶ್ಲೇಷಿಸಿ ಒಂದು ಸೊಗಸಾದ ಪೀಸ್ ಬರೆದರು. ಅದಕ್ಕೂ ಮುನ್ನ ಅಣುಒಪ್ಪಂದ ವಿರೋಧಿಸುತ್ತಿದ್ದ ಕಮ್ಯುನಿಸ್ಟ್ ನಾಯಕ ಪ್ರಕಾಶ್ ಕಾರಟ್‌ರನ್ನು ಬಿಜೆಪಿ ಹೊಗಳಿದ್ದನ್ನು ಗೇಲಿ ಮಾಡುತ್ತಾ "ಕಾರಟ್ ಗುಣಗಾನ ಸರಿ, ಬಿಜೆಪಿ ಗುಣ ಏನು" ಎಂದು ಸರೀ ಝಾಡಿಸಿದ್ದರು.

ಜೆಡಿಎಸ್-ಬಿಜೆಪಿ ಅಧಿಕಾರ ಹಸ್ತಾಂತರದ ನಾಟಕ ನಡೆಯುತ್ತಿದ್ದಾಗ ದಿನೇಶ್‌ರ 'ಯಾಯಾತಿ-ಪುರು' ಎಂಬ ತಂದೆ ಮಗನ ನೆನಪಿನಲ್ಲಿ' ಎಂಬ ಹೆಡ್ಡಿಂಗೇ ಥ್ರಿಲ್ಲಿಂಗ್ ಆಗಿತ್ತು.

ದೇವೇಗೌಡರೂ ದಿನೇಶ್ ಅಂಕಣ ತಪ್ಪದೆ ಓದುತ್ತಿದ್ದಾರೆ. ರಾಜ್ಯ ಹಾಗೂ ದೆಹಲಿ ರಾಜಕೀಯದ ಒಳ ಸುಳಿಗಳನ್ನು ಚೆನ್ನಾಗಿ ಗ್ರಹಿಸುತ್ತಿರುವ ದಿನೇಶ್ ಅದನ್ನೇ ಕ್ರಿಯೇಟಿವ್ ಆಗಿ, ಒಳನೋಟ, ಸಿಟ್ಟು, ವ್ಯಂಗ್ಯ ಹರಿತ ಮಾತುಗಳ ಕಾಲಂ ಆಗಿಸಿದ್ದಾರೆ.


ಬಹುಶಃ ವಡ್ಡರ್ಸೆ ರಘುರಾಮ ಶೆಟ್ಟರ ನಂತರ ಕನ್ನಡ ಪತ್ರಿಕೋದ್ಯಮ ನೋಡುತ್ತಿರುವ ವರ್ಣರಂಜಿತ ಬರವಣಿಗೆ ಅಮೀನ್‌ರದ್ದು.

ಈಚ ಬಿಡಿ ಚಿತ್ರಗಳು

ಮೊನ್ನೆ ಲಂಕೇಶ್ ಆಫೀಸಿಗೆ ಬಂದಿದ್ದ ದಾವಣಗೆರೆಯ ಗೆಳೆಯ ಸುಭಾಶ್ಚಂದ್ರ ಒಂದು ಗಂಟೆ ಕಾಲ ನಮ್ಮನ್ನೆಲ್ಲಾ ಚೆನ್ನಾಗಿ ನಗಿಸಿದರು. ಬಿ.ಆರ್. ಪಾಟೀಲ್, ಚಂಪಾ, ಜರಗನಹಳ್ಳಿ ಶಿವಶಂಕರ್, ಸುಭಾಶ್ಚಂದ್ರ, ಮರುಳಸಿದ್ದಪ್ಪ-ಇವರೆಲ್ಲಾ ಆಗಾಗ್ಗೆ ಸೇರಿಕೊಂಡು ಸ್ವಲ್ಪ ಚೇಷ್ಟೆಯ ಮಾತಾಡಿಕೊಂಡು ಹೋಗುತ್ತಿರುತ್ತಾರಂತೆ.

ಆದರಲ್ಲಿ ನೆನಪಾಗುತ್ತಿರುವ ಒಂದೆರಡು ತಮಾಷೆ ಮಾತು ಇಲ್ಲಿದೆ.


ಎರಡು ನಿಮಿಷದ ಮೌನಾಚರಣೆ



ಈ ಗ್ಯಾಂಗ್ ಒಂದು ಸಾರಿ ಕೂತು ಮಾತಾಡುತ್ತಿದ್ದಾಗ ಎಂ.ಪಿ. ಪ್ರಕಾಶ್ ವಿಚಾರ ಬಂದಿದೆ. ಆಗ ಚಂಪಾ ತಕ್ಷಣ 'ಪ್ರಕಾಶ್ ಬಗ್ಗೆ ಮಾತಾಡೊಕೇನಿದೆ, ನಾವೆಲ್ಲಾ ಎರಡು ನಿಮಿಷ ಮೌನಾಚರಣೆ ಮಾಡಿ ಮುಂದಿನ ವಿಚಾರಕ್ಕೆ ಹೋಗೋಣ' ಅಂದರಂತೆ.

ಕರೆಕ್ಟಾಗಿ ಹೇಳಬೇಕೆಂದರೆ ಪ್ರಕಾಶ್ ಈಗ ಎಲ್ಲೂ ಪ್ರಕಾಶಿಸುತ್ತಿಲ್ಲ. ಅದಕ್ಕೆ ಸ್ವಯಂಕೃತ ತಪ್ಪುಗಳು, ದುರಾದೃಷ್ಟ, ಸಂದರ್ಭ ಎಲ್ಲವೂ ಕಾರಣ.

ಪಾಪ ಕಾರ್ಯಕ್ಕೆ ಪುಣ್ಯದ ನೆಲೆ



ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ಅವರ ಅಧಿಕೃತ ಕೆಲಸ ಕಾರ್ಯ, ವಾಸ್ತವ್ಯಕ್ಕೆ ಸರ್ಕಾರಿ ಬಂಗಲೆ ಬಳಸುತ್ತಿದ್ದರು.

ಉಳಿದಂತೆ ಕುಡಿತ, ಹೆಣ್ಣು, ಹರಟೆ, ನೃತ್ಯ ಇತ್ಯಾದಿ ಅವರ ಸಾಂಸ್ಕೃತಿಕ ಚಟುವಟಿಕೆಗಳೆಲ್ಲಾ ಖಾಸಗಿ ಮನೆಯಲ್ಲಿ ನಡೆಯುತ್ತಿದ್ದವು. ಅಂದಹಾಗೆ ಆ ಮನೆ ಹೆಸರು ಮಾತ್ರ ಪುಣ್ಯ...!

ಒಮ್ಮೆ ಈ ಸುಭಾಶ್ಚಂದ್ರ ಸುಮ್ಮನಿರಲಾಗದೆ ಮಹಿಮಾ ಪಟೇಲ್‌ಗೆ "ಬ್ರದರ್, ಅಲ್ಲೇನು ನಡೆಯುತ್ತೆ ಅಂತ ನಿನಗೆ ಗೊತ್ತು ತಾನೆ. ಆ ಮನೆ ಹೆಸರಾದ್ರೂ ಬದಲಾಯಿಸಬಾರದ" ಅಂದರಂತೆ ತಮಾಷೆಗೆ. ಅದಕ್ಕೆ ಮಹಿಮಾ "ಏನು ಬೇಡ ಸುಮ್ನಿರು, ಪಾಪ ಕಾರ್ಯಗಳೆಲ್ಲಾ ನಡೆಯೋದೆ ಪುಣ್ಯದ ಹೆಸರಲ್ಲಿ" ಅನ್ನಬೇಕೆ!

****

ಯಡ್ಡಿ: ಹೃದಯದ ಮಾತು

ಸದಾ ಉರಿಉರಿ ಮುಖದ ಯಡಿಯೂರಪ್ಪ ಇತ್ತೀಚೆಗೆ ತಮ್ಮ ಹೃದಯದ ಬಗ್ಗೆ ಜಾಸ್ತಿ ಯೋಚಿಸುತ್ತಿದ್ದಾರಂತೆ. ಅದನ್ನು ಯಾರೋ ಒಬ್ಬಾಕೆ ನಾಲ್ಕೈದು ವರ್ಷಗಳ ಹಿಂದೆ ಕದ್ದವಳು ಇದುವರೆಗೂ ವಾಪಸ್ ಮಾಡಿಲ್ಲವೆಂಬ ರೂಮರ್‌ಗಳೂ ಇವೆ. ಇನ್ನೂ ಕೆಲವರ ಪ್ರಕಾರ ಯಡ್ಡಿ ತರದವರಿಗೆ ಹೃದಯವಿರಲು ಸಾಧ್ಯವಿಲ್ಲ ಎಂಬುದಾಗಿದೆ. ಅದೇನೆ ಇರಲಿ, ಸದಾ ಉದ್ವೇಗ, ಗಡಿಬಿಡಿಯ ಮನುಷ್ಯ ಯಡ್ಡಿ ಕಳೆದ ವಾರ ಜಯದೇವ ಕಾರ್ಡಿಯಾಲಜಿ ಸೆಂಟರ್‌ಗೆ ಚೆಕಪ್ ಮಾಡಿಸಿಕೊಳ್ಳಲು ಹೋದರಂತೆ. ನಾಲ್ಕೈದು ದಿನ ಕಳೆದ ಮೇಲೆ ಅಲ್ಲಿನ ತಜ್ಞವೈದ್ಯರೊಬ್ಬರು ಎಲ್ಲಾ ರಿಪೋರ್ಟ್ ತಗೊಂಡು ವರದಿ ಕೊಡಲು ಬೆಳ್ಳಂಬೆಳಗ್ಗೆ ಯಡ್ಡಿ ಮನೆಗೆ ಹೋಗಿದ್ದಾರೆ. ಅವರ ಬಳಿಗೆ ಬಿರುಸಾಗಿ ಉದ್ವೇಗದಿಂದ ನಡೆದು ಬಂದ ಯಡ್ಡಿ "ಹೇಳಿ ಡಾಕ್ಟರೆ ನನ್ ಹಾರ್ಟ್ ಹೇಗಿದೆ' ಅಂತ ಕೇಳಿದ್ದಾರೆ. ಅದಕ್ಕೆ ಡಾಕ್ಟರ್ "ಏನು ಪ್ರಾಬ್ಲಂ ಇಲ್ಲಾ ಸಾರ್, ಆದರೆ....' ಅಂತ ಏನೋ ಸಲಹೆ ಕೊಡಲು ಹೊರಟಾಗ "ಆದ್ರೆ, ಗೀದ್ರೆ ಏನೂ ಬೇಡ, ಹಾರ್ಟ್ ಸರಿಯಾಗಿದೆ ತಾನೆ, ಬಿಡಿ" ಎನ್ನುತ್ತಾ ಸೀದಾ ಎದ್ದು ಹೊರಟರಂತೆ.

ಆಗ ಅದರ ಪಕ್ಕದಲ್ಲಿ ಆ ಹೃದಯಚೋರಿಯೂ ಇದ್ದಳಾ ಎಂಬುದು ಗೊತ್ತಾಗಿಲ್ಲ.

ರಾಜರತ್ನಂ ನೆನಪಿನಲ್ಲಿ



ಗುಂಡ್ಳು ಪಂಡಿತ ರಾಜರತ್ನಂ ಹುಟ್ಟಿ ಇಲ್ಲಿಗೆ ನೂರು ವರ್ಷ. ಬೆಂಗಳೂರಿನಲ್ಲಿ ರಾಜರತ್ನಂ ನೆನಪಿನ ಸಭೆಗಳೂ ನಡೆಯುತ್ತಿವೆ. ರಾಜರತ್ನಂರದ್ದು ಎಂಥ ಅಕ್ಕರೆಯ, ನಿಷ್ಠೂರದ, ಜೀವನ ಪ್ರೀತಿಯ ಜೀವ ಎಂಬುದಕ್ಕೆ ಇಲ್ಲಿ ಒಂದೆರಡು ಪ್ರಸಂಗ ನೀಡಿದೆ.

ಭಿಕ್ಷುಕ ಅಂದುಕೊಂಡಿದ್ದೆ - ತೇಜಸ್ವಿ

ಒಂದು ಸಾರಿ ಬಿಳಿಯ ಅಡ್ಡಪಂಚೆ ಹಾಗೂ ಬಿಳಿಯ ಅಂಗಿ, ಮೈಮೇಲೆ ನಸು ಕಂದು ಧೋತ್ರ ಹೊದ್ದವರೊಬ್ಬರು ನಮ್ಮ ಮನೆ ಬಾಗಿಲು ತೆರೆಯಲು ಸಾಹಸ ಪಡುತ್ತಿದ್ದುದನ್ನು ನೋಡಿದೆವು. ಅವರ ಬಗಲಲ್ಲೊಂದು ದೊಡ್ಡ ಜೋಳಿಗೆಯಂಥ ಚೀಲ ಇತ್ತು, ಅವರನ್ನು ನೋಡಿದ ಚೈತ್ರ 'ಮುಂದೆ ಹೋಗಪ್ಪಾ' ಎಂದು ಕೂಗಿದ. ಆಮೇಲೂ ಅವರು ನಿಂತೇ ಇದ್ದುದನ್ನು ನೋಡಿ ನಾವು ಅಣ್ಣನ ಬಳಿ ಓಡಿ 'ಯಾವನೋ ಒಬ್ಬ ಮುಂದೆ ಹೋಗು ಅಂದರೂ ಹೋಗದೇ ನಿಂತೇ ಇದ್ದಾನೆ' ಎಂದು ಚಾಡಿ ಹೇಳಿದೆವು. ಅಣ್ಣ ಹೊರಬಂದು ನೋಡಿದವರೇ ಅವರ ಗುರುತು ಹಿಡಿದು 'ಓಹ್ಹೋ ಬನ್ನಿ ಬನ್ನಿ' ಎಂದೆನ್ನುತ್ತಾ ಅವರೇ ಸರಸರ ಮುಂದುವರೆದು ಗೇಟು ತೆಗೆದು ದಟ್ಟಿ ಪಂಚೆಯ ಮನುಷ್ಯನನ್ನು ಕರೆದುಕೊಂಡು ಬಂದರು. ಮುಂದೆ ಹೋಗು ಎಂದು ಹೇಳಿದ ಮನುಷ್ಯನಿಗೆ ಸಿಕ್ಕ ಮರ್ಯಾದೆಯನ್ನು ನೋಡಿ ನಾವು ಅಪ್ರತಿಭರಾಗಿ ನಿಂತಿದ್ದೆವು. ಬಂದಾತ 'ಏನು ಪುಟ್ಟಪ್ಪಾ! ಮನೆಗೆ ಬಂದವರನ್ನೆಲ್ಲಾ ಮುಂದೆ ಕಳಿಸಿಬಿಡಿ ಎಂದು ಹೇಳಿದ್ದೀರಾ?' ಎಂದು ತಮಾಷೆಯಾಗಿ ಕೇಳಿದರು. ಆದಕ್ಕೆ ಅಣ್ಣ ನಮ್ಮ ಕಡೆ ತಿರುಗಿ 'ಇವರು ಯಾರು ಗೊತ್ತಾ?' ಎಂದು ಕೇಳಿದರು. 'ನಮಗೇನು ಗೊತ್ತು, ನಮಗೆ ಗೊತ್ತಿದ್ದರೆ ನಾವ್ಯಾಕೆ ಮುಂದೆ ಹೋಗು ಎಂದು ಹೇಳುತ್ತಿದ್ದೆವು' ಎಂದೆವು. ನಮ್ಮ ಪಿಳಿಪಿಳಿ ಕಣ್ಣುಗಳನ್ನು ನೋಡಿ 'ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ, ಇವರೇ ಅದನ್ನು ಬರೆದವರು' ಎಂದರು.

ಅವರೇ ರಾಜರತ್ನಂ! ನಾವು ಆವರೆಗೆ ಕವಿತೆಗಳು ಸಹ ಹುಡುಗರು, ಮಕ್ಕಳು, ಮರಗಿಡ ಇರುವಂತೆ ಪ್ರಪಂಚದಲ್ಲಿರುವ ವಸ್ತುಗಳು ಎಂದು ತಿಳಿದಿದ್ದವರು. ಕವಿತೆಗಳನ್ನು ಕವಿಗಳು ಬರೆಯುತ್ತಾರೆ ಎಂದು ತಿಳಿದಿದ್ದೇ ಆವತ್ತು. ಆಮೇಲಿಂದ ನಾವು ಕವಿತೆ ಓದುವಾಗಲೆಲ್ಲಾ ಅದು ಮುಗಿದ ಮೇಲೆ, ಕೆಳಗೆ ಕೊಟ್ಟಿರುವ ಕವಿಯ ಹೆಸರನ್ನೂ ಬಾಯಿಪಾಠ ಮಾಡಿಕೊಂಡು ಕಿರುಚುತ್ತಿದ್ದೆವು. ರಾಜರತ್ನಂ ಆಮೇಲೆ ಯಾವಾಗಲಾದರೂ ಮನೆಗೆ ಬಂದಾಗ ನಮ್ಮನ್ನು ಕಂಡರೆ 'ಏನಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?' ಎಂದು ತಮಾಷೆ ಮಾಡುತ್ತಿದ್ದರು.

ಕಾಪಿ ಕ್ಯಾಟ್ - ಲತಾ, ರಾಜರತ್ನಂ ಮಗಳು

ಚಿಕ್ಕವಳಾಗಿದ್ದಾಗ ನಾನು ನನ್ನ ಪಾಡಿಗೆ ಏನಾದರೂ ಬರೆಯುತ್ತಿದ್ದೆ. ಅವುಗಳನ್ನು ಮುಂದೆ ಎಂದಾದರೂ ಪ್ರಕಟಿಸಿ ತಂದೆಯಂತೆಯೇ ಪ್ರಸಿದ್ಧಿಯನ್ನು ಪಡೆಯುವ ಕನಸು ಕಾಣುತ್ತಿದ್ದೆ. ತಂದೆಯವರನ್ನು ಕಾಪಿ ಮಾಡುವವ (copy cat)ರೆಂದು ಕರೆದು ಒಮ್ಮೆ ಸಣ್ಣ ಲೇಖನ ಬರೆದಿದ್ದೆ. ತಂದೆಯವರು ಮೇಜಿನ ಮೇಲೆ ಹತ್ತಾರು ಪುಸ್ತಕಗಳನ್ನು ಹರಡಿಕೊಂಡು ಬರೆಯುವುದನ್ನು ನೋಡಿದ್ದೆ. ಅವುಗಳಿಂದ ಸ್ವಲ್ಪಸ್ವಲ್ಪ ಪ್ರತಿಮಾಡಿ ಅವನ್ನೇ ಪತ್ರಿಕೆಗಳಿಗೆ ಕಳುಹಿಸಿ ಹಣಗಳಿಸುತ್ತಾರೆ ಎಂದುಕೊಂಡಿದ್ದೆ. ಪ್ರಕಾಶಕರೇ ಈ ಕಾಪಿ ಕೆಲಸವನ್ನು ಮಾಡಿದರೆ ಅವರಿಗೆ ಉಳಿತಾಯವಾಗುವುದಲ್ಲವೇ ಎಂದು ಪ್ರಶ್ನಿಸಿಯೂ ಇದ್ದೆ. ತಂದೆಯವರು ಈ ಬರಹವನ್ನು ಕಂಡು, ಖುಷಿಯಾಗಿ, ಅದನ್ನು ತಮ್ಮದೊಂದು ಪುಸ್ತಕದಲ್ಲಿ ಸೇರಿಸಿ ಪ್ರಕಟಿಸಿಬಿಟ್ಟರು! ಬುದ್ಧಿ ಬಂದಮೇಲೆ ನನ್ನ ತಪ್ಪಿನ ಅರಿವಾಯಿತು. ತಂದೆಯವರು ತುಂಬ ಓದಿಕೊಂಡವರು; ಹಾಗೆ ಓದಿದ್ದನ್ನು ಅವಶ್ಯ ಸಂದರ್ಭದಲ್ಲಿ ಬಳಸಿಕೊಳ್ಳುತ್ತಾರೆ ಎಂಬುದು ಮುಂದೆ ಗೊತ್ತಾಯಿತು.

(ಕನ್ನಡದ ಗರಡಿಯಾಳು ಪುಸ್ತಕದಿಂದ)

ಸಜ್ಜನಿಕೆ, ದುರ್ಜನಿಕೆಯನ್ನು ಅಳೆಯುವ ಮಾನಕ ಉಂಟೇ?

ಭಾರತದಲ್ಲಿ ಮೇಲರಿಮೆಯುಳ್ಳ ವ್ಯಕ್ತಿಗಳು ಹಬ್ಬಿಸಿರುವಂತಹ ಕುರುಡು ನಂಬಿಕೆಯನ್ನೇ ಶ್ರೀಯುತ ಹೆಗ್ಗಡೆಯವರು ಪುನರುಚ್ಚರಿಸಿದ್ದಾರೆ. ಜನರ ವೇಷ ಭೂಷಣ, ಬಣ್ಣ, ಪರ್ಸನಾಲಿಟಿಗಳನ್ನು ನೋಡಿ ಅವರ ವ್ಯಕ್ತಿತ್ವವನ್ನು ಅಳೆಯುವಂತಹ ಜನರು ನಾವು. ಅದನ್ನೇ ಇಲ್ಲಿ ಆಹಾರ ಪದ್ಧತಿಗೂ ತಳಕು ಹಾಕಲಾಗಿದೆಯಷ್ಟೇ.

ಬಹುಶಃ ವೇಣೂರಿನ ಮಸ್ತಕಾಭಿಷೇಕದಲ್ಲಿರಬೇಕು. ಜೈನ ತೀರ್ಥಂಕರ ಮಹಾವೀರನ ಅಹಿಂಸೆ ಸಾರುವ ವಿದ್ಯಾರ್ಥಿಗಳ stall ಒಂದಕ್ಕೆ ಹೋಗಿದ್ದೆ. ತೆರೇಸಾ, ಮಹಾವೀರ ಮುಂತಾದವರ ಚಿತ್ರಗಳನ್ನಂಟಿಸಿ "ಸಸ್ಯಾಹಾರಿಗಳಾದ ಇವರೆಲ್ಲ ಸಾತ್ವಿಕರು" ಎಂದು ಅಲ್ಲಿ ಅವರು ಬಂದವರಿಗೆಲ್ಲ ಹೇಳುತ್ತಿದ್ದರು. ನಾನು ಅವರಿಗೆ "ನೀವಿಲ್ಲಿ ತೋರಿಸಿದಂತೆ ತೆರೇಸಾ ಸಸ್ಯಾಹಾರಿ ಅಲ್ಲ, ಮಾಂಸಾಹಾರಿ. ಬುದ್ಧನೂ ಕೂಡ ಮಾಂಸಾಹಾರಿ" ಎಂದೆ. ಜೊತೆಗೆ "ಲಕ್ಷಾಂತರ ಜನರನ್ನು ಕೊಂದ ಯಹೂದಿಗಳಿಗೆ ಚಿತ್ರಹಿಂಸೆ ನೀಡಿ ಖುಷಿಪಟ್ಟ ಹಿಟ್ಲರ್ ಮಹಾಶಯನನ್ನು ಈ ಸಸ್ಯಾಹಾರಿಗಳ ಪಟ್ಟಿಯಲ್ಲಿ ಸೇರಿಸಿಲ್ಲ ಯಾಕೆ?" ಎಂದೆ.(ಆತ ಅಪ್ಪಟ ಸಸ್ಯಾಹಾರಿ ಅಲ್ಲದೇ ಶಿಸ್ತಿನ ಮನುಷ್ಯನಾಗಿದ್ದ). ತನ್ನೀಮಾತು ಅವರಿಗೆಷ್ಟು ಅರ್ಥವಾಯಿತೋ ಅಲ್ಲಿದ್ದ ಯಾರೊಬ್ಬರಿಂದಲೂ ಉತ್ತರ ಬರಲೇ ಇಲ್ಲ.

ಜೈನರ ಮಹಾವೀರನ ಸಮಕಾಲೀನನಾಗಿ ಅಹಿಂಸಾ ತತ್ವದಲ್ಲಿ ಆತನಿಗಿಂತಲೂ ಜಗದ್ವಿಖ್ಯಾತನಾದ ಬುದ್ಧನೇ ಈ 'ಸಜ್ಜನಿಕೆ-ದುರ್ಜನಿಕೆ'ಗಳ ಕುರಿತು ಹೀಗಂದಿದ್ದಾನೆ: "ಪೂರ್ತಿ ಸಜ್ಜನ-ಪೂರ್ತಿ ದುರ್ಜನ ಎಂಬುದು ನನ್ನನ್ನೊಳಗೊಂದು ಎಲ್ಲೂ ಇಲ್ಲ, ನನ್ನನ್ನುಕೊಂಡಾಡುವ ಸಲುವಾಗಿ ಯಾವುದೋ ಒಂದು ವರ್ಗಕ್ಕೆ ನನ್ನನ್ನು ಸೇರಿಸಿದರೆ ಅವರು ನನ್ನ ಬಗ್ಗೆ ಸುಳ್ಳನ್ನು ನುಡಿಯುತ್ತಿದ್ದಾರೆಂದೇ ಅರ್ಥ" ಹೌದು. ಮುಖ್ಯವಾಗಿ ಜನರ ವ್ಯಕ್ತಿತ್ವ ಆತ ಬೆಳೆದು ಬಂದ ಪರಿಸರದ ಪ್ರಭಾವ ಹಾಗೂ ಎದುರಾಗುವ ಸಾಂದರ್ಭಿಕ ಸನ್ನಿವೇಶಗಳ ಪ್ರಭಾವಗಳನ್ನನುಸರಿಸಿ ಇರುತ್ತವೆಯೇ ವಿನಃ ಯಾವುದೋ ಕಾರಣಕ್ಕಾಗಿ ಆತ ಅಂತವನೇ ಎಂದು ಮೊದಲೇ ನಿರ್ಧರಿತಗೊಂಡಿರದು. ಸಾತ್ವಿಕ ಸಸ್ಯಾಹಾರಿಗಳೆನಿಸಿಕೊಂಡವರು ಮಾಡುವಂತಹ ವಂಚಕತನಗಳು ನಮ್ಮ ಕಣ್ಣೆದುರು ಸದಾ ಸಿಗುತ್ತವೆ. ಅದೇ ರೀತಿ ದುಷ್ಟನೆಂದೇ ಪ್ರತಿಬಿಂಬಿಸಲ್ಪಟ್ಟವನೊಬ್ಬ ಜೀವದ ಹಂಗು ತೊರೆದು ತನ್ನ ಕಡುವೈರಿಗೆ ಸಂಬಂಧಿಸಿದವನೊಬ್ಬನನ್ನು ರಕ್ಷಿಸಿದಂತಹ ಸಂಗತಿಗಳೂ ಸಿಗುತ್ತವೆ. ಒಟ್ಟಾರೆ ಮಾನವ ಸಹಜವಾಗಿ ಪ್ರತಿಯೊಬ್ಬರೂ ಸಂದರ್ಭಕ್ಕೆ ತಕ್ಕಂತೆ ವ್ಯವಹರಿಸುತ್ತಾರೆಯೇ ಹೊರತು ಅದನ್ನು ಬಿಟ್ಟು ಆತ ತಿಂದು ಜೀರ್ಣಿಸಿ, ಹೊರಹಾಕಿದಂತಹ ಆಹಾರದ ಆಧಾರದ ಮೇಲೆ ಆತನ ಸ್ವಭಾವವನ್ನು ನಿರ್ಧರಿಸುವುದು ಮೇಲರಿಮೆ (superiority complex) ಇರುವಂತ ವ್ಯಕ್ತಿಗಳಿಗಷ್ಟೇ ಸಾಧ್ಯ.

-ರವಿ ಪುತ್ತೂರ, ಪುತ್ತೂರು

ಆಗಸ್ಟ್ 6 ರ ಸಂಚಿಕೆಯಲ್ಲಿ ಗೌರಿ ಲಂಕೇಶ್ ತಮ್ಮ 'ಕಂಡಹಾಗೆ' ಸಂಪಾದಕೀಯದಲ್ಲಿ ನ್ಯಾಷನಲ್ ಕಾನ್ಫರೆನ್ಸಿನ ಒಮರ್ ಅಬ್ದುಲ್ಲಾ ವಿಶ್ವಾಸ ಮತಯಾಚನೆ ಸಂದರ್ಭ ಸಂಸತ್ತಿನಲ್ಲಿ ಮಾಡಿದ ಸತ್ಯನಿಷ್ಠೂರವಾದಿ ಭಾಷಣವನ್ನು ಗುರುತಿಸಿ ದಾಖಲಿಸಿದ್ದೀರಿ. ಜನ ಶಿಕ್ಷಣಕ್ಕಾಗಿ ಪತ್ರಿಕೆ ಹೇಗಿರಬೇಕು ಎಂಬುದಕ್ಕೆ ಗೌರಿ ಲಂಕೇಶ್ ಸಾಕ್ಷಿ ಹೇಳಿದೆ.

ಇದೊಂದು ಮುಸ್ಲಿಮ್ ನಾಯಕನೊಬ್ಬನ ಜಾತ್ಯತೀತ ನಿಲುವು ಎಷ್ಟು ಸ್ಪಷ್ಟ ಎಷ್ಟು ನಿಷ್ಕಲ್ಮಷವಿದೆ? ಎಂಬುದಕ್ಕೆ ಉದಾಹರಣೆಯಾಗಿದೆ.

ಮನುಷ್ಯ ಸತ್ತಮೇಲೆ ಅವನನ್ನು ಹೂತ ಯಾ, ಸುಟ್ಟ ಜಾಗದಲ್ಲಿ ಗೋರಿ ಕಟ್ಟಿ ತುಳಸಿಗಿಡ ನೆಟ್ಟರೆ, ಅದಕ್ಕೆ ಯಾರೂ ನೀರೆರೆಯುವುದಿಲ್ಲ, ದೀಪ ಹಚ್ಚಿ ಪೂಜೆ ಮಾಡುವುದೂ ಇಲ್ಲ. ಮಸೀದಿ ಕೆಡವಿ ಮಂದಿರ ಕಟ್ಟಿದರೂ, ಮಂದಿರ ಕೆಡವಿ ಮಸೀದಿ ಕಟ್ಟಿದರೂ ಅಲ್ಲಿ ಈಶ್ವರ ಅಲ್ಲಾ ತೇರೇನಾಮ್ ಧ್ವನಿಸಲಾರದು! ಸುಬುಕು ಸನ್ಮತಿ ಬೇಡಿಕೆಯೂ ಫಲಿಸದು. ಇಷ್ಟು ಗೊತ್ತಿದ್ದರೆ ಸಾಕು ಯಾವನೂ ಇಲ್ಲಿ ಕೋಮುವಾದಿಯಾಗುವುದಿಲ್ಲ, ಧಾರ್ಮಿಕತೆಯ ಈ ನಿಗೂಢತೆ ಅರಿತ ಕಾರಣವಾದಿ ಆತ್ಮಸಾಕ್ಷಿಯ ಬಲವೇ ಒಮರ್ ಅಬ್ದುಲ್ಲಾರ ಮಾತಿಗೆ ಪ್ರೇರಣೆಯಿರಬೇಕು.


"ನಾನು ಒಬ್ಬ ಮುಸ್ಲಿಮ್ ಮತ್ತು ನಾನು ಒಬ್ಬ ಭಾರತೀಯ. ಈ ಎರಡರ ನಡುವೆ ನನಗೇನೂ ವ್ಯತ್ಯಾಸ ಕಾಣುವುದಿಲ್ಲ." ಯಾವ ಕೋಮುವಾದಿ ಕಣ್ಣಿಗೂ ಈ ತೆರನ ಪ್ರಾಮಾಣಿಕವಾದ ನೇರ ಮಾತುಗಳು ಅರ್ಥವಾಗಲು ಸಾಧ್ಯವಾಗದ ಕಾರಣದಿಂದಲೇ ಬಹುತೇಕ ಮೆರೆದಾಟದ ಪತ್ರಿಕೆಗಳು ಇದನ್ನು ದಾಖಲಿಸಲಿಲ್ಲ, ಅಬ್ದುಲ್ಲಾರ ಈ ಭಾಷಣ ಟಿವಿಯಲ್ಲಿ ಕೇಳಿದ ನಾವೆಲ್ಲರೂ ರೋಮಾಂಚನಗೊಂಡಿದ್ದೇವೆ. ಅವರ ಮಾತುಗಳನ್ನು ಅಕ್ಷರಶಃ ಬಿಡದೆ, ಅಕ್ಷರ ಪೂಜೆ ಎಂಬ ಭಾವದಿಂದ ದಾಖಲಿಸಿದ ಸಂಪಾದಕಿ ಗೌರಿ ಲಂಕೇಶರಿಗೆ ಹಾರ್ದಿಕ ಅಭಿನಂದನೆಗಳು!

-ಕೆ.ಜಿ. ಶೆಟ್ಟಿ, ಮೂಡಬಿದರೆ

ಜುಲೈ 23 ರ 'ಲಂಕೇಶ್' ಸಂಚಿಕೆಯಲ್ಲಿ 'ಪ್ರೀತಿಗೆ ಆರು ಸಾವಿರ ಮೆಟ್ಟಲುಗಳು' ಎಂಬ ಅದ್ಭುತ ಪ್ರೇಮಕತೆ ಬರೆದ ಶಾರದೆ ಅವರಿಗೆ ಅಭಿನಂದನೆಗಳು. ಮನ ಕಲಕುವ, ಮುದಕೊಡುವ ನೈಜ ಪ್ರೇಮಸಂಗತಿ ಕುರಿತು ಇನ್ನಷ್ಟು ಇಂತಹ ಕತೆಗಳು ಪ್ರಕಟಗೊಳ್ಳಲಿ ಎಂದು ಆಶಿಸುತ್ತೇನೆ.

-ಕಿರಣ್, ರಾಮನಗರ

ಜೀನಿಬಿ ಕತೆ



ಯಾವಾಗಲೂ ಇತರರ ವಿರುದ್ಧ ದೂರುತ್ತಿದ್ದ ಶಿಷ್ಯನಿಗೆ ಗುರುಗಳು ಹೀಗೊಂದು ಉಪದೇಶ ನೀಡಿದರು:

"ನಿನಗೆ ಶಾಂತಿ ಮತ್ತು ನೆಮ್ಮದಿ ಬೇಕಿದ್ದರೆ ಇತರರನ್ನು ಪರಿವರ್ತಿಸಲು ಯತ್ನಿಸುವ ಬದಲಾಗಿ ನೀನೇ ನಿನ್ನ ಪ್ರವೃತ್ತಿಯನ್ನು ಬದಲಾಯಿಸಿಕೋ. ಏಕೆಂದರೆ ನಿನ್ನ ರಕ್ಷಣೆಗೆಂದು ಇಡೀ ಜಗತ್ತಿಗೆ ರತ್ನಗಂಬಳಿ ಹಾಸುವ ಬದಲಾಗಿ ನಿನ್ನ ಕಾಲಿಗೆ ಪಾದರಕ್ಷೆಗಳನ್ನು ತೊಡುವುದು ಸುಲಭ."



ಕಮಲ್ ಬಾಲಚಂದರ್ ರಜನಿ

ಸ್ಟಾರ್ ಪುತ್ರಿಯರ ಸಿನಿಮಾ ಸೆಳೆತ

ಇತ್ತೀಚೆಗೆ 'ದಶಾವತಾರಂ' ಚಿತ್ರದ ಮೂಲಕ ಕಮಲ್ ಹಾಸನ್ ಸುದ್ದಿ ಮಾಡಿದ್ದರು. ಈಗ 'ಕುಚೇಲನ್' ಮೂಲಕ ರಜನೀಕಾಂತ್ ಸುದ್ದಿಯಲ್ಲಿದ್ದಾರೆ. ಇದು ಗಮ್ಮತ್ತಿನ ವಿಷಯವೇನಲ್ಲ. ಆದರೆ ಅದಕ್ಕಿಂತ ಹಾಟ್ ಸುದ್ದಿ ಎಂದರೆ ಅವರಿಬ್ಬರ ಸುಂದರ ಪುತ್ರಿಯರೂ ಈಗ ಚಿತ್ರರಂಗಕ್ಕೆ ಕಾಲಿಡುತ್ತಿರುವುದು. ಹೌದು, ಕಮಲ್ ಪುತ್ರಿ ಶ್ರುತಿ ನಟಿಯಾಗಿ ಹಿಂದಿ ಚಿತ್ರರಂಗಕ್ಕೆ ಎಂಟ್ರಿ ಮಾಡುತ್ತಿರುವ ಸಮಯದಲ್ಲೇ ರಜನೀ ಪುತ್ರಿ ಸೌಂದರ್ಯ ನಿರ್ದೇಶಕಿಯಾಗಿ ತಮಿಳು ಚಿತ್ರರಂಗವನ್ನು ಪ್ರವೇಶಿಸುತ್ತಿದ್ದಾಳೆ.

ಹಾಗೆ ನೋಡಿದರೆ, ಎಪ್ಪತ್ತರ ದಶಕದಲ್ಲಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ರಜನೀಕಾಂತ್ ಮತ್ತು ಕಮಲ್‌ರದ್ದು ಅಪರೂಪದ ಜೋಡಿ. ಪ್ರಾರಂಭದಲ್ಲಿ ಕೆ. ಬಾಲಚಂದರ್ ನಿರ್ದೇಶನದ ಬಹಳಷ್ಟು ಸಿನಿಮಾಗಳಲ್ಲಿ ಇಬ್ಬರೂ ಒಟ್ಟಿಗೇ ನಟಿಸಿದಾಗ ಅವರಿಬ್ಬರು ಪಟ್ಟ



ಸೌಂದರ್ಯ ರಜನೀಕಾಂತ್

ಪಾಡು ಅಷ್ಟಿಷ್ಟಲ್ಲ. ಯಾಕೆಂದರೆ ಬಾಲಚಂದರ್ ಎಂಬ ದೂರ್ವಾಸನ ಜೊತೆ ಕೆಲಸ ಮಾಡುವುದು ಅಂದರೆ ಸುಲಭದ ಮಾತಲ್ಲ. ಹಗಲೂ ರಾತ್ರಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ನಟಿಸಬೇಕಿತ್ತಲ್ಲದೆ ಬಿಡುವು ಸಿಕ್ಕಾಗಲೂ ಇವರಿಬ್ಬರಿಗೆ ನಿದ್ರೆ ಮಾಡಲೂ ಬಾಲಚಂದರ್ ಎಂಬ ಪುಣ್ಯಾತ್ಮ ಬಿಡುತ್ತಿರಲಿಲ್ಲವಂತೆ. ಆಗ ವಿಧಿ ಇಲ್ಲದೆ ನಿರ್ದೇಶಕರ ಕಣ್ಣು ತಪ್ಪಿಸಿ ರಜನಿ ಮತ್ತು ಕಮಲ್ ಒಬ್ಬರ ಬೆನ್ನಿಗೆ ಮತ್ತೊಬ್ಬರು ಒರಗಿ ಕುಳಿತು ನಿದ್ರಿಸುತ್ತಿದ್ದರಂತೆ. ಅದನ್ನು ದೂರದಿಂದ ನೋಡಿದ ಬಾಲಚಂದರ್ "ಚಿತ್ರದ ಬಗ್ಗೆ, ತಮ್ಮ ಪಾತ್ರದ ಬಗ್ಗೆ ಏನೋ ಚರ್ಚಿಸುತ್ತಾ ಕುಳಿತಿದ್ದಾರೆ" ಎಂದುಕೊಳ್ಳುತ್ತಿದ್ದರಂತೆ.

ಬಾಲಚಂದರ್‌ರ ಈ ರಾಕ್ಷಸ ಕಿರುಕುಳಕ್ಕೂ ಒಂದು ಕಾರಣವಿತ್ತು. ಅದೇನೆಂದರೆ ತನ್ನ ಬಳಿ ಬಂದಿರುವ ಈ ಹುಡುಗರನ್ನು ಹೇಗಾದರೂ ಮಾಡಿ ಕೀರ್ತಿಯ ಉತ್ತುಂಗಕ್ಕೆ ಕೊಂಡೊಯ್ಯಬೇಕು ಎಂಬ ಪ್ರಾಮಾಣಿಕ ಕಾಳಜಿ ಅವರದ್ದಾಗಿತ್ತು. ಈ ಕಾರಣದಿಂದಲೇ ಇವತ್ತಿಗೂ ರಜನಿ ಮತ್ತು ಕಮಲ್ ಇಬ್ಬರೂ ಬಾಲಚಂದರ್ ಅವರನ್ನು ದೈವಸ್ವರೂಪಿ ವ್ಯಕ್ತಿ ಎಂಬಂತೆ ಕಾಣುತ್ತಾರೆ. ತಮಗೆ ದಾರಿದೀಪವಾದ ಬಾಲಚಂದರ್‌ರನ್ನು ಸದಾ ಆರಾಧಿಸುತ್ತಾರೆ. ಕಾಲಕ್ರಮೇಣ ರಜನೀ ಮಾಸ್ ಹೀರೋ ಆಗಿ ಕಮಲ್ ಕ್ಲಾಸ್ ನಟನಾದರೂ ಅವರ ನಡುವಿನ ಸ್ನೇಹ ಇವತ್ತಿಗೂ ಬಲು ದೊಡ್ಡದು.

ಈಗ ಕಮಲ್ ಮತ್ತು ರಜನಿ, ಇವರಿಬ್ಬರ ಕುಡಿಗಳು ಏಕಕಾಲದಲ್ಲಿ ಚಿತ್ರರಂಗಕ್ಕೆ ಆರಂಗೇಟ್ರಮ್ ಮಾಡುತ್ತಿದ್ದಾರೆ. ರಜನೀ ತಮ್ಮನ್ನು ಇವತ್ತಿಗೂ ನಟನೆಗೆ ಮಾತ್ರ ಮೀಸಲಿಟ್ಟುಕೊಂಡಿದ್ದರೂ ಅವರ ಮಗಳು ಸೌಂದರ್ಯ ನಿರ್ದೇಶಕಿಯಾಗುವ ದಿಕ್ಕಿನಲ್ಲಿ ನಡೆದಿದ್ದಾಳೆ. ತನ್ನ ತಂದೆಯನ್ನೇ ಹಾಕಿಕೊಂಡು ಗ್ರಾಫಿಕ್ಸೇ ಹೆಚ್ಚಾಗಿರುವ 'ಸುಲ್ತಾನ್ ದಿ ವಾರಿಯರ್' ಎಂಬ ಆನಿಮೇಟೆಡ್ ಸಿನಿಮಾವನ್ನು ಸಿದ್ಧಪಡಿಸಿದ್ದಾಳೆ. ಅದರ ಬಜೆಟ್ ಬರೋಬ್ಬರಿ ನೂರು ಕೋಟಿ ರೂಪಾಯಿ ಗಳಾಗಿದ್ದು; ಅದನ್ನು ಮೋಸೆರ್ ಬಿಯರ್ ಎಂಬ ಸಂಸ್ಥೆ ನಿರ್ಮಿಸು ತ್ತಿದೆ.

ನಟನೆ, ನಿರ್ದೇಶನ, ನಿರ್ಮಾಣ ಮತ್ತು ಸಂಭಾಷಣೆ -ಹೀಗೆ ಚಿತ್ರರಂಗದ ವಿವಿಧ ಭಾಗಗಳಲ್ಲಿ ಕೈಯಾಡಿಸಿ ಕಮಲ್ ಸೈ ಅನ್ನಿಸಿಕೊಂಡಿದ್ದಾರೆ. ಆದರೆ ಅವರ ಮಗಳು ಶ್ರುತಿ ಹಾಸನ್ ಅಂತಹದಕ್ಕೆಲ್ಲ ಈಗಲೇ ಕೈಹಾಕದೆ "ನನಗೆ ನಟನೆಯೇ ಸಾಕು" ಎಂದು ಅದನ್ನೇ ಆಯ್ಕೆಮಾಡಿಕೊಂಡಿದ್ದಾಳೆ.

ಲಾಸ್ ಏಂಜಲೀಸ್‌ನ ಮ್ಯೂಸಿಕ್ ಶಾಲೆಯೊಂದರಲ್ಲಿ ಓದಿರುವ ಶ್ರುತಿ ಹಾಸನ್ ಈಗಾಗಲೇ ಹಲವಾರು ಸಂಗೀತ ಆಲ್ಬಂಗಳನ್ನು ಹೊರತಂದಿದ್ದಾಳೆ. ಆಕೆಯ ಮ್ಯೂಜಿಕ್ ಆಲ್ಬಂಗಳಿಗೆ ಅಪ್ಪ ಕಮಲ್ ಹಲವು ಹಾಡುಗಳನ್ನು ಬರೆದಿದ್ದಾರೆ. ತಂದೆಯಂತೆಯೇ ಶ್ರುತಿ ಬಹುಮುಖ ಪ್ರತಿಭೆಯಾಗಿದ್ದು, ಈಗಾಗಲೇ ಒಳ್ಳೆಯ ಗಾಯಕಿ, ಡ್ಯಾನ್ಸರ್ ಮತ್ತು ಬರಹಗಾರ್ತಿ ಎಂದು ಹೆಸರು ಪಡೆದಿದ್ದಾಳೆ. ತಾಯಿ ಸಾರಿಕಾಳ ಬೆಕ್ಕಿನ ಕಣ್ಣುಗಳನ್ನು ಹೊತ್ತಿರುವ ಶ್ರುತಿ ಎಂಬ ಸುಂದರಿಗೆ ಈ ಹಿಂದೆಯೇ ಮಾಧವನ್ ಜೊತೆ ತಮಿಳು ಚಿತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿತ್ತು. ಆದರೆ ಅದ್ಯಾಕೋ ಆ ಚಿತ್ರ ಸೆಟ್ಟೇರಲೇ ಇಲ್ಲ. ಈಗ ಅಮೀರ್‌ಖಾನ್‌ನ ಸಂಬಂಧಿ ಇಮ್ರಾನ್ ಖಾನ್ ಜೊತೆ ನಾಯಕಿಯಾಗಿ ಹಿಂದಿ ಚಿತ್ರದಲ್ಲಿ ಶ್ರುತಿ ನಟಿಸುತ್ತಿದ್ದಾಳೆ.



ಶ್ರುತಿಹಾಸನ್


ರಜನಿ ಮಗಳು ಸೌಂದರ್ಯಾಳಿಗೆ ಹೋಲಿಸಿದರೆ ಶ್ರುತಿ ಬೆಳೆದ ವಾತಾವರಣವೇ ಬೇರೆ. ಗಂಡಹೆಂಡಿರ ನಡುವೆ ಕೂಸು ಬಡವಾಯ್ತು ಎಂಬಂತೆ ಕಮಲ್-ಸಾರಿಕಾ ನಡುವಿನ ದಾಂಪತ್ಯ ಜಗಳದಲ್ಲಿ ಜರ್ಜರಿತಳಾದವಳು ಶ್ರುತಿ. ಈಕೆ ತನ್ನ ತಂದೆ ಕಮಲ್‌ನನ್ನು ಭೇಟಿಯಾದರೆ, ಆತನನ್ನು ಮಾತನಾಡಿಸಿದರೆ ತಾಯಿ ಸಾರಿಕಾಳಿಗೆ ಮಗಳ ಮೇಲೆ ಇನ್ನಿಲ್ಲದಂತ ಕೋಪ. ಮೊನ್ನೆ ಮುಂಬೈನಲ್ಲಿ ನಡೆದ ಶ್ರುತಿಯ ಡ್ಯಾನ್ಸ್ ಶೋಗೆ ಕಮಲ್ ಬಂದ ಎಂಬ ಒಂದೇ ಕಾರಣಕ್ಕೆ ಸಾರೀಕಾ ತನ್ನ ಮಗಳೊಂದಿಗೆ ಮಾತನ್ನೇ ನಿಲ್ಲಿಸಿದ್ದಾಳಂತೆ. ಇಷ್ಟೆಲ್ಲಾ ಕೌಟುಂಬಿಕ ಕಲಹಗಳ ನಡುವೆಯೂ ಮುದ್ದು ಮುಖದ ಶ್ರುತಿ ತನ್ನತನವನ್ನು ಕಾಪಾಡಿಕೊಂಡಿರುವುದು ಆಕೆಯ ಗಟ್ಟಿತನಕ್ಕೆ ಒಂದು ಉದಾಹರಣೆ ಎನ್ನಬಹುದು.

ರಜನಿ ಪುತ್ರಿ ಸೌಂದರ್ಯಳಿಗೆ ಇಂತಹ ಯಾವ ಕೌಟುಂಬಿಕ ತೊಡಕುಗಳೂ ಇಲ್ಲ. ಮಗಳ ಇಚ್ಛೆಯನ್ನು ಅರಿತಿರುವ ಅಪ್ಪ ಅದಕ್ಕೆಲ್ಲಾ ಬೆನ್ನೆಲುಬಾಗಿ ನಿಲ್ಲುವ ಅಮ್ಮ, ಎಲ್ಲಕ್ಕಿಂತ ಮುಖ್ಯವಾಗಿ 'ರಜನಿ ಮಗಳು' ಎಂಬ ದೊಡ್ಡ ಕ್ರೆಡಿಟ್ಟು... ಇದಕ್ಕಿಂತ ಇನ್ನೇನು ಬೇಕು, ಸಾಧಿಸುವ ಹಾದಿಗೆ.

ಏನಾದರೂ ಆಗಲಿ ಪ್ರತಿಭಾವಂತರ ಮಕ್ಕಳಾದ ಇವರಿಬ್ಬರೂ ತಮ್ಮ ವೈಯಕ್ತಿಕ ಪ್ರತಿಭೆಯನ್ನು ಜಗತ್ತಿನ ಮುಂದೆ ಮೆರೆಯಲು ಹೊರಟಿದ್ದಾರೆ. ಈ ಇಬ್ಬರೂ ಹೆಣ್ಣುಮಕ್ಕಳು ತಮ್ಮ ಅಪ್ಪಂದಿರಂತೆ ಬೆಳೆದು ನಿಲ್ಲಲಿ.

■ ಅರುಣ್ ಕುಮಾರ್.ಜಿ

ರೇಖಾ ಎಂಬ ಸ್ವತಂತ್ರ ಹಕ್ಕಿ



ಹಿಂದಿ ಚಿತ್ರರಂಗದ ಜಿಂದಗೀ ಕಾ ರಾಣಿ ರೇಖಾ ಕೂಡಾ ಮಹಾನ್ ತಾರಾ ಜೋಡಿಯ ಮಗಳೇ. ಈಕೆ ಜೆಮಿನಿ ಗಣೇಶನ್ ಮತ್ತು ಪುಷ್ಪವಲ್ಲಿ ಎಂಬ ಅಂದಕಾಲತ್ತಿಲ್ ನಟನಟಿಯರ ಮಗಳು. ಆದರೆ ಆಕೆ ಎಂದಿಗೂ ತನ್ನ ತಂದೆ ಮತ್ತು ತಾಯಿಯ ಅಂಕೆಗೆ ನಿಲುಕಿದವಳಲ್ಲ. ಕಮಲ್‌ನಂತೆಯೇ ಜೆಮಿನಿ ಗಣೇಶನ್ ಕೂಡ 'ರಸಿಕ'. ಅದನ್ನು ಸಾಬೀತುಪಡಿಸಲು ಎಂಬಂತೆ ಜೆಮಿನಿ ಗಣೇಶನ್ ಮದುವೆಯಾಗಿದ್ದು ಒಬ್ಬಿಬ್ಬರನ್ನಲ್ಲ ಬದಲಾಗಿ ಐವರನ್ನು!

ತಂದೆಯ ಅತಿಯಾದ ಅಫೇರ್‌ಗಳಿಂದ ಬೇಸತ್ತ ರೇಖಾ ಹಿಂದಿ ಚಿತ್ರರಂಗದಲ್ಲಿ ಯಶಸ್ಸು ಕಂಡಳು. ಅನಂತರ ಅವಳ ಗಮನ ಸೆಳೆಯಲು ತಂದೆ ಜೆಮಿನಿ ಗಣೇಶನ್ ಏನೇ ತಿಪ್ಪರಲಾಗ ಹಾಕಿದರೂ ಕೊನೆಯವರೆಗೂ ಆಕೆ ಆತನ ಬಳಿ ಸುಳಿಯಲಿಲ್ಲ. ಆತ ಜೀವ ಬಿಟ್ಟಾಗಲೂ ಆತನ ಅಂತಿಮ ದರ್ಶನಕ್ಕೆಂದು ಆಕೆ ಧಾವಿಸಲಿಲ್ಲ. ತನ್ನಪ್ಪನ ಮೇಲೆ ಆಕೆಗೆ ಅದೆಂಥಾ ಸಿಟ್ಟು ಸೆಡವುಗಳಿದ್ದವೋ ಏನೋ.

ಅಷ್ಟರಮಟ್ಟಿಗೆ ಶ್ರುತಿ ಹಾಗೂ ಸೌಂದರ್ಯ ತಂದೆ-ತಾಯಿಯರ ಪ್ರೀತಿ ಗಳಿಸುವಲ್ಲಿ ಅದೃಷ್ಟವಂತರೇ ಸರಿ..

ಚುಂಬಕ 'ತಾರಾ'ಳ ಎಮ್ಮೆಮ್ಮೆಸ್ ಅವಾಂತರ



ಈ ಹಿಂದೆ ಜ್ಯೋತಿಕಾ, ನಮಿತಾ, ತ್ರಿಶಾ ಎಂಬ ನಟಿಯರಿಗೆ ಗುಮ್ಮನಂತೆ ಕಾಡಿದ್ದ ನಕಲಿ ಎಂಎಂಎಸ್ ಭೂತ ಈ ಬಾರಿ ರಜನೀಕಾಂತ್‌ರ 'ಚಂದ್ರಮುಖಿ' ಹಾಗೂ ಮೊನ್ನೆ ತಾನೆ ಬಿಡುಗಡೆಯಾಗಿರುವ 'ಕುಚೇಲನ್' ಚಿತ್ರದಲ್ಲೂ ನಟಿಸಿರುವ ನಯನ್‌ತಾರಾಳ ಹೆಗಲೇರಿದೆ.

ಈಕೆ ತಮಿಳು ನಟ ಸಿಂಬು ಜೊತೆ ತುಟಿಗೆ ತುಟಿ ಸೇರಿಸಿ ಚುಂಬಿಸುವ ದೃಶ್ಯಗಳ ಎಂಎಂಎಸ್‌ಗಳು ಪಡ್ಡೆ ಪೋಕರಿಗಳ ಮೊಬೈಲ್‌ಗಳಲ್ಲಿ ಮತ್ತು ಇಂಟರ್‌ನೆಟ್‌ನ ಯೂ-ಟ್ಯೂಬ್‌ನಲ್ಲಿ ರಾರಾಜಿಸುತ್ತಿವೆ.

ಇದರಿಂದ ಭಯಂಕರ ಅಪ್ಸೆಟ್ ಆಗಿರುವ ನಯನ್‌ತಾರಾ ಇದು ನಕಲಿ ಎಂಎಂಎಸ್ ಎಂದು ಆರೋಪಿಸಿ ಪೊಲೀಸರಿಗೆ ದೂರು ನೀಡಿದ್ದಾಳೆ.

ಅಸಲಿಯೋ, ನಕಲಿಯೋ... ಆದರೆ ನಯನ್‌ತಾರಾಳ ಮರ್ಯಾದೆ ಮಾತ್ರ ಬಿಕರಿಯಾಗಿದೆ!





ತಮಿಳು 'ಕುಚೇಲ' ಮತ್ತು ತೆಲುಗರ 'ಉತ್ಸಾಹ'


ಕಳೆದ ವಾರ ಗಾಂಧಿನಗರದಲ್ಲಿ ಕನ್ನಡ ಚಿತ್ರಗಳಿಗಿಂತ ಪರಭಾಷಾ ಚಿತ್ರಗಳದ್ದೇ ಸುದ್ದಿ.

ವಾರದ ಆರಂಭದಲ್ಲಿ 'ಉಲ್ಲಾಸಂಗಾ ಉತ್ಸಾಹಂಗಾ' ಎಂಬ ತೆಲುಗು ಚಿತ್ರವನ್ನು ಪತ್ರಕರ್ತರಿಗೆ ತೋರಿಸಲಾಯಿತು. ಮರುದಿನ 'ಫೂಂಕ್' ಎಂಬ ಹಿಂದಿ ಚಿತ್ರ ಕುರಿತಂತೆ ಅದರ ನಿರ್ದೇಶಕ ರಾಮ್ ಗೋಪಾಲ್ ವರ್ಮ ಮೊದಲ ಬಾರಿಗೆ ಕನ್ನಡ ಪತ್ರಕರ್ತರೊಂದಿಗೆ ಮನಬಿಚ್ಚಿ ಮಾತನಾಡಿದರು. ವಾರದ ಕೊನೆಯಲ್ಲಿ ಹಲವಾರು ವಾದವಿವಾದಗಳನ್ನು ಕಂಡ ರಜನೀಕಾಂತ್ ಅಭಿನಯದ 'ಕುಚೇಲನ್' ಎಂಬ ತಮಿಳು ಚಿತ್ರ ಬಿಡುಗಡೆಗೊಂಡಿತು.

ಈ ಮೂರು ಚಿತ್ರಗಳ ಭರಾಟೆಯ ನಡುವೆ ಬಿಡುಗಡೆಗೊಂಡ ಏಕಮಾತ್ರ ಕನ್ನಡದ ಚಿತ್ರವೆಂದರೆ, ದೇವರಾಜ್ ಮತ್ತು ಶ್ರುತಿ ಅಭಿನಯದ 'ನಂದಾದೀಪ'.

ಈ ಪರಭಾಷಾ ಚಿತ್ರಗಳ ಭರಾಟೆಯ ನಡುವೆಯೂ ಒಂದು ಸಂತೋಷದ ವಿಷಯವೇನೆಂದರೆ, ತೆಲುಗು ಚಿತ್ರವಾದ 'ಉಲ್ಲಾಸಂಗಾ ಉತ್ಸಾಹಂಗಾ', ಹಿಂದಿಯ 'ಫೂಂಕ್' ಮತ್ತು ತಮಿಳಿನ 'ಕುಚೇಲನ್' ಚಿತ್ರಗಳಲ್ಲಿ ಕನ್ನಡಿಗರೇ ನಾಯಕ ನಟರಾಗಿರುವುದು!

'ಫೂಂಕ್'ನಲ್ಲಿ ಕನ್ನಡದ ಕಿಚ್ಚ ಸುದೀಪ್ ಮುಖ್ಯ ಪಾತ್ರದಲ್ಲಿ ನಟಿಸಿದ್ದರೆ, 'ಕುಚೇಲನ್'ನಲ್ಲಿ ನಮ್ಮ ಮಾಜಿ ಕಂಡಕ್ಟರ್ ಶಿವಾಜಿ ಯಾನೆ ರಜನೀಕಾಂತ್ ನಟಿಸಿದ್ದಾರೆ.



ಹಾಗೆಯೇ 'ಹೃದಯ ಹಾಡಿತು' ಚಿತ್ರದ ನಿರ್ಮಾಪಕ ಸೋಮು ಅವರ ಮಗ ಯಶೋಸಾಗರ್ 'ಉಲ್ಲಾಸಂಗಾ' ಚಿತ್ರದ ನಾಯಕನಟ. ಇದು ಈತ ನಟಿಸಿರುವ ಮೊದಲ ಚಿತ್ರ. ಈ ಚಿತ್ರ ಆಂಧ್ರ ಪ್ರದೇಶದಲ್ಲಿ ಈಗಾಗಲೇ ಬಿರುಗಾಳಿ ಎಬ್ಬಿಸಿದ್ದು ಕನಿಷ್ಠವೆಂದರೂ ಮೂವತ್ತೈದು ಕೋಟಿ ರೂಪಾಯಿ ಲಾಭ ಮಾಡಲಿದೆ ಎಂದು ಅಂದಾಜಿಸಲಾಗಿದೆ.

ವಾಸ್ತವವಾಗಿ ಬೆಂಗಳೂರಿನಲ್ಲೇ ಓದಿ ಬೆಳೆದ ಈ ಹುಡುಗನಿಗಾಗಿ ಚಿತ್ರವೊಂದನ್ನು ನಿರ್ದೇಶಿಸಲು ಸೋಮು ಮತ್ತು ಅವರ ಸಹೋದರ ತ್ಯಾಗರಾಜ್ ನಿರ್ದೇಶಕ ಪ್ರೇಮ್ ಅವರನ್ನು ಅಂಗಲಾಚಿದ್ದರು. ಆದರೆ ಆಗ ಪ್ರೇಮ್ ತಾನೇ ಹೀರೋ ಆಗುವ ಭರಾಟೆಯಲ್ಲಿದ್ದುದರಿಂದ ಆತ ಇದರ ಬಗ್ಗೆ ಗಮನ ಹರಿಸಲಿಲ್ಲ. ಇದರಿಂದ ಕೊನೆಗೂ ಬೇಸತ್ತ ಯಶೋಸಾಗರ್ ತೆಲುಗು ಚಿತ್ರದಲ್ಲಿ ನಟಿಸಲು ಮುಂದಾದ. ಆಗ ಆತನ ತಂದೆ ಸೋಮು ಮಗನಿಗಾಗಿ ಚಿತ್ರ ನಿರ್ಮಿಸಲು ಮುಂದಾದರು.



ಈಗ ಆತ ಆಂಧ್ರದಲ್ಲಿ ಯಶಸ್ಸು ಕಂಡಿದ್ದಾನೆ.

ಈ ಚಿತ್ರದ ಇನ್ನೊಂದು ವಿಶೇಷವೆಂದರೆ, ಅದರಲ್ಲಿ ನಾಯಕಿಯಾಗಿ ನಟಿಸಿರುವ ಸ್ನೇಹಾ ಉಲ್ಲಾಳ್ ಕೂಡಾ ಕನ್ನಡದ ಹುಡುಗಿಯೇ! ಐಶ್ವರ್ಯ ರೈಳ ತದ್ರೂಪಿಯಂತಿರುವ ಈಕೆಯನ್ನು ಮೊದಲು ತಲಾಶ್ ಮಾಡಿ 'ಲಕ್ಕಿ' ಎಂಬ ಹಿಂದಿ ಚಿತ್ರದಲ್ಲಿ ಸಲ್ಮಾನ್ ಖಾನ್ ಚಿತ್ರರಂಗಕ್ಕೆ ಪರಿಚಯಿಸಿದ್ದರು.

ಹೀಗೆ ಕನ್ನಡದ ಪ್ರತಿಭೆಗಳು ಪರಭಾಷಾ ಚಿತ್ರಗಳಲ್ಲಿ ವಿಜೃಂಭಿಸುತ್ತಿರುವುದು ಸಂತೋಷದ ವಿಷಯ. ಕಳೆದ ವಾರ ಪರಭಾಷಾ ಚಿತ್ರಗಳು ಮತ್ತು ಅವಕ್ಕೆ ಸಂಬಂಧಪಟ್ಟ ಗೋಷ್ಠಿಗಳಲ್ಲೇ ಭಾಗವಹಿಸಿದರೂ ಅವುಗಳಲ್ಲಿ ನಮ್ಮ ಮಣ್ಣಿನ ವಾಸನೆಯಿದ್ದದ್ದು ಮುದ ನೀಡಿತ್ತು. ■

ಅವಾರ್ಡು ಆಸೆಯಲ್ಲಿ ಅಣಜಿ!



ಮೊದಲು ಲೈಟ್‌ಬಾಯ್ ಆಗಿದ್ದ, ಆನಂತರ ಕ್ಯಾಮೆರಾಮನ್ ಆದ ಅಣಜಿ ನಾಗರಾಜ್ ಇತ್ತೀಚೆಗೆ ತನ್ನ ಸ್ನೇಹಿತ ದರ್ಶನ್‌ರ ಸಿನಿಮಾಗಳ ನಿರ್ಮಾಪಕನೂ ಆಗಿ ಚೆನ್ನಾಗೇ ಇದ್ದರು. ಆದರೆ ಅವರಿಗೆ 'ಅವಾರ್ಡ್ ಫಿಲಂ ತೆಗೀಬೇಕು' ಅನ್ನೋ ಹುಚ್ಚು ಯಾಕೆ ಬಂತೋ ಗೊತ್ತಿಲ್ಲ. ಮೊನ್ನೆ ತಾನೆ ಬಿಡುಗಡೆಯಾದ ಅವರ ನಿರ್ಮಾಣದ 'ನಂದಾದೀಪ' ಚಿತ್ರದಲ್ಲಿ ದೀಪವೂ ಇಲ್ಲ, (ಆ)ನಂದವೂ ಇಲ್ಲ. ಗುರುರಾಜ ಹೊಸಕೋಟೆ ಅವರ ಹಾಡೊಂದನ್ನು ಆಧರಿಸಿರುವ ತಲೆ-ಬುಡ ಇಲ್ಲದ ಈ ಚಿತ್ರ ನೋಡುಗರ ಮೆದುಳಿಗೆ ಮಾತ್ರ ಮಾಂಜಾ ಹಾಕುವುದಂತೂ ನಿಜ.

ಇಂಥಾ ಚಿತ್ರಕ್ಕೆ ಅದ್ಯಾವ ಪುಣ್ಯಾತ್ಮ ನ್ಯಾಷನಲ್ ಅವಾರ್ಡು ಕೊಡುತ್ತಾನೋ ಅಣಜಿಗೆ ಮಾತ್ರ ತಿಳಿದಿರಬೇಕು.

ದುಡ್ಡು ಬರಲಿ, ನೆಮ್ಮದಿ ಇರಲಿ!



ಜೈಜಗದೇಶ್ ಮತ್ತು ಅವರ ಪತ್ನಿ ವಿಜಯಲಕ್ಷ್ಮಿ ಸಿಂಗ್ ಈಗಾಗಲೇ ತಲಾ ಒಂದೊಂದು ಚಿತ್ರವನ್ನು ನಿರ್ದೇಶಿಸಿ ಕೈ ಸುಟ್ಟುಕೊಂಡಿದ್ದಾರೆ. ಅದರಲ್ಲೂ ವಿಜಯಲಕ್ಷ್ಮಿ ಸಿಂಗ್ ನಿರ್ದೇಶನದ 'ಈ ಬಂಧನ' ಎಂಬ ಅದ್ದೂರಿ ಚಿತ್ರ ನಿರೀಕ್ಷಿಸಿದಷ್ಟು ಬಾಕ್ಸಾಫೀಸಿನಲ್ಲಿ ಯಶಸ್ಸನ್ನು ಕಾಣದಿದ್ದಾಗ ಅವರಿಬ್ಬರೂ ಬೇಸರಪಟ್ಟಿದ್ದರು. ಈಗ ಆ ಹ್ಯಾಂಗೋವರ್‌ನಿಂದ ಹೊರಬಂದು ಅವರಿಬ್ಬರೂ ಹೊಸ ಹುಮ್ಮಸ್ಸಿನಲ್ಲಿ ಹೊಸಬರ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ.



ಶ್ರೀನಗರ ಕಿಟ್ಟಿ ಮತ್ತು 'ಮಿಲನ' ಖ್ಯಾತಿಯ ಪಾರ್ವತಿ ಜೋಡಿಯ 'ಮಳೆ ಬರಲಿ, ಮಂಜು ಇರಲಿ' ಎಂಬ ಚಿತ್ರವನ್ನು ಜೈಜಗದೀಶ್ ನಿರ್ಮಿಸುತ್ತಿದ್ದರೆ ವಿಜಯಲಕ್ಷ್ಮಿ ಸಿಂಗ್ ಅದನ್ನು ನಿರ್ದೇಶಿಸುತ್ತಿದ್ದಾರೆ. ಮಡಿಕೇರಿಯ ಮಂಜಿನ ನಡುವೆ ಕಳೆದ ಭಾನುವಾರ ಚಿತ್ರದ ಮುಹೂರ್ತ ತುಂಬ ಅದ್ದೂರಿಯಾಗಿ ನಡೆಯಿತು.

ಕಳೆದ ಹಲವಾರು ವರ್ಷಗಳಿಂದ ಗೆಲುವಿನ ಮುಖವನ್ನೇ ಕಾಣದ ಈ ದಂಪತಿಗಳಿಗೆ ಈ ಚಿತ್ರ ನೆಮ್ಮದಿ ಮತ್ತು ನಗು ತರುವಂತಾಗಲಿ.....

ಸತ್ಯವ ನುಡಿದ ಸುದೀಪ್



ನೇರ ಮತ್ತು ದಿಟ್ಟ ಮಾತಿಗೆ ಹೆಸರಾದವರು ಸುದೀಪ್. ಅಷ್ಟೇ ಅಲ್ಲ, ಹಣಕ್ಕೋಸ್ಕರ ಹತ್ತು ಹನ್ನೆರಡು ಚಿತ್ರಗಳಿಗೆ ಏಕಕಾಲದಲ್ಲಿ ಸಹಿ ಮಾಡಿ ಶಿಫ್ಟ್‌ಗಳಲ್ಲಿ ಕೆಲಸ ಮಾಡಿದ ನಟನಲ್ಲ, ತನ್ನದೇ ಆದ ಛಾಪನ್ನು ಮೂಡಿಸಿರುವ ಸುದೀಪ್ ಹಿಂದಿ ಚಿತ್ರದಲ್ಲಿ ನಟಿಸಿದ ಬಗ್ಗೆ ಏನಂದರು ಗೊತ್ತೇ?

"ನನಗೆ ಹಿಂದಿಯಲ್ಲಿ ನಟಿಸಲೇಬೇಕು ಎಂಬ ಕ್ರೇಜ್ ಅಂತೂ ಇರಲಿಲ್ಲ. ಹಾಗೇನಾದರೂ ಇದ್ದಲ್ಲಿ ನಾನು ಒಂದು ಪ್ರೇಮ ಕಾವ್ಯದ ಕಥೆಯನ್ನು ಆರಿಸುತ್ತಿದ್ದೆ. ರಾಮ್‌ಗೋಪಾಲ್ ವರ್ಮಾ ನಿರ್ದೇಶನದ 'ಫೂಂಕ್' ಚಿತ್ರ ಮಾಟ, ಮಂತ್ರ ಮತ್ತು ಭಯದ ಚಿತ್ರವಾಗಿದೆ. ಯಾವುದೇ ಒಬ್ಬ ಹೊಸಬ ನಟನಿಗೆ ಇಂತಹ ಚಿತ್ರಗಳು ಲಾಂಚಿಂಗ್ ಪ್ಯಾಡ್ ಆಗಲು ಸಾಧ್ಯವಿಲ್ಲ ಎಂಬುದು ನನಗೆ ಗೊತ್ತು. ನನಗೆ ರಾಮ್‌ಗೋಪಾಲ್ ವರ್ಮಾ ನಿರ್ದೇಶನದಲ್ಲಿ ಕೆಲಸ ಮಾಡಬೇಕು ಎಂಬ ಆಸೆಯಂತೂ ಇದ್ದದ್ದು ನಿಜ. ಆ ಆಸೆ ಈಗ ನೆರವೇರಿದೆ ಎಂಬ ತೃಪ್ತಿ ಇದೆ. ಅವರ ಮಾರ್ಗದರ್ಶನದಲ್ಲಿ ನನ್ನ ಪ್ರತಿಭೆ ಇನ್ನೂ ಹೆಚ್ಚು ಅನಾವರಣಗೊಂಡಿದೆ ಎಂದು ನಂಬಿದ್ದೇನೆ. ಇಷ್ಟು ಮಾತ್ರ ನಾನು ಹೇಳಬಲ್ಲೆನೇ ವಿನಃ ಈ ಚಿತ್ರದಿಂದ ಹಿಂದಿಯಲ್ಲಿ ಸಾಲು ಸಾಲು ಅವಕಾಶಗಳು ಬರುತ್ತವೆ ಎಂಬ ಭ್ರಮೆ ನನಗಿಲ್ಲ" ಎಂದು ಹೇಳಿದರು.

ಸುದೀಪ್ ಮಾತಲ್ಲಿ ಸತ್ಯಾಂಶವಿದೆ. ಯಾಕೆಂದರೆ, ಯಾವ ನಟ ತಾನೆ ಹಾರರ್ ಸಿನಿಮಾದ ಮುಖಾಂತರ ತನ್ನನ್ನು ತಾವು ಪರಿಚಯಿಸಿಕೊಳ್ಳಲು ಇಷ್ಟಪಡುತ್ತಾನೆ? ಇಷ್ಟಕ್ಕೂ ಸುದೀಪ್ ಧೈರ್ಯ ಮತ್ತು ಅಭಿರುಚಿ ಮೆಚ್ಚೋಣ.

ಮೌನ ಮನೋಹರ



ವಿ. ಮನೋಹರ್ ಚಿತ್ರೋದ್ಯಮಕ್ಕೆ ಬಂದು ಸುಮಾರು ಹದಿನೈದು ವರ್ಷಗಳೇ ಸಂದಿವೆ. ಈ ಅವಧಿಯಲ್ಲಿ ಅವರು ಸುಮಾರು ನೂರು ಚಿತ್ರಗಳಿಗೆ ಸಂಗೀತ ಸಂಯೋಜನೆ ನೀಡಿ 'ಸಾವಿರ ಹಾಡುಗಳ ಸರದಾರ' ಎಂದೆನಿಸಿಕೊಂಡಿದ್ದಾರೆ. ಆರಂಭದಲ್ಲಿ ಸ್ವಲ್ಪ ಮಟ್ಟಿಗೆ ಓಕೆ ಅನ್ನಿಸಿಕೊಂಡಿದ್ದ 'ಓ ಮಲ್ಲಿಗೆ' ಮತ್ತು ಆನಂತರ ಸುಖಿತ್ ಫ್ಲಾಪ್ ಆದ 'ಇಂದ್ರ ಧನುಷ್' ಎಂಬ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದ ಮನೋಹರ್ ಆನಂತರ ಸಂಗೀತ ನಿರ್ದೇಶಕರಾಗಿ ಹೆಚ್ಚು ದುಡಿದರು. ಹಲವೊಮ್ಮೆ ಕತೆ, ಚಿತ್ರಕತೆ, ಸಂಭಾಷಣೆ, ಹಾಡು ಎಂದೆಲ್ಲಾ ತಮ್ಮ ಕೈಯಾಡಿಸಿದರು.

ಅವರಿಗೆ ಅಪಾರವಾದ ಹಾಸ್ಯಮನೋಭಾವವಿದ್ದರೂ ಮೂಲತಃ ಅವರು ಮೌನಿ. ಅದಕ್ಕೆ ತಕ್ಕಂತೆ ಅವರು ಮೊನ್ನೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲೂ ಅವರು ಕಡಿಮೆ ಮಾತಾಡಿದರು. ಅಂದು ಅವರು ಹೇಳಿದ್ದು ಇಷ್ಟೇ: "ಫಿಲಂಫೇರ್‌ನವರು ಈ ವರ್ಷದಿಂದ ಗೀತ ಸಾಹಿತ್ಯಕ್ಕೂ ಪ್ರಶಸ್ತಿ ನೀಡಲು ಆರಂಭಿಸಿದ್ದಾರೆ. ಈ ಬಾರಿ 'ಪಲ್ಲಕ್ಕಿ' ಚಿತ್ರದ ಹಾಡಿಗಾಗಿ ನನಗೆ ಪ್ರಶಸ್ತಿ ದೊರಕಿದೆ. ಎಲ್ಲರೂ ಗುಂಡು ಹಾಕಿ ಎಂಜಾಯ್ ಮಾಡೋಣ....."


ಇಂದು ಪತ್ರಿಕಾಗೋಷ್ಠಿ ಕರೆದರೆ ಪತ್ರಕರ್ತರ ತಲೆಯನ್ನು ಕೊರೆಯಲೇಬೇಕು; ಮೈಕು ಹಿಡಿದು ಒಂದು ಗಂಟೆ ಆರ್ಭಟಿಸಲೇಬೇಕು ಎಂದೇ ಬಹಳಷ್ಟು ಜನ ನಂಬಿರುವಾಗ ಮನೋಹರ್ ಅಪವಾದದಂತೆ ಕಾಣಿಸುತ್ತಾರೆ.

ಹಲವಾರು ಕನಸುಗಳೊಂದಿಗೆ ಹೈದರಾಬಾದಿನಿಂದ ಬಾಲಿವುಡ್ಡಿಗೆ ಹಾರಿಹೋಗಿದ್ದ ರಾಮ್‌ಗೋಪಾಲ್ ವರ್ಮಾ ಈಗ ಬಾಲಿವುಡ್‌ನಲ್ಲಿ ಮನೆಮಾತಾಗಿದ್ದಾರೆ. ಶಿಸ್ತು ಮತ್ತು ವೇಗಕ್ಕೆ ಮಾತ್ರವಲ್ಲ, ವ್ಯಾಪಾರೀ ದೃಷ್ಟಿಯಿಂದಲೂ ಅವರ ಸಾಧನೆಯನ್ನು ಮುಂಬೈನವರು ಮೆಚ್ಚಿದ್ದಾರೆ. ಮೊನ್ನೆ ಮೊನ್ನೆ ತೆರೆಕಂಡ 'ಸರ್ಕಾರ್ ರಾಜ್', ಅದಕ್ಕಿಂತ ಮೊದಲು ಬಂದ 'ಶೋಲೆ ಭಾಗ-2' ಮತ್ತು ಇತರೆ ಚಿತ್ರಗಳು ಬಾಕ್ಸಾಫೀಸಿನಲ್ಲಿ ಗೆದ್ದಿರಲಿ, ಸೋತಿರಲಿ, ವರ್ಮಾಗೆ ಮಾತ್ರ ಬೇಡಿಕೆ ಕುಗ್ಗಿಲ್ಲ.

ವರ್ಮಾ ಸ್ಥಾಪಿಸಿರುವ 'ದಿ ಫ್ಯಾಕ್ಟರಿ' ಎಂಬ ಕಂಪನಿ ಅದ್ದೂರಿ ಚಿತ್ರಗಳನ್ನೂ, ಅವುಗಳೊಂದಿಗೆ ಲೋ ಬಜೆಟ್ ಚಿತ್ರಗಳನ್ನೂ ಫ್ಯಾಕ್ಟರಿಯಂತೆಯೇ ನಿರಂತರವಾಗಿ ನಿರ್ಮಿಸುತ್ತಲೇ ಇದೆ. ಮೊನ್ನೆ ನಡೆದ 'ಫೂಂಕ್' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ರಾಮ್‌ಗೋಪಾಲ್ ವರ್ಮಾ ತನ್ನ ಚುರುಕು ಮತ್ತು ಮೊನಚಾದ ಮಾತುಗಳಿಂದ ಪತ್ರಕರ್ತರನ್ನು ರಂಜಿಸಿದರು. ಕನ್ನಡ ನಿರ್ದೇಶಕರ ಮಾಮೂಲಿ ಉತ್ತರ ಮತ್ತು ಮಾತಿನ ಶೈಲಿ ಕೇಳಿ, ಕೇಳಿ ಬೇಸತ್ತಿದ್ದ ಮೀಡಿಯಾದವರು ವರ್ಮರ ಮಾತಿಗೆ ಮನಸೋತರು. ವರ್ಮಾ ಜೊತೆಗೆ ನಡೆದ ಮಾತಿನ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ:

ಪ್ರ: ನಿಮ್ಮನ್ನು ಮದುವೆಯಾಗಲು ಹುಡುಗಿಯರು ಕ್ಯೂನಲ್ಲಿ ನಿಂತಿದ್ದಾರಂತೆ, ಹೌದೇ?

ಉ: ನಾನು ದಡ್ಡನಿರಬಹುದು ಆದರೆ ಖಂಡಿತ ಮೂರ್ಖ ಅಲ್ಲ, ನನ್ನ ಚಿತ್ರ ಸೋಲಬಹುದು, ಆದರೆ ನಿಜಜೀವನದಲ್ಲಿ ನಾನು ಸೋಲುವುದಿಲ್ಲ, (ಪತ್ರಕರ್ತರ ನಗು) ನಿಮಗೆಲ್ಲಾ ಮದುವೆಯಾಗಿದೆ ಎಂದು ನಿಮ್ಮ ಪ್ರತಿಕ್ರಿಯೆಯಿಂದಲೇ ಅರ್ಥವಾಗುತ್ತಿದೆ.....



ಪ್ರ: ನೀವು ನಿಮ್ಮ ರಜಾ ದಿನಗಳನ್ನು ಹೇಗೆ ಕಳೆಯಲು ಇಷ್ಟಪಡುತ್ತೀರಿ?

ಉ: ಕಳೆದ ಇಪ್ಪತ್ತು ವರ್ಷಗಳಿಂದ ನಾನು ಒಂದೇ ಒಂದು ದಿನ ರಜೆಯ ಮಜಾವನ್ನು ಅನುಭವಿಸಿಲ್ಲ.

ಪ್ರ: ಕರಣ್ ಜೋಹರ್ ತರಹ ಸಾಂಸಾರಿಕ ಮತ್ತು ಶ್ರೀಮಂತಿಕೆಯ ವೈಭವದ ಚಿತ್ರ ತಯಾರಿಸಲು ನಿಮ್ಮಿಂದ ಯಾಕೆ ಸಾಧ್ಯವಾಗುತ್ತಿಲ್ಲ?

ಉ: ಅವರು ಹುಟ್ಟುವಾಗಲೇ ಶ್ರೀಮಂತರಾಗಿ ಹುಟ್ಟಿದರು. ಹಾಗಾಗಿ ಅವರು ಇನ್ನಷ್ಟು ಶ್ರೀಮಂತಿಕೆಯನ್ನು ಮತ್ತು ವೈಭವವನ್ನು ಬೆಳ್ಳಿ ಪರದೆಯಲ್ಲಿ ತೋರಿಸುವುದು ಸಹಜ. ಆದರೆ ಸ್ಲಮ್ ಹಿನ್ನೆಲೆಯಲ್ಲಿ ಬೆಳೆದ ಹುಡುಗ ನಾನು. ನನಗೂ ಶ್ರೀಮಂತಿಕೆಗೂ ಸಂಬಂಧವೇ ಇಲ್ಲ, ಹೀಗಾಗಿ ನನ್ನ ಕಥಾವಸ್ತುಗಳೆಲ್ಲಾ ಬಡತನ, ಭಯ, ಆತಂಕ, ರೌಡಿಸಂ ಸುತ್ತಮುತ್ತಲೇ ಇರುತ್ತವೆ.

ಪ್ರ: ನಿಮಗೆ ಕನ್ನಡ ಚಿತ್ರರಂಗದ ಬಗ್ಗೆ ಏನು ಗೊತ್ತು? ಯಾವ ಕನ್ನಡ ಚಿತ್ರ ನೋಡಿದ್ದೀರಿ?

ಉ: ನಾನು ನೋಡಿದ ಏಕೈಕ ಕನ್ನಡ ಚಿತ್ರ ರವಿಚಂದ್ರನ್ ನಿರ್ದೇಶನದ 'ಪ್ರೇಮಲೋಕ'. ಆ ಸಂದರ್ಭದಲ್ಲಿ ನಾಗಾರ್ಜುನನ್ನು ಹಾಕಿಕೊಂಡು 'ಶಿವಾ' ಚಿತ್ರವನ್ನು ನಿರ್ದೇಶಿಸಲು ನಾನು ಓಡಾಡುತ್ತಿದ್ದೆ. ಆಗಲೇ ನಾಗಾರ್ಜುನ್ ಜೊತೆ 'ಪ್ರೇಮಲೋಕ' ನೋಡಿದ್ದು. ಅದಾದ ನಂತರ ಇತ್ತೀಚೆಗೆ ಸುದೀಪ್ ತಾನು ನಟಿಸಿ, ನಿರ್ದೇಶಿಸಿದ 'ಮೈ ಆಟೋಗ್ರಾಫ್' ಚಿತ್ರದ ಸೀಡಿ ಕೊಟ್ಟಿದ್ದರು.

ಪ್ರ: ಹಿಂದಿ ಚಿತ್ರರಂಗ ಮತ್ತು ದಕ್ಷಿಣ ಭಾರತ ಚಿತ್ರರಂಗಕ್ಕೂ ಇರುವ ವ್ಯತ್ಯಾಸವೇನು?

ಉ: ದಕ್ಷಿಣ ಭಾರತೀಯರು ಕ್ರಿಯೇಟಿವ್ ಆಗಿದ್ದಾರೆ. ಆದರೆ ಹಿಂದಿ ಚಿತ್ರರಂಗದವರು ಆದ್ದೂರಿತನ ಮತ್ತು ಸೌಂದರ್ಯಪ್ರಜ್ಞೆ ಉಳ್ಳವರಾಗಿದ್ದಾರೆ. ಇತ್ತೀಚೆಗೆ ದಕ್ಷಿಣ ಭಾರತದವರಂತೆ ಹಿಂದಿಯವರೂ ಪ್ರೊಫೆಷನಲ್ ಮತ್ತು ಶಿಸ್ತಿನ ಸಿಪಾಯಿಗಳಾಗಿದ್ದಾರೆ.

ಪ್ರ: ನೀವು ಕನ್ನಡದಲ್ಲಿ ಎಂದಾದರೂ ಚಿತ್ರವನ್ನು ನಿರ್ದೇಶಿಸುವ ಸಾಧ್ಯತೆ ಇದೆಯೇ?

ಉ: ನನಗೆ ಕನ್ನಡ ಭಾಷೆ ಅರ್ಥವಾಗುವುದಿಲ್ಲ, ಒಂದು ಭಾಷೆಯ ಮೇಲೆ ಹತೋಟಿ ಸಾಧಿಸಿದರೆ ಮಾತ್ರ ನಿರ್ದೇಶನ ಮಾಡಲು ಸಾಧ್ಯ ಎಂದು ನಂಬಿದವನು ನಾನು.

ಪ್ರ: ನಿಮಗೆ ಊರ್ಮಿಳಾ ಮಟೋಂಗರ್ ಥರಾ ಮತ್ತೊಬ್ಬ ನಾಯಕಿಯನ್ನು ಸೃಷ್ಟಿಸಲು ಇನ್ನೂ ಏಕೆ ಸಾಧ್ಯವಾಗಿಲ್ಲ?

ಉ: (ಪ್ರಶ್ನೆ ಆನಂದಿಸಿ ಮುಗುಳ್ನಗುತಾ) ಇಲ್ಲಾ, ಆ ತರಹದ ನಾಯಕಿಯರನ್ನು ಯಾರೂ ಸೃಷ್ಟಿಸಲಾಗುವುದಿಲ್ಲ, ಅವರಾಗಿಯೇ ಸೃಷ್ಟಿಯಾಗುತ್ತಾರೆ.

ಸಂದರ್ಶನ: ಶೆಣೈ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main...